ಜನಶಕ್ತಿ


ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 13 | ಸಂಚಿಕೆ 48 | ನವೆಂಬರ್ 25-ಡಿಸೆಂಬರ್ 1, | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com


ಕರ್ನಾಟಕ ಏಕೀಕರಣಕ್ಕೆ ದ್ರೋಹ ಬಗೆದವರು





ಪಕ್ಷಾಂತರಿಗಳಿಗೆ ಜನತಾ ನ್ಯಾಯಾಲಯದಲ್ಲಿ ಶಿಕ್ಷೆಯಾಗಲಿ





ಸ್ಪರ್ಧಾತ್ಮಕ ಬೆಲೆಗಳು ಎಂಬ ದಾರಿ ತಪ್ಪಿಸುವ ತರ್ಕ

ಚುನಾವಣಾ ಬಾಂಡ್‌ಗಳು ಪ್ರಜಾಪ್ರಭುತ್ವಕ್ಕೆ ಮಾರಕ

“ಖಾಸಗೀಕರಣವನ್ನು ನಿಲ್ಲಿಸಿ–ಸಾರ್ವಜನಿಕ ಆಸ್ತಿಗಳನ್ನು ಉಳಿಸಿ”– ಸಿಪಿಐ(ಎಂ) ಪೊಲಿಟ್‌ಬ್ಯುರೊ ಕರೆ

ವ್ಯಾಪಕ ಖಾಸಗೀಕರಣದ ವಿರುದ್ಧ ಡಿಸೆಂಬರ್‌ನಲ್ಲಿ ಒಂದು ತಿಂಗಳ ಪ್ರತಿಭಟನೆಗಳು, ಸಮಾವೇಶಗಳು, ಚಳುವಳಿಗಳು

ಸಾರ್ವಜನಿಕ ವಲಯವನ್ನು ದೊಡ್ಡ ಪ್ರಮಾಣದಲ್ಲಿ ಖಾಸಗೀಕರಿಸುವುದರ ವಿರುದ್ಧ ಡಿಸೆಂಬರ್ ತಿಂಗಳಿಡೀ ಪ್ರತಿಭಟನೆಗಳು, ಚಳುವಳಿಗಳು ಮತ್ತು ಸಮಾವೇಶಗಳನ್ನು ನಡೆಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಪಕ್ಷದ ಎಲ್ಲ ಘಟಕಗಳಿಗೆ ಕರೆ ನೀಡಿದೆ. ಈ ಒಂದು ತಿಂಗಳ ಚಳುವಳಿ ಜನವರಿ 8, 2020ರ ಅಖಿಲ ಭಾರತ ಮುಷ್ಕರಕ್ಕೆ ಪಕ್ಷದ ಬೆಂಬಲವನ್ನು ವ್ಯಕ್ತಪಡಿಸುವ ರೀತಿಯಲ್ಲಿ ಸಂಪನ್ನಗೊಳ್ಳುತ್ತದೆ ಎಂದು ಅದು ಹೇಳಿದೆ.

ನವಂಬರ್ 16 ಮತ್ತು 17ರಂದು ನವದೆಹಲಿಯಲ್ಲಿ ಸಭೆ ಸೇರಿದ ಪೊಲಿಟ್‌ಬ್ಯುರೊ ಈ ಕರೆಯನ್ನು ನೀಡಿದೆ.

ಮೋದಿ ಸರಕಾರ ಸಾರ್ವಜನಿಕ ವಲಯದ ಒಂದು ದೊಡ್ಡ ಪ್ರಮಾಣದ ಖಾಸಗೀಕರಣಕ್ಕೆ ಕೈಹಾಕಿದೆ. ಇದು ಭಾರತದ ಸ್ವಾವಲಂಬೀ ಆಧಾರವನ್ನು ಧ್ವಂಸ ಮಾಡುವುದಲ್ಲದೆ, ಈ ಸರಕಾರದ ಕಾರ್ಪೊರೇಟ್ ಬಂಟರಿಗೆ ನೇರವಾಗಿ ಪ್ರಯೋಜನಗಳನ್ನು ಕೂಡ ಕೊಡಿಸುತ್ತದೆ. ಇಂತಹ ಖಾಸಗೀಕರಣ ದೇಶದಲ್ಲಿ ಈಗಾಗಲೇ ದೊಡ್ಡ ಪ್ರಮಾಣದಲ್ಲಿ ಏರುತ್ತಿರುವ ನಿರುದ್ಯೋಗವನ್ನು ಮತ್ತಷ್ಟು ಹೆಚ್ಚಿಸುತ್ತದೆ. ಅಲ್ಲದೆ, ಭಾರತೀಯ ಸಮಾಜದ ಅಂಚಿಗೆ ತಳ್ಳಲ್ಪಟ್ಟ ವಿಭಾಗಗಳು ಮೀಸಲಾತಿಯಿಂದ ಪಡೆದಿರುವ ಅಲ್ಪ–ಸ್ವಲ್ಪ ಪ್ರಯೋಜನವನ್ನೂ ಗಂಭೀರವಾಗಿ ಕ್ಷಯಿಸುತ್ತದೆ ಎಂದು ಅದು ಹೇಳಿದೆ.

ಈ ಪೊಲಿಟ್‌ಬ್ಯುರೊ ಸಭೆ ಅಯೋಧ್ಯಾ ವಿವಾದ, ಶಬರಿಮಲೆ ಪರಾಮರ್ಶೆ ಮತ್ತು ರಫೇಲ್ ವ್ಯವಹಾರ ಕುರಿತ ಸುಪ್ರಿಂ ಕೋರ್ಟ್ ತೀರ್ಪುಗಳು, ಜಮ್ಮು ಮತ್ತು ಕಾಶ್ಮೀರದಲ್ಲಿನ ಪರಿಸ್ಥಿತಿ, ದೇಶದಲ್ಲಿನ ಆರ್ಥಿಕ ಸಂಕಟ, ರಾಜ್ಯಗಳಲ್ಲಿ ವಿಧಾನಸಭಾ ಚುನಾವಣೆಗಳು, ಹೊಸ ಶಿಕ್ಷಣ ಧೋರಣೆ ಮತ್ತು ಬೊಲಿವಿಯಾದಲ್ಲಿ ಬಲಪಂಥೀಯ ಕ್ಷಿಪ್ರಕ್ರಾಂತಿಯ ಬಗ್ಗೆಯೂ ಚರ್ಚಿಸಿತು. ಈ ಸಭೆಯ ನಂತರ ಪೊಲಿಟ್‌ಬ್ಯುರೊ ಪ್ರಕಟಿಸಿರುವ ಹೇಳಿಕೆಯ ಉಳಿದ ಅಂಶಗಳನ್ನು ಪುಟ 6ರಲ್ಲಿ ಕೊಡಲಾಗಿದೆ.



ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಪೊಲಿಟ್‌ಬ್ಯುರೊ ಸಭೆಯ ನಂತರ ಪತ್ರಿಕಾಗೋಷ್ಠಿಯಲ್ಲಿ

ಸಾರ್ವಜನಿಕ ವಲಯದ ಖಾಸಗೀಕರಣವನ್ನು ಹಿಂದಕ್ಕೆ ತಳ್ಳಿ – ಸಿಪಿಐ(ಎಂ) ಪೊಲಿಟ್‌ಬ್ಯುರೊ

“ಕಾರ್ಪೊರೇಟ್ ಬಂಟರುಗಳಿಗೆ ಅರ್ಥವ್ಯವಸ್ಥೆಯಲ್ಲಿ ಆಯಕಟ್ಟಿನ ಹತೋಟಿ ಕೊಡಿಸುವ ಹುನ್ನಾರ”

ಅತ್ಯಂತ ಲಾಭದಲ್ಲಿರುವ ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್(ಬಿಪಿಸಿಎಲ್)ನಲ್ಲಿ ಸರಕಾರದ ಪಾಲನ್ನು ಮಾರುವುದಕ್ಕೆ ಕೇಂದ್ರ ಸಂಪುಟದ ಮಂಜೂರಾತಿ ಭಾರತದ ಸಾರ್ವಭೌಮತೆಗೆ ಸಂಪೂರ್ಣ ಹಾನಿಕಾರಕ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ. ಬಿಪಿಸಿಎಲ್ ನೊಂದಿಗೆ ಶಿಪ್ಪಿಂಗ್ ಕಾರ್ಪೊರೇಷನ್ ಆಫ್ ಇಂಡಿಯ ಮತ್ತು ಕಂಟೇನರ್ ಕಾರ್ಪೊರೇಷನ್ ಆಫ್ ಇಂಡಿಯ, ಟಿಹೆಚ್‌ಡಿಸಿಐಎಲ್ ಮತ್ತು ನಾರ್ತ್ ಈಸ್ಟರ್ನ್ ಇಲೆಕ್ಟ್ರಿಕ್ ಪವರ್ ಕಾರ್ಪೊರೇಷನ್ ಈ ನಾಲ್ಕು ಸಾರ್ವಜನಿಕ ವಲಯದ ಘಟಕಗಳನ್ನು ಕೂಡ ಮಾರಾಟಕ್ಕೆ ಇಡಲಾಗುವುದು. ಸರಕಾರ ಈ ಘಟಕಗಳಲ್ಲಿ ತನ್ನ ನಿರ್ವಹಣಾ ಹತೋಟಿಯನ್ನು ಬಿಟ್ಟುಕೊಡುತ್ತದೆಯಂತೆ.

ಮೋದಿ ಸರಕಾರ ಉಕ್ಕು, ಇಂಜಿನಿಯರಿಂಗ್, ಕಟ್ಟಡ ನಿರ್ಮಾಣ, ವಾಯುಯಾನ, ಇಲೆಕ್ಟ್ರಾನಿಕ್ಸ್, ಬಂದರುಗಳು, ರೈಲ್ವೆ, ರಕ್ಷಣಾ ಉತ್ಪಾದನೆ ಮತ್ತು ಇತರ ಕೆಲವು ರಂಗಗಳ 28 ಸಾರ್ವಜನಿಕ ವಲಯದ ಘಟಕಗಳನ್ನು ಒಂದು ವರ್ಷದ ಒಳಗೆ ಖಾಸಗೀಕರಿಸುವುದಕ್ಕೆಂದು ಪಟ್ಟಿ ಮಾಡಿದೆ. ತನ್ನ ದುಂದುವೆಚ್ಚವನ್ನು, ಮುಖ್ಯವಾಗಿ ಪ್ರಚಾರ ಮತ್ತು ಬುರುಡೆಗಳ ವೆಚ್ಚಗಳನ್ನು ಭರಿಸಲು ಈ ಸರಕಾರ ಸಾರ್ವಜನಿಕ ಆಸ್ತಿಗಳನ್ನು ಮಾರಿ 1.10ಲಕ್ಷ ಕೋಟಿ ರೂ.ಗಳನ್ನು ಎತ್ತುವ ಗುರಿ ಇಟ್ಟುಕೊಂಡಿದೆ. ಈ ಪ್ರಕ್ರಿಯೆಯಲ್ಲಿ ಉತ್ಪಾದಕ ಮತ್ತು ಮೌಲ್ಯಗಳನ್ನು ಸೃಷ್ಟಿಸುವ ಸಾರ್ವಜನಿಕ ವಲಯದ ಘಟಕಗಳನ್ನು ತಮ್ಮ ಕಾರ್ಪೊರೇಟ್ ಬಂಟರುಗಳನ್ನು ಭಾರತೀಯ ಅರ್ಥವ್ಯವಸ್ಥೆಯ ಆಯಕಟ್ಟಿನ ಹತೋಟಿ ಹೊಂದುವಂತೆ ಪ್ರಾಯೋಜಿಸಲು ಅವರುಗಳಿಗೆ ಮಾರಲಾಗುತ್ತಿದೆ.

ಇದು ಕುಟುಂಬದ ದೈನಂದಿನ ಖರ್ಚುಗಳನ್ನು ಹೊಂದಿಸಲು ಮನೆಯ ಪಾತ್ರೆ ಪಗಡಗಳನ್ನು ಮಾರುವಂತೆಯೇ ಸರಿ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಿಪಿಸಿಎಲ್‌ನ ಎಲ್ಲ ಕಾರ್ಮಿಕ ಸಂಘಗಳು ಒಟ್ಟಾಗಿ ಕರೆ ನೀಡಿರುವ ನವಂಬರ್ 28ರ ಮುಷ್ಕರಕ್ಕೆ ಬೆಂಬಲ ವ್ಯಕ್ತಪಡಿಸಿದೆ. ಸಿಪಿಐ(ಎಂ) ಈಗಾಗಲೇ ಸಾರ್ವಜನಿಕ ವಲಯದ ಘಟಕಗಳ ಖಾಸಗೀಕರಣದ ವಿರುದ್ಧ ಡಿಸೆಂಬರ್ ತಿಂಗಳಿಡೀ ಪ್ರಚಾರಾಂದೋಲನ ನಡೆಸುವುದಾಗಿ ಪ್ರಕಟಿಸಿದೆ.

ಎನ್.ಆರ್.ಸಿ. ವಿಸ್ತರಣೆ ಬೇಡ: ಸಿಪಿಐ(ಎಂ) ಪೊಲಿಟ್‌ಬ್ಯುರೊ

“ಇದೊಂದು ಕೋಟ್ಯಂತರ ರೂ.ಗಳ ಅನಗತ್ಯ ದುಂದುವೆಚ್ಚದ ಪ್ರಕ್ರಿಯೆ”

ಗೃಹಮಂತ್ರಿ ಅಮಿತ್ ಷಾ ಇಡೀ ದೇಶಕ್ಕೆ ಒಂದು ಎನ್.ಆರ್.ಸಿ. (ರಾಷ್ಟ್ರೀಯ ಪೌರತ್ವ ದಾಖಲೆ) ರಚಿಸಲಾಗುವುದು, ಅದರೊಂದಿಗೆ ಅಸ್ಸಾಂನಲ್ಲಿ ಎನ್.ಆರ್.ಸಿ. ಯನ್ನು ಪುನರಾವರ್ತಿಸಲಾಗುವುದು ಎಂದು ಸಂಸತ್ತಿನಲ್ಲಿ ಪ್ರಕಟಿಸಿರುವ ಹಿನ್ನೆಲೆಯಲ್ಲಿ ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ರೀತಿ ಎನ್.ಆರ್.ಸಿ. ಯನ್ನು ಇಡೀ ದೇಶಕ್ಕೆ ವಿಸ್ತರಿಸಿವುದಕ್ಕೆ ತನ್ನ ವಿರೋಧವನ್ನು ಪುನರುಚ್ಚರಿಸಿದೆ.

ಇದನ್ನು ಯಾವಾಗ ಕೈಗೊಳ್ಳಲಾಗುವುದು ಎಂದು ಅವರು ನಿರ್ದಿಷ್ಟವಾಗಿ ಹೇಳಿಲ್ಲವಾದರೂ, ಈ ಪ್ರಕ್ರಿಯೆ ‘ರಾಷ್ಟ್ರೀಯ ಜನಸಂಖ್ಯಾ ರಿಜಿಸ್ಟರ್’(ಎನ್.ಪಿ.ಆರ್)ಗೆ ಎಪ್ರಿಲ್ 1, 2020ರಿಂದ ಆರಂಭಗೊಳ್ಳುವ ಗಣತಿಯೊಂದಿಗೆ ಶುರುವಾಗಲಿದೆ. ಈ ಎನ್.ಪಿ.ಆರ್. ಆಧಾರದಲ್ಲಿ ಎನ್.ಆರ್.ಸಿ. ಯನ್ನು ಅಂತಿಮಗೊಳಿಸಲಾಗುವುದು.

ಈಗಾಗಲೇ ಆಧಾರ್ ಮತ್ತು ‘ಮತದಾರರ ಫೋಟೋ ಗುರುತು ಪತ್ರ’(ಇಪಿಐಸಿ) ಇರುವಾಗ, ಇದೊಂದು ಅನಗತ್ಯವಾದ, ದುಂದುವೆಚ್ಚದ ಪ್ರಕ್ರಿಯೆ. ಇದು ‘ವಿದೇಶೀಯರು’ ಎಂದು ಹಣೆಪಟ್ಟಿ ಹಚ್ಚಿರುವ ಕೆಲವು ವಿಭಾಗಗಳ ಮೇಲೆ ಗುರಿಯಿಡುವ ಆಳುವ ಪಕ್ಷದ ಅಜೆಂಡಾವನ್ನು ಈಡೇರಿಸಲಿಕ್ಕಾಗಿ ಮಾತ್ರವೇ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಅಸ್ಸಾಂನಲ್ಲಿ ಈ ಪ್ರಕ್ರಿಯೆಯ ಪುನರಾವರ್ತನೆಯನ್ನು ಕೂಡ ಬಲವಾಗಿ ವಿರೋಧಿಸಿದೆ.

ಅಲ್ಲಿ ಎನ್.ಆರ್.ಸಿ. ಪ್ರಕ್ರಿಯೆಯನ್ನು ಸುಪ್ರಿಂ ಕೋರ್ಟಿನ ಉಸ್ತುವಾರಿಯಲ್ಲಿ ಕೈಗೊಳ್ಳಲಾಗಿತ್ತು. ಈ ಇಡೀ ಪ್ರಕ್ರಿಯೆಗೆ 1600 ಕೋಟಿ ರೂ. ವೆಚ್ಚ ಮಾಡಲಾಗಿದೆ. ಈ ಅಗತ್ಯವಾಗಿರುವುದು ಆ ಪಟ್ಟಿಯಿಂದ ಹೊರಗಿಟ್ಟಿರುವ ಭಾರತೀಯ ನಾಗರಿಕರನ್ನು ಆ ಪಟ್ಟಿಯೊಳಕ್ಕೆ ತರುವುದು. ಇನ್ನೊಂದು ಎನ್.ಆರ್.ಸಿ. ಕಸರತ್ತು ಹೊಸ ಹೊರೆಗಳನ್ನು, ಮತ್ತು ವಿವಿಧ ಜನವಿಭಾಗಗಳಲ್ಲಿ ಅಭದ್ರತೆಗಳನ್ನು ಹೇರುತ್ತದೆ. ಇದರಿಂದ ಜನಗಳನ್ನು ಕೋಮು ಆಧಾರದಲ್ಲಿ ಒಡೆಯುವ ಬಿಜೆಪಿಯ ಅಜೆಂಡಾಕ್ಕೆ ಮಾತ್ರವೇ ಪ್ರಯೋಜನ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಕೇಂದ್ರೀಯ ಸಾರ್ವಜನಿಕ ವಲಯದ ಘಟಕಗಳನ್ನು ಖಾಸಗೀಕರಿಸುವ ಸಂಪುಟ ಸಮಿತಿಯ ನಿರ್ಧಾರಕ್ಕೆ ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಖಂಡನೆ

ಅತ್ಯುತ್ತಮವಾಗಿ ನಡೆಯುತ್ತಿರುವ, ನಗದು ತುಂಬಿರುವ ಕೇಂದ್ರೀಯ ಸಾರ್ವಜನಿಕ ವಲಯದ ಘಟಕಗಳನ್ನು ಖಾಸಗೀಕರಿಸುವ ಪ್ರಸಕ್ತ ಸರಕಾರದ ನಿರ್ಧಾರಗಳಿಗೆ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಬಲವಾದ ಪ್ರತಿಭಟನೆ ಮತ್ತು ಅತ್ಯಂತ ಕ್ರೋಧವನ್ನು ವ್ಯಕ್ತಪಡಿಸಿವೆ. ಸರಕಾರ ಪ್ರಕಟಿಸಿರುವ ದಾರಿಗಳೆಂದರೆ ನೇರ ಖಾಸಗೀಕರಣ ಮತ್ತು ಸರಕಾರದ ಹೂಡಿಕೆಗಳನ್ನು 76ಶೇ. ದ ವರೆಗೆ ಹಿಂತೆಗೆದುಕೊಂಡು ಭಾಗಶಃ ಖಾಸಗೀಕರಣ, ವಾಸ್ತವವಾಗಿ ಇದೂ ಪೂರಾ ಖಾಸಗೀಕರಣವೇ. ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿ(ಸಿಸಿಇಎ)ಯ ಈ ನಿರ್ಧಾರದ ಪ್ರಕಾರ ಬಿಪಿಸಿಎಲ್, ಕೋಂಕೋರ್ ಮತ್ತು ಶಿಪ್ಪಿಂಗ್ ಕಾರ್ಪೊರೇಷನ್‌ನ್ನು ಖಾಸಗಿ ಕಂಪನಿಗಳಿಗೆ ಮಾರಲಾಗುವುದು. ಮತ್ತು ನೀಪ್ಕೋ ಮತ್ತು ಟಿಹೆಚ್‌ಡಿಸಿಯನ್ನು ಖರೀದಿಸುವಂತೆ ಎನ್‌ಟಿಪಿಸಿ ಗೆ ಸರಕಾರ ನಿರ್ದೇಶನ ನೀಡುತ್ತದೆ.

ಈ ಕೇಂದ್ರೀಯ ಸಾರ್ವಜನಿಕ ವಲಯದ ಘಟಕಗಳಲ್ಲದೆ, ಖಾಸಗೀಕರಣದ ದಾಳಿಗೆ ಗುರಿಯಾಗಿರುವ ಇತರ ಘಟಕಗಳೆಂದರ ’(ಆವರಣದೊಳಗೆ ಇರುವುದು ಸದ್ಯ ಸರಕಾರದ ಹೂಡಿಕೆಯ ಶೇ.) ಇಂಡಿಯನ್ ಆಯಿಲ್(51.5%), ಎನ್‌ಟಿಪಿಸಿ(54.5%), ಭಾರತ್ ಇಲೆಕ್ಟ್ರಾನಿಕ್ಸ್(58.83%), ಬಿಇಎಂಎಲ್(54.03%), ಇಂಜಿನಿಯರ್ಸ್ ಇಂಡಿಯ(52%), ಗೇಲ್(52.66%) ಮತ್ತು ನ್ಯಾಷನಲ್ ಅಲ್ಯುಮಿನಿಯಂ ಕಂಪನಿ(52%).

ಸರಕಾರ ಇತ್ತೀಚೆಗೆ ಮುಖ್ಯವಾಗಿ ದೊಡ್ಡ ಕಾರ್ಪೊರೇಟ್ ಗುಂಪುಗಳನ್ನು ಆರ್ಥಿಕವಾಗಿ ಪಾರು ಮಾಡುವ ಪ್ಯಾಕೇಜಿಗೆ ದೇಶದ ಖಜಾನೆಯಿಂದ 1.45 ಲಕ್ಷ ಕೋಟಿ ರೂ.ಗಳನ್ನು ಖರ್ಚು ಮಾಡಿದೆ. ಇನ್ನಷ್ಟು ಇಂತಹ ಪ್ಯಾಕೇಜುಗಳ ನಿರೀಕ್ಷೆಯಿದೆ. ಈ ಆದಾಯ ನಷ್ಟಗಳನ್ನು ತುಂಬಿಸಿಕೊಳ್ಳಲು ಅದು ಅಪಾರ ಭೌತಿಕ ಮತ್ತು ಹಣಕಾಸು ಆಸ್ತಿಗಳಿರುವ ಕೇಂದ್ರೀಯ ಸಾರ್ವಜನಿಕ ವಲಯದ ಘಟಕಗಳನ್ನು ಮಾರಲು ಹೊರಟಿದೆ. ಇಂತಹ ಖಾಸಗೀಕರಣದಿಂದ ಸರಕಾರ ಈ ಘಟಕಗಳಿಂದ ಬರುವ ತೆರಿಗೆಗಳು, ಸುಂಕಗಳು ಮತ್ತು ಡಿವಿಡೆಂಡ್‌ಗಳನ್ನು ಕಳಕೊಂಡು ಅಪಾರ ನಷ್ಟ ಅನುಭವಿಸುತ್ತದೆ ಎಂಬ ಸಂಗತಿಯತ್ತ ಸರಕಾರ ಕುರುಡಾಗಿರುವುದು ಆಘಾತಕಾರಿ ಎಂದು ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಹೇಳಿವೆ.

ಆದ್ದರಿಂದ ಸರಕಾರ ಕೇಂದ್ರೀಯ ಸಾರ್ವಜನಿಕ ವಲಯದ ಘಟಕಗಳ ಖಾಸಗೀಕರಣದ ನಿರ್ಣಯಗಳನ್ನು ವಾಪಾಸು ಪಡೆಯಬೇಕು ಎಂದು ಆಗ್ರಹಿಸಿರುವ ಈ ಕಾರ್ಮಿಕ ಸಂಘಟನೆಗಳು ನವಂಬರ್ 28ರಂದು ಬಿಪಿಸಿಎಲ್ ನೌಕರರು ನಡೆಸಲು ನಿರ್ಧರಿಸಿರುವ ಮುಷ್ಕರಕ್ಕೆ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿವೆ. ಈ ನಿಟ್ಟಿನಲ್ಲಿ ಬಿಪಿಸಿಎಲ್ ಕಾರ್ಮಿಕ ಸಂಘಟನೆಗಳು ವಿವಿಧ ಪ್ರಚಾರಾಂದೋಲನಗಳನ್ನು ನಡೆಸುತ್ತಿವೆ.

ಕೇಂದ್ರೀಯ ಸಾರ್ವಜನಿಕ ವಲಯದ ಘಟಕಗಳ ಎಲ್ಲ ಕಾರ್ಮಿಕರು, ತಾವು ಯಾವುದೇ ಸಂಘಕ್ಕೆ ಸೇರಿರಲಿ, ಸರಕಾರದ ಈ ಆಘಾತಕಾರಿ ನಿರ್ಣಯದ ವಿರುದ್ಧ ಪ್ರತಿಭಟನಾ ಕಾರ್ಯಾಚರಣೆಗಳನ್ನು ನಡೆಸಬೇಕು ಎಂದು ಮನವಿ ಮಾಡಿರುವ ಕಾರ್ಮಿಕ ಸಂಘಗಳು, ಸರಕಾರ ಸಾರ್ವಜನಿಕ ವಲಯವನ್ನು ದೇಶದ ಆರ್ಥಿಕ ನಕಾಶೆಯಿಂದಲೇ ಅಳಿಸಿ ಹಾಕಲು ಹತಾಶ ಪ್ರಯತ್ನ ನಡೆಸುತ್ತಿರುವಾಗ ಕೇಂದ್ರೀಯ ಸಾರ್ವಜನಿಕ ಚಲಯದ ಘಟಕಗಳ ಕಾರ್ಮಿಕರ ಐಕ್ಯ ವೇದಿಕೆಯನ್ನು ಮತ್ತೆ ತುರ್ತಾಗಿ ಸಕ್ರಿಯಗೊಳಿಸಬೇಕಾದ್ದು, ಮತ್ತು ಸೂಕ್ತವಾದ ದೇಶವ್ಯಾಪಿ ದೀರ್ಘಕಾಲೀನ ಹೋರಾಟಗಳನ್ನು ರೂಪಿಸುವುದು ಸದ್ಯದ ಆವಶ್ಯಕತೆಯಾಗಿದೆ ಎಂದು ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಹೇಳಿವೆ.

ಐಎನ್‌ಟಿಯುಸಿ, ಎಐಟಿಯುಸಿ, ಹೆಚ್‌ಎಂಎಸ್, ಸಿಐಟಿಯು, ಎಐಯುಟಿಯುಸಿ, ಎಸ್‌ಇಡಬ್ಲ್ಯುಎ, ಎಐಸಿಸಿಟಿಯು, ಯುಟಿಯುಸಿ ಮತ್ತು ಎಲ್‌ಪಿಎಫ್ ಈ ಕುರಿತ ಜಂಟಿ ಹೇಳಿಕೆಗೆ ಸಹಿ ಹಾಕಿವೆ.

ಚುನಾವಣಾ ಬಾಂಡುಗಳನ್ನು ತಕ್ಷಣವೇ ರದ್ದು ಮಾಡಬೇಕು– ಸಿಪಿಐ(ಎಂ)

ಚುನಾವಣಾ ಬಾಂಡುಗಳ ಯೋಜನೆ ಹೇಗೆ ಆಳುವ ಪಕ್ಷಕ್ಕೆ ಹಣಕಾಸು ಒದಗಿಸುವ ಒಂದು ಮಾರ್ಗವಾಗಿದೆ ಎಂಬುದು ಇತ್ತೀಚೆಗೆ ಬಯಲಾಗಿದ್ದು, ಇದು ಈ ರೀತಿ ರಾಜಕೀಯ ಭ್ರಷ್ಟಾಚಾರವನ್ನು ಕಾನೂನು ಬದ್ಧಗೊಳಿಸುವುದು ಕೊನೆಗೊಳ್ಳಲೇ ಬೇಕು ಎಂಬುದನ್ನು ದೃಢ ಪಡಿಸಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಕರ್ನಾಟಕ ವಿಧಾನಸಭಾ ಚುನಾವಣೆಗಳಲ್ಲಿ ಯಾರಿಗೂ ನಿಚ್ಚಳ ಬಹುಮತವಿಲ್ಲದ ಸ್ಥಿತಿ ಏರ್ಪಟ್ಟ ನಂತರ ಬಿಜೆಪಿಯ ಕುದುರೆ ವ್ಯಾಪಾರಕ್ಕೆ ಅನುಕೂಲ ಕಲ್ಪಿಸಿಕೊಡುವುದಕ್ಕಾಗಿ ಕಾಲಮಿತಿ ದಾಟಿದ ಚುನಾವಣಾ ಬಾಂಡುಗಳ ಮೊತ್ತವನ್ನು ಪಡೆಯಲು ಅನುಮತಿ ಕೊಡಬೇಕೆಂದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾಕ್ಕೆ ಸೂಚನೆ ಕೊಡುವಂತೆ ಪ್ರಧಾನ ಮಂತ್ರಿ ಕಚೇರಿ ಹಣಕಾಸು ಮಂತ್ರಾಲಯಕ್ಕೆ ನಿರ್ದೇಶನ ನೀಡಿತ್ತು, ಇದು ಸ್ವತಃ ಹಣಕಾಸು ಮಂತ್ರಾಲಯವೇ ಹಾಕಿಕೊಟ್ಟ ನಿಯಮಗಳ ಉಲ್ಲಂಘನೆಯಾಗಿತ್ತು ಎಂದು ಈಗ ಬಯಲಾಗಿದೆ.

ಭಾರತೀಯ ಪ್ರಜಾಪ್ರಭುತ್ವದ ಹಿತದೃಷ್ಟಿಯಿಂದ ಮತ್ತು ನಮ್ಮ ಚುನಾವಣಾ ಪ್ರಕ್ರಿಯೆಯ ಪಾವಿತ್ರ್ಯದ ದೃಷ್ಟಿಯಿಂದ ಈ ಚುನಾವಣಾ ಬಾಂಡುಗಳನ್ನು ತಕ್ಷಣವೇ ರದ್ದು ಮಾಡಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಸಂಪಾದಕೀಯ

ಪಕ್ಷಾಂತರಿಗಳಿಗೆ ಜನತಾ ನ್ಯಾಯಾಲಯದಲ್ಲಿ ಶಿಕ್ಷೆಯಾಗಲಿ

ನಮ್ಮ ನ್ಯಾಯಾಲಯಗಳ ಬಗ್ಗೆ, ಅವುಗಳ ನ್ಯಾಯಸಮ್ಮತ ನಡುವಳಿಕೆಗಳ ಬಗ್ಗೆ ನಮ್ಮ ದೇಶವಾಸಿಗಳಿಗೆ ಅಪಾರವಾದ ಗೌರವವಿದೆ, ವಿಶ್ವಾಸವಿದೆ. ನಮ್ಮ ನ್ಯಾಯಾಲಯಗಳು ನೀಡಿರುವ ತೀರ್ಪುಗಳ ಶ್ರೇಷ್ಠತೆಯ ಬಗ್ಗೆ, ಅವುಗಳ ಹಿಂದಿನ ಶ್ರಮದ ಬಗ್ಗೆ ನಮಗೆ ಅಭಿಮಾನ ಇದೆ. ಆದರೂ ನ್ಯಾಯಲಯಗಳಿಗೂ ಒಂದು ಇತಿಮಿತಿ ಇದ್ದೇ ಇರುತ್ತದೆ. ಅವರು ನಮ್ಮ ಸಂವಿಧಾನದ ಅಡಿಯಲ್ಲಿ, ಶಾಸಕ–ಸಂಸತ್ ಸದಸ್ಯರು ಜನತೆಯ ಪರವಾಗಿ ರೂಪಿಸಿದ ಶಾಸನಗಳ ಆಧಾರದಲ್ಲಿ ತೀರ್ಪು ನೀಡುತ್ತಾರೆ. ತೀರ್ಪು ನೀಡುವಾಗ ಸಾಕ್ಷಿ ಪುರಾವೆಗಳನ್ನು ಅವಲಂಭಿಸಿರುತ್ತಾರೆ. ಇಂತಹ ಕೆಲವು ಇತಿಮಿತಿಗಳಿಂದಾಗಿ ಅಪರಾಧಿ ಶಿಕ್ಷೆಯಿಂದ ಪಾರಾಗುತ್ತಾನೆ. ಅನ್ಯಾಯಕ್ಕೆ ಒಳಪಟ್ಟವರಿಗೆ ನ್ಯಾಯ ದೊರಕುವುದೇ ಇಲ್ಲ. ಆದ್ದರಿಂದಲೇ ಕಾನೂನು ನಿರ್ವಹಣೆಯಲ್ಲಿ ಅನೇಕ ಸುಧಾರಣೆಗಳು ಅಗತ್ಯವಿವೆ ಎಂಬ ಚರ್ಚೆಗಳು ನಡೆಯುತ್ತಲೇ ಬಂದಿವೆ.

ಕಾನೂನು ನಿರ್ವಹಣೆಯಲ್ಲಿ ಆಗಬೇಕಾದ ಪ್ರಮುಖ ಸುಧಾರಣೆಗಳು ಪ್ರಜಾ ಪ್ರಾತಿನಿಧ್ಯ ಕಾಯ್ದೆಗೆ ಸಂಬಂಧಪಟ್ಟವೆ ಎಂದರೆ ತಪ್ಪಾಗದು. ನಮ್ಮ ಪ್ರಜಾಪ್ರಭುತ್ವ ಹೆಚ್ಚೆಚ್ಚು ಬಲಗೊಳ್ಳುವ ಬದಾಲಾಗಿ ಹೆಚ್ಚೆಚ್ಚು ಕ್ಷೀಣಿಸುತ್ತಿದ್ದರೆ ಅದಕ್ಕೆ ಪ್ರಜಾ ಪ್ರಾತಿನಿಧ್ಯ ಕಾಯ್ದೆಯ ದುರ್ಬಳಕೆಯೇ ಒಂದು ಪ್ರಮುಖ ಕಾರಣವಾಗಿದೆ. ಮುಕ್ತ ಹಾಗೂ ನ್ಯಾಯಸಮ್ಮತವಾಗಿ ಚುನಾವಣೆಗಳನ್ನು ನಡೆಸುವುದು ಪ್ರಜಾಪ್ರಭುತ್ವದ ಜೀವಾಳವಾಗಿದೆ. ಆದರೆ ಇಂದು ಗ್ರಾಮ ಪಂಚಾಯತಿಯಿಂದ ಹಿಡಿದು ಸಂಸತ್ತಿನವರೆಗೆ ನಡೆಯುವ ಚುನಾವಣೆಗಳು ಧರ್ಮ, ಜಾತಿ, ಹಣ, ಅಪರಾಧೀಕಣದಂತಹ ಅನಿಷ್ಟಗಳಿಗೆ ಬಲಿಯಾಗುತ್ತಿವೆ. ಹೆಚ್ಚು ಹಣ ಹೊಂದಿರುವ ಮತ್ತು ಹೆಚ್ಚು ಕ್ರಿಮಿನಲ್ ಪ್ರಕರಣಗಳಲ್ಲಿ ಭಾಗಿಯಾದವರು ಹೆಚ್ಚು ಮತಗಳನ್ನು ಪಡೆದು ಗೆಲುವು ಸಾಧಿಸುತ್ತಿದ್ದಾರೆ. ನಿಷ್ಠಾವಂತರು, ಸಚ್ಚಾರಿತ್ರ್ಯವುಳ್ಳವರು ಠೇವಣಿ ಕಳೆದುಕೊಳ್ಳುತ್ತಾರೆ. ಈ ಬೆಳವಣಿಗೆಯ ಕುರಿತು ಮತದಾರ ಪ್ರಭುಗಳು ತಲೆಕೆಡಿಸಿ ಕೊಳ್ಳದಿರುವುದು ನಮ್ಮ ಪ್ರಜಾಪ್ರಭುತ್ವದ ದುರಂತವಾಗಿದೆ.

ಈ ಕರಾಳ ವಿದ್ಯಮಾನದ ಇನ್ನೊಂದು ಆಯಾಮವೇ ಪಕ್ಷಾಂತರ. ಒಬ್ಬ ವ್ಯಕ್ತಿಗೆ ಒಂದು ಪಕ್ಷವನ್ನು ತೊರೆದು ಇನ್ನೊಂದು ಪಕ್ಷವನ್ನು ಸೇರಲು ಹಕ್ಕಿದೆ. ಒಂದು ಪಕ್ಷದ ಧೋರಣೆಗಳನ್ನು ಆತ ತಿರಸ್ಕರಿಸಬಹುದು. ಇನ್ನೊಂದು ಪಕ್ಷದ ಧೋರಣೆಗಳನ್ನು ಆತ ಆಯ್ಕೆ ಮಾಡಿಕೊಳ್ಳಬಹುದು. ಇದು ನಿರಂತರ ನಡೆಯಬಹುದಾದ ಪ್ರಕ್ರಿಯೆ. ಇದನ್ನು ಪಾರದರ್ಶಕವಾಗಿ ಕೈಗೊಂಡಾಗ ಅದು ಪಕ್ಷಾಂತರವಾಗದು. ಬದಲಿಗೆ ಅದನ್ನು ರಾಜಕೀಯ ಧ್ರುವೀಕರಣ ಎನ್ನಬಹುದು.

ಆದರೆ ಕರ್ನಾಟಕದಲ್ಲಿ ಕಳೆದ ಕೆಲವು ವರ್ಷಗಳಿಂದ ಹುಟ್ಟು ಹಾಕಲಾದ “ಆಪರೇಷನ್ ಕಮಲ” ಎಂಬ ಸಾಂಕ್ರಾಮಿಕ ರೋಗ ಕ್ಯಾನ್ಸರ್ ಮಾದರಿಯಲ್ಲಿ ಹರಡುತ್ತಿದೆ. ದಿಡೀರನೆ ಅಧಿಕಾರವನ್ನು ಗಿಟ್ಟಿಸಿಕೊಳ್ಳಲು, ಹಣದ ಆಶೆಯಿಂದ ನಾನು ಸ್ಪರ್ಧಿಸಿ ಗೆದ್ದು ಬಂದ ಪಕ್ಷವನ್ನು ಒದ್ದು, ರಾಜಿನಾಮೆ ಕೊಟ್ಟು ಜನತೆಯ ಮೇಲೆ ಉಪಚುನಾವಣೆಯನ್ನು ಹೇರಿ ಚುನಾವಣೆಯಲ್ಲಿ ತಾವು ಕೂಡಿಟ್ಟ ಕಳ್ಳ ಹಣವನ್ನು ಬಳಕೆ ಮಾಡಿ ಗೆಲ್ಲುವುದು, ಗೆಲ್ಲಲು ಪ್ರಯತ್ನ ಮಾಡುವ ಚಾಳಿಗೆ ಏನೆನ್ನಬೇಕು ?

ಒಂದು ಪಕ್ಷಕ್ಕೆ ಅಗತ್ಯ ಬಹುಮತ ಇಲ್ಲದಾಗ, ಯಾವುದೇ ಬೇರೆ ಪಕ್ಷ ಬೆಂಬಲ ನೀಡಲು ಮುಂದಾಗದಿದ್ದಾಗ, ಇನ್ನೊಂದು ಪಕ್ಷದ ಒಂದು ಗುಂಪಿಗೆ ಆಮಿಷವೊಡ್ಡಿ, ದುಡ್ಡು ಕೊಟ್ಟು ಖರೀದಿಮಾಡಿ, ಆಡಳಿತ ನಡೆಸುತ್ತಿರುವ ಪಕ್ಷ ಬಹುಮತ ಕಳೆದುಕೊಳ್ಳುವಂತೆ ಮಾಡಿ ಸ್ವಾರ್ಥಕ್ಕಾಗಿ ಅರಾಜಕತೆ ಉಂಟುಮಾಡುವುದಕ್ಕೆ ಏನೆನ್ನಬೇಕು ?

ಇಂತವರು ಜನತೆಯ ಪರವಾಗಿ, ತನಗೆ ಮತ ನೀಡಿದ ಮತದಾರರ ಹಿತ ರಕ್ಷಣೆಗಾಗಿ ರಾಜಿನಾಮೆ ಕೊಟ್ಟು ಹೊರ ಬಂದ ಉದಾರಣೆಗಳು ಬಲು ವಿರಳ. ಲಾಲ್ ಬಹಾದ್ದೂರ್ ಶಾಸ್ತ್ರಿ ಅಂತಹ ಒಬ್ಬಿಬ್ಬರನ್ನು ಮಾತ್ರ ಕಾಣಬಹುದು. ಆದರೆ ಇಂದು ರಾಜ್ಯದ ಮೇಲೆ ಉಪಸಮರವನ್ನು ಹೇರಿದ 15 ಜನ ಶಾಸಕರು ತಮ್ಮ ಸ್ವಾರ್ಥಕ್ಕಾಗಿ ರಾಜಿನಾಮೆ ಕೊಟ್ಟವರು ! ಇದರ ಋಣಾರ್ಥವಾಗಿ ಹಣದ ಚೀಲಗಳು ಒಬ್ಬರಿಂದ ಇನ್ನೊಬ್ಬರಿಗೆ ಈಗಾಗಲೇ ಹಸ್ತಾಂತರವಾಗಿವೆ. ಶರಣರ ವಿಭೂತಿಯನ್ನು ತ್ಯಜಿಸಿ ಹಣೆಯ ಮೇಲೆ ಬ್ರಾಹ್ಮಣ್ಯದ ತಿಲಕವನ್ನು ಇಟ್ಟುಕೊಂಡು ಇದ್ಯಾವುದೂ ತಮಗೆ ಗೊತ್ತಿಲ್ಲ ಎಂಬಂತೆ ಯಡಿಯೂರಪ್ಪನವರು ಕಣ್ಣುಚ್ಚಿ ಹಾಲು ಕುಡಿಯುತ್ತಿದ್ದಾರೆ.

ಅಂದಿನ ಸ್ಪೀಕರ್‌ರವರಿಂದ, ಮತ್ತು ನಂತರ ಸುಪ್ರೀಂ ಕೋರ್ಟ್‌ನಿಂದ ‘ಅನರ್ಹರು’ ಎಂಬ ಬಿರುದು ಪಡೆದ 15 ಜನ ಶಾಸಕರ ಪೈಕಿ 13 ಮಂದಿ ಬಿಜೆಪಿಯ ಅಭ್ಯರ್ಥಿಗಳಾಗಿ ತಮ್ಮ ಕ್ಷೇತ್ರಗಳಲ್ಲಿ ತಮ್ಮ ಅದೃಷ್ಟ ಪರಿಕ್ಷೆಯಲ್ಲಿ ತೊಡಗಿದ್ದಾರೆ. ಕಂಡ ಕಂಡ ‘ಖ್ಯಾತ’ ದೇವರುಗಳಿಗೆ ಹರಕೆ ಹೊತ್ತು ಅಲೆಯುತ್ತಿದ್ದಾರೆ. ಅಬ್ಬರದ ಪ್ರಚಾರಕ್ಕಾಗಿ ಎಂ.ಟಿ.ಬಿ. ನಾಗರಾಜ ರಂತವರ ಬಚ್ಚಿಟ್ಟ ಹಣ ನೀರಿನಂತೆ ಹರಿಯತೊಡಗಿದೆ. ಶಿವಾಜಿನಗರದ ರೋಷನ್ ಬೇಗ್ ಮತ್ತು ರಾಣೇಬೆನ್ನೂರಿನ ಆರ್. ಶಂಕರ್‌ರವರಿಗೆ ಬಿಜೆಪಿ ಟಿಕೆಟ್ ಸಿಕ್ಕಿಲ್ಲ, ಉಳಿದ 13 ಜನ ಚುನಾವಣೆಗೆ ಅರ್ಹರಾದ ಅನರ್ಹರನ್ನು ಶತಾಯಗತಾಯ ಗೆಲ್ಲಿಸುವ ಜವಾಬ್ದಾರಿಯನ್ನು ಬಿಜೆಪಿ ಘಟಾನುಘಟಿಗಳು ಮೇಲ್ನೋಟಕ್ಕಾದರೂ ವಹಿಸಿಕೊಂಡತೆ ಕಾಣುತ್ತದೆ.

ಧ್ವನಿ ಇಲ್ಲದವರ ಧ್ವನಿಯಾಗಿ, ದುಡಿಯುವ ವರ್ಗದ ಪ್ರಾಣ ಮಿತ್ರನಾಗಿ ಕಾರ್ಯ ನಿರ್ವಹಿಸುತ್ತಿರುವ ‘ಪತ್ರಿಕೆ’ಯು ಅಥಣಿ, ಕಾಗವಾಡ, ಗೋಕಾಕ, ಹಿರೇಕೆರೂರು, ಯಲ್ಲಾಪುರ, ರಾಣೆಬೆನ್ನೂರು, ವಿಜಯನಗರ, ಚಿಕ್ಕಬಳ್ಳಾಪುರ, ಯಶವಂತಪುರ, ಶಿವಾಜಿನಗರ, ಹೊಸಕೋಟೆ, ಕೆ.ಆರ್. ಪೇಟೆ, ಹುಣಸೂರು ಮತ್ತು ಮಹಾಲಕ್ಷ್ಮೀ ಬಡಾವಣೆಯ ಮತದಾರರಲ್ಲಿ ಮನವಿ ಮಾಡುವುದೇನೆಂದರೆ ಸ್ವಾರ್ಥ ಸಾಧನೆಗಾಗಿ ಪಕ್ಷಾಂತರ ಮಾಡಿ ಅನರ್ಹರೆನಿಸಿಕೊಂಡ ನಾಚಿಕೆ ಇಲ್ಲದೆ ಬಿಜೆಪಿ ಟಿಕೆಟ್ ಪಡೆದು ಮರು ಆಯ್ಕೆಗೆ ನಿಮ್ಮ ಮುಂದೆ ಬಂದಿರುವ 13 ಮಂದಿ ಅಭ್ಯರ್ಥಿಗಳಿಗೆ ಹಾಗೂ ಈ ಅಕ್ರಮ ಪಕ್ಷಾಂತರಕ್ಕೆ ಎಲ್ಲ ರೀತಿಯ ಬೆಂಬಲ ನೀಡಿ ಅಧಿಕಾರಕ್ಕೆ ಬಂದಿರುವ ಬಿಜೆಪಿಯ ಇನ್ನುಳಿದ ಅಭ್ಯರ್ಥಿಗಳಿಗೆ ಈ ಚುನಾವಣೆಯು ನೆನಪಿಡುವಂತಹ ಪಾಠ ಕಲಿಸಬೇಕೆಂದೂ ಇದು ಇತರ ಎಲ್ಲಾ ಪಕ್ಷಗಳಿಗೂ ಪಾಠವಾಗಬೇಕೆಂದು ಕೋರುತ್ತದೆ. ಪಕ್ಷಾಂತರ ನಿಷೇದ ಕಾಯ್ದೆಗೆ ಹರಿತವಾದ ಹಲ್ಲುಗಳನ್ನು ಒದಗಿಸುವ ಅಗತ್ಯ ತಿದ್ದುಪಡಿಗಳನ್ನು ಒತ್ತಾಯಿಸಬೇಕಾಗಿದೆ.

ಪ್ರಗತಿಪರ ಸಂಘಟನೆಗಳ ಒಕ್ಕೂಟ, ಕಲಬುರಗಿ

ಜೆ ಎನ್ ಯು ವಿದ್ಯಾರ್ಥಿಗಳ ಮೇಲಿನ ಹಲ್ಲೆ ಖಂಡಿಸಿ, ಶುಲ್ಕ ಹೆಚ್ಚಳ ಖಂಡಿಸಿ ಶಿಕ್ಷಣದ ಖಾಸಗೀಕರಣ ವಿರೋಧಿಸಿ ಕೇಂದ್ರ ಸರಕಾರದ ಫ್ಯಾಸಿಸ್ಟ್ ಧೋರಣೆ ಪ್ರತಿಭಟಿಸಿ ಹೋರಾಟ

ದೇಶದ ಮಕ್ಕಳಿಗೆ ಉಚಿತ ಶಿಕ್ಷಣ ಒದಗಿಸಬೇಕಾಗಿರುವುದು ಸರಕಾರದ ಜವಾಬ್ದಾರಿ ಯಾಗಿದೆ. ಆದರೆ ಇದು ಮರೀಚಿಕೆಯಾಗಿದೆ. ಇದರಿಂದ ಆರ್ಥಿಕ ಸಾಮಾಜಿಕವಾಗಿ ಹಿಂದುಳಿದ ವಿದ್ಯಾರ್ಥಿಗಳ ಶೈಕ್ಷಣಿಕ ಮಟ್ಟ ಕುಸಿಯುತ್ತಿದೆ. ಮತ್ತು ಈ ಮಕ್ಕಳ ಭವಿಷ್ಯವು ಕರಾಳವಾಗುತ್ತಿದೆ. ಕಿತ್ತು ತಿನ್ನುವ ಬಡತನ, ನಿರುದ್ಯೋಗದಿಂದ ದೇಶದ ಭವಿಷ್ಯವೇ ಮಂಕಾಗುತಿದೆ. ಶಿಕ್ಷಣ ಮತ್ತು ಆರೋಗ್ಯಕ್ಕಾಗಿ ಆಧ್ಯತೆ ಕೊಡಬೇಕಾದ ಜರೂರಿ ಇದೆ. ಆದರೆ ಇದಕ್ಕೆ ವ್ಯತಿರಿಕ್ತವೆನ್ನುವಂತೆ ದೇಶದ ಹೆಮ್ಮೆಯ ವಿಶ್ವವಿದ್ಯಾಲಯವಾಗಿರುವ ಜವಾಹರಲಾಲ ನೆಹರು ವಿವಿಯ ವಿದ್ಯಾರ್ಥಿಗಳ ಓದಿನ ವಸತಿಯ ಶುಲ್ಕವನ್ನು ಹೆಚ್ಚಳ ಮಾಡಲಾಗಿದೆ. ಈ ವಿವಿಗೆ ಬರುವವರು ಸಾಮಾನ್ಯ ಬಡ ಮತ್ತು ದಲಿತ ಹಿಂದುಳಿದ ಮಕ್ಕಳ ಸಂಖ್ಯೆ ಹೆಚ್ಚಿದೆ. ತೀವ್ರ ಹೆಚ್ಚಳವಾಗಿರುವ ಶುಲ್ಕವನ್ನು ಕಟ್ಟಲು ಸಾಧ್ಯವಾಗದ ಈ ವಿದ್ಯಾರ್ಥಿಗಳು ಅನಿವಾರ್ಯವಾಗಿ ಹೋರಾಟಕ್ಕೆ ಇಳಿದಿದ್ದಾರೆ. ಕಡಿಮೆ ವೆಚ್ಚದಲ್ಲಿ ಈ ಮಕ್ಕಳಿಗೆ ಶಿಕ್ಷಣವೇಕೆ ಕೊಡಬೇಕು ಎಂಬುದು ಕೇಂದ್ರ ಸರಕಾರದ ಧೋರಣೆ ಇದೆ. ಮಾತ್ರವಲ್ಲ ವಿದ್ಯಾರ್ಥಿಗಳ ಮೇಲೆ ಹೆಚ್ಚು ಖರ್ಚು ಮಾಡುವ ಬದಲಿಗೆ ವಿವಿಯೇ ಮುಚ್ಚಿ ಹಾಕುವ ಯೋಜನೆ ಹೊಂದಿದಂತಿದೆ. ಇದು ಸರಕಾರವು ಶಿಕ್ಷಣವನ್ನು ಆಧ್ಯತೆಯಾಗಿ ಪರಿಗಣಿಸುತ್ತಿಲ್ಲ ಎನ್ನುವುದಕ್ಕೆ ಪುರಾವೆಯಾಗಿದೆ. ಏಕೆಂದೆರ ಈ ದೇಶದಲ್ಲಿ ಅತ್ಯಂತ ದುಬಾರಿ ಹಣ (3000 ಕೋಟಿ ಹಣ) ಖರ್ಚು ಮಾಡಿ ಪ್ರತಿಮೆ ಮಾಡಲಾಗುತ್ತಿದೆ. ಆದರೆ ವಿದ್ಯಾರ್ಥಿಗಳ ಫೀಜು ಕಡಿಮೆ ಮಾಡುವುದಿಲ್ಲ. ಇದು ಏನ್ನನ್ನು ಸಾಬೀತು ಮಾಡಿದಂತೆ?

ಚುನಾವಣಾ ಡಿಕ್ಲರೇಷನ್ ನಲ್ಲಿ ಕೋಟ್ಯಾಂತರ ಆಸ್ತಿ ತೋರಿಸುವ ರಾಜಕಾರಣಿಗಳು ಪಾರ್ಲಿಮೆಂಟಿನಲ್ಲಿ ನಾಲ್ಕು ರೂಪಾಯಿಗೆ ದೋಸೆ ಮತ್ತು ಮೂರು ರೂಪಾಯಿಗೆ ಚಹಾ ಕುಡಿಯುವರು. ಕಾರ್ಪೋರೆಟ್ ಕಂಪನಿಗಳ 12 ಲಕ್ಷ ಕೋಟಿ ತೆರಿಗೆಯನ್ನು ಮತ್ತು ಸಾಲವನ್ನು ಸರಕಾರ ಮನ್ನಾ ಮಾಡಿದೆ. ಸರಕಾರದ ಅರ್ಥಾತ್ ನಮ್ಮ ತೆರಿಗೆ ಹಣವನ್ನು ಕೋಟಿ ಕೋಟಿಗಟ್ಟಲೆ ಪಡೆದುಕೊಂಡ ಇದೇ ಕಾರ್ಪೋರೆಟ್ಟಿಗರು ವಿದ್ಯಾರ್ಥಿಗಳಿಗೆ ಕಡಿಮೆ ಫೀಜಿನಲ್ಲಿ ಶಿಕ್ಷಣ ಕೊಡುವುದುನ್ನು ವಿರೋಧಿಸುವರು. ಇವರಿಗೆ ಪೂರಕವಾಗಿ ಕೇಂದ್ರ ಸರಕಾರವು ಎಲ್ಲವನ್ನೂ ಖಾಸಗೀಕರಣ ಮಾಡಲು ಹೊರಟಿದೆ. ಅಥವ ಖಾಸಗಿಯವರಿಗೆ ದೇಶದ ಸಂಪತ್ತನ್ನು ಮಾರಲು ಹೊರಟಿದೆ. ಸರಕಾರದ ಇಂತಹ ನಡೆಯಿಂದ ಇಡೀ ದೇಶವೇ ದಿವಾಳಿಯಾಗುವಲ್ಲಿ ಅನುಮಾನಗಳಿಲ್ಲದಂತಾಗಿದೆ. ಜೆಎನ್ಯು ವಿದ್ಯಾರ್ಥಿಗಳ ಪೀಜು ಹೆಚ್ಚಳ ಮಾಡುವ ಮೂಲಕ ಕೇಂದ್ರಸರಕಾರವು ಒಂದು ಕಲ್ಲಿಗೆ ಎರಡೆರಡು ಹಕ್ಕಿಗಳನ್ನು ಉರುಳಿಸ ಹೊರಟಿದೆ. ಶಿಕ್ಷಣ ಖಾಸಗೀಯವರ ಕೈ ಸೇರಬೇಕು. ಸರಕಾರವು ಶಿಕ್ಷಣ ಕೊಡುವ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಬೇಕು ಎಂಬುದು ಒಂದಾದರೆ ಜೆಎನ್ಯುನಲ್ಲಿ ಓದಿದ ವಿದ್ಯಾರ್ಥಿಗಳು ವಿಚಾರವಂತರಾಗುವುದನ್ನು ಪ್ರಶ್ನಿಸುವುದನ್ನು ನಿಲ್ಲಿಸುವ ಅಜೆಂಡಾ ಕೇಂದ್ರ ಸರಕಾರ ಹೊಂದಿದೆ. ಆದ್ದರಿಂದಲೇ ಅದು ಜೆಎನ್‌ಯು ಅನ್ನು ಟಾರ್ಗೆಟ್ ಮಾಡಿದೆ. ಮತ್ತು ವಿದ್ಯಾರ್ಥಿಗಳ ಹೋರಾಟವನ್ನು ಹಿಂಸೆಯ ಮೂಲಕ ಸದೆ ಬಡಿಯಲು ಹೊರಟಿದೆ. ಶಿಕ್ಷಣದ ವ್ಯಾಪಾರೀಕರಣ ತಡೆಗಟ್ಟಿ ದೇಶದ ಎಲ್ಲರಿಗೂ ಉಚಿತ ಶಿಕ್ಷಣ ಒದಗಿಸಬೇಕೆಂದು ಮತ್ತು ಹೆಚ್ಚಳವಾದ ಫೀಜನ್ನು ಇಳಿಸಬೇಕೆಂದು ವಿದ್ಯಾರ್ಥಿಗಳು ಹೋರಾಟ ಮಾಡುತ್ತಿದ್ದಾರೆ. ಅತ್ಯಂತ ಶಾಂತಯುತವಾಗಿ ಪ್ರತಿಭಟಿಸುತ್ತಿರುವ ವಿದ್ಯಾರ್ಥಿಗಳ ಮೇಲೆ ಪೋಲಿಸರ ಮೂಲಕ ಬಾರ್ಬರಿಕ ಹಲ್ಲೆ ನಡೆಸಲಾಗಿದೆ. ನೂರಾರು ವಿದ್ಯಾರ್ಥಿಗಳನ್ನು ಬಂಧಿಸಲಾಗಿದೆ. ಅನೇಕ ವಿದ್ಯಾರ್ಥಿಗಳಿಗೆ ತೀವ್ರ ಸ್ವರೂಪದ ಗಾಯಗಳಾಗಿವೆ. ಕೇಂದ್ರ ಸರಕಾರದ ಈ ಧೋರಣೆಯು ಫ್ಯಾಸಿಸ್ಟ್ ಸ್ವರೂಪದ್ದಾಗಿದೆ. ಇದನ್ನು ನಾಡಿನ ಪ್ರಜ್ಞಾವಂತರಾದವರೆಲ್ಲರೂ ತೀವ್ರವಾಗಿ ಖಂಡಿಸಲೇಬೇಕಿದೆ.

ಬೇಡಿಕೆಗಳು:

1. ಕೂಡಲೇ ಶುಲ್ಕ ಹೆಚ್ಚಳವನ್ನು ಕೈ ಬಿಡಬೇಕು.
2. ದೇಶದಾದ್ಯಂತ ಇರುವ ದುಬಾರಿ ಶಿಕ್ಷಣ ಶುಲ್ಕ ಕೈ ಬಿಡಬೇಕು.
3. ಸಾರ್ವತ್ರಿಕ ಉಚಿತ ಶಿಕ್ಷಣ ವ್ಯವಸ್ಥೆ ಜಾರಿಗೊಳಿಸಬೇಕು.
4. ವಿದ್ಯಾರ್ಥಿಗಳ ಮೇಲೆ ಲಾಠಿಚಾರ್ಜ ಮಾಡಿದ ಪೋಲೀಸ್ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕು.
5. ಬಂಧಿಸಲ್ಪಟ್ಟ ವಿದ್ಯಾರ್ಥಿಗಳನ್ನು ಬೇಷರತ್ ಬಿಡುಗಡೆ ಮಾಡಿ ಅವರ ಮೇಲೆ ಹಾಕಲಾದ ಮೊಕದ್ದಮ್ಮೆಗಳನ್ನು ಹಿಂದೆಗೆದುಕೊಳ್ಳಬೇಕು.
6. ಶಿಕ್ಷಣದ ಖಾಸಗೀಕರಣ ನಿಲ್ಲಿಸಬೇಕು.



ಆರ್ಥಿಕತೆ ಸುಧಾರಿಸಲು ಬೇಡಿಕೆ ಸೃಷ್ಟಿ ತುರ್ತು ಅಗತ್ಯ

ದೇಶದ ಆರ್ಥಿಕ ಹಿನ್ನಡೆ ಕುರಿತು ದುಂಡು ಮೇಜಿನ ಸಭೆಯು ದಿನಾಂಕ 6.11.2019 ರಂದು ಮೈಸೂರಿನ ರೋಟರಿ ಐಡಿಯಲ್ ಜಾವಾ ಸಭಾಂಗಣದಲ್ಲಿ ನಡೆಯಿತು.

ಆರಂಭದಲ್ಲಿ ಅರ್ಥಶಾಸ್ತ್ರಜ್ಞ ಪ್ರೊ.ಚಿಂತಾಮಣಿ ಪ್ರಾಸ್ತಾವಿಕ ಮಾತುಗಳನ್ನಾಡಿ ನೋಟು ರದ್ದತಿ ಮತ್ತು ಜಿಎಸ್‌ಟಿ ಆರ್ಥಿಕ ಹಿನ್ನಡೆಗೆ ಬಹುಮುಖ್ಯ ಕಾರಣವಾಗಿದೆ. ಕಳೆದ ಜೂನ್ ವೇಳೆಗೆ ಭಾರತದ ಜಿಡಿಪಿ ಶೇ.5ಕ್ಕೆ ಕುಸಿಯಿತು. ಪಾರ್ಲೆಜಿಯಂತಹ ಬಿಸ್ಕೆಟ್ ಕಂಪನಿಯಲ್ಲಿ ಶೇ.10 ರಷ್ಟು ಉದ್ಯೋಗ ನಷ್ಟವಾಯಿತು. ಮೂರು ಶಿಫ್ಟ್‌ಗಳಲ್ಲಿ ಕೆಲಸ ಮಾಡುತ್ತಿದ್ದ ಕೈಗಾರಿಕೆಗಳು ಎರಡು ಶಿಫ್ಟ್‌ಗಳಿಗೆ ಸೀಮಿತವಾಗಿವೆ. ಉತ್ಪಾದನಾ ಘಟಕಗಳು ಸ್ಥಗಿತಗೊಂಡಿದ್ದು ಉದ್ಯೋಗಿಗಳನ್ನು ಕಿತ್ತುಹಾಕುತ್ತಿದ್ದಾರೆ. ಕಲ್ಲಿದ್ದಲು ವಲಯದ ಪೆಟ್ರೋಲಿಯಂ, ಸ್ಟೀಲ್, ಸಿಮೆಂಟ್, ರಸಗೊಬ್ಬರ, ವಿದ್ಯುತ್ ಉತ್ಪಾದನಾ ವಲಯದ ಉತ್ಪಾದನೆ ಸುಮಾರು ಶೇ.8 ರಷ್ಟು ಕಡಿಮೆ ಆಗಿದೆ. ಚಾಲಕ ಶಕ್ತಿ ಸೇ.5.2ಕ್ಕೆ ಕುಸಿಯಿತು. ಪಿಎಂಐ (ಪರ್ಚೇಸಿಂಗ್ ಮ್ಯಾನೇಜರ್ಸ್ ಇಂಡೆಕ್ಸ್) ಕನಿಷ್ಟ ಶೇ.50 ರಷ್ಟಿದ್ದರೆ ಮಾತ್ರ ದೇಶದ ಆರ್ಥಿಕತೆ ಸುಭದ್ರವಾಗಿರುತ್ತದೆ. ಆದರೆ ಭಾರತದ ಇಂದಿನ ಪಿಎಂಐ ಶೇ.49.2ಕ್ಕೆ ಇಳಿದಿದೆ ಎಂದು ಎಚ್ಚರಿಸಿದರು. ಆರ್ಥಿಕ ಸ್ಥಿತಿ ಕುಸಿದಿರುವ ಈ ಸನ್ನಿವೇಶದಲ್ಲೂ ಕೇಂದ್ರ ಸರ್ಕಾರ ತೆಗೆದುಕೊಂಡ ನಿರ್ಣಯಗಳು ಮತ್ತಷ್ಟು ಪೆಟ್ಟು ನೀಡಿವೆ. ಅರ್ಥ ಸಚಿವೆ ನಿರ್ಮಲಾ ಸೀತಾರಾಮನ್ ರವರು ಮಂಡಿಸಿದ ಬಜೆಟ್ ಇಂದಿನ ಸ್ಥಿತಿಗೆ ಪೂರಕವಾಗಿಲ್ಲ. ನವೋದ್ಯಮದ ಮೇಲೆ ವಿಪರೀತ ತೆರಿಗೆ ವಿಧಿಸಿರುವುದು ಸರಿಯಲ್ಲ ಎಂದು ಅಭಿಪ್ರಾಯಪಟ್ಟರು ಹಾಗೂ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿನ ಏರುಪೇರುಗಳಿಂದಾಗಿ ದೇಶದಲ್ಲಿ ಆರ್ಥಿಕ ಬಿಕ್ಕಟ್ಟು ಉಂಟಾಗಿದ್ದಲ್ಲ ಬದಲಾಗಿ ದೇಶಿ ಹೂಡಿಕೆ ಕಡಿಮೆ ಆಗಿದೆ. ಗ್ರಾಮೀಣ ಪ್ರದೇಶದಲ್ಲಿ ಖರೀದಿಸುವ ಶಕ್ತಿ ತಗ್ಗಿದೆ. ಖಾಸಗಿ ವಲಯದಲ್ಲಿ ಹೂಡಿಕೆ ಮಾಡಲು ಜನ ಹಿಂಜರಿಯುತ್ತಿದ್ದಾರೆ. ಆರ್ಥಿಕ ಅನಿಶ್ಚಿತತೆ ಉಂಟಾಗಿದೆ. ದೇಶದಲ್ಲಿ ನಿರ್ಮಾಣವಾಗಿರುವ ಆರ್ಥಿಕ ಕುಸಿತವನ್ನು ಸರಿಪಡಿಸಲು ನರೇಗಾದಂತ ಯೋಜನೆಯನ್ನು ಬಲಪಡಿಸಬೇಕು, ಸಣ್ಣ ಕೈಗಾರಿಕೆಗಳಿಗೆ ಉತ್ತೇಜನ ನೀಡಬೇಕು ಕೃಷಿ ಉತ್ಪನ್ನಗಳಿಗೆ ಹೆಚ್ಚಿನ ಬೆಲೆ ನಿಗಧಿಪಡಿಸಬೇಕು ಆ ಮೂಲಕ ಬೇಡಿಕೆ ಸೃಷ್ಟಿಗೆ ಕ್ರಮ ವಹಿಸಬೇಕು ಎಂದರು. ನಂತರ ವಿಮಾ ನಿಗಮ ನೌಕರ ಸಂಘದ ಮೈಸೂರು ವಿಭಾಗದ ಮಾಜಿ ಅಧ್ಯಕ್ಷರಾದ ಎನ್. ವಿಜಯ್‌ಕುಮಾರ್ ಮಾತಾನಾಡಿ ಇಂದು ಉಗ್ರ ನವಉದಾರವಾದದ ರಾಜಕೀಯ ಮೇಲಾಟ ನಡೆಯುತಿದೆ 4.5 ಕೋಟಿ ಜನ ಉದ್ಯೋಗ ಕಳೆದುಕೊಂಡಿದ್ದಾರೆ ಇಂದು ಎಲ್‌ಐಸಿಯ ಆಸ್ತಿ ಮಾರಿದರೂ ದೇಶವನ್ನು 5 ವರ್ಷ ಅಥವಾ ರಾಜ್ಯವನ್ನು 15 ವರ್ಷ ನಡೆಸಬಹುದು ಅಂತಹ ಸಾರ್ವಜನಿಕ ಉದ್ಯಮಗಳನ್ನು ಬಲಪಡಿಸುವ ಬದಲು ಖಾಸಗೀಕರಣ ಮಾಡುವ ಮೂಲಕ ಕೇಂದ್ರ ಸರ್ಕಾರ ಬಂಡವಾಳಶಾಹಿಗಳ ಪರ ಕೆಲಸ ಮಾಡುತ್ತಿದೆ ಎಂದರು. ನಂತರ ಮೈಸೂರು ಜಿಲ್ಲಾ ಸಣ್ಣ ಕೈಗಾರಿಕೆಗಳ ಸಂಘದ ಪ್ರತಿನಿಧಿ ಹಾಗೂ ಉದ್ಯಮಿ ಸುರೇಶ್ ಕುಮಾರ್ ಜೈನ್ ಮಾತನಾಡಿ ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಗಳಲ್ಲಿ ಶೇ 50 ರಷ್ಟು ಕೈಗಾರಿಕೆಗಳು ಮುಚ್ಚಿವೆ. ಶೇ 30 ರಷ್ಟು ಕೈಗಾರಿಕೆಗಳು ರೋಗಗ್ರಸ್ಥವಾಗಿವೆ ಉಳಿದ ಶೇ 20 ರಷ್ಟು ಕೈಗಾರಿಕೆಗಳು ನಡೆಯುತ್ತಿದ್ದರೂ ಮೂರು ಪಾಳೆಯಿಂದ ಎರಡು ಪಾಳೆಗಳಿಗೆ ಇಳಿದಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನೀತಿಗಳೆ ಸಣ್ಣ ಕೈಗಾರಿಕೆಗಳಿಗೆ ಅಪಾಯ ತಂದಿದೆ. ಕೇಂದ್ರ ಸರ್ಕಾರ ಪ್ರಕಟಿಸಿರುವ ಸುಧಾರಣೆಗಳು ಕೈಗಾರಿಕೆಗಳಿಗೆ ತಲುಪಿಲ್ಲ ಅಲ್ಲದೇ ಕೇಂದ್ರ ಸರ್ಕಾರ ಇದುವರೆಗೂ ಒಂದೇ ಒಂದು ಸಭೆಯನ್ನು ಮಾಡಿಲ್ಲವೆಂದು ಬೇಸರ ವ್ಯಕ್ತಪಡಿಸಿದರು.

ಪಿಯುಸಿಎಲ್ ನ ರಾಜ್ಯ ಸಂಚಾಲಕರಾದ ಡಾ. ವಿ.ಎನ್ ಲಕ್ಷ್ಮೀನಾರಾಯಣ ಮಾತನಾಡಿ ಇದು ಮೂಲತಃ ರಾಜಕೀಯ ಸಮಸ್ಯೆ, ಮೋದಿ ನಾಮಿಕ್ಸ್ ವಿರುದ್ಧ ಹೋರಾಡಬೇಕಿದೆ ಮೋದಿಯ ರಾಜಕೀಯ ಅಧಿಪತ್ಯ ಕೊನೆಗೊಂಡರೆ ಮಾತ್ರ ಆರ್ಥಿಕ ಸಮಸ್ಯೆಗೆ ಪರಿಹಾರ ದೊರಕುತ್ತದೆ ಎಂದರು. ಸಿಪಿಐ ನ ಜಿಲ್ಲಾ ಕಾರ್ಯದರ್ಶಿ ಹೆಚ್ ಆರ್ ಶೇಷಾದ್ರಿ ಮಾತನಾಡಿ ಕೇಂದ್ರ ಸರ್ಕಾರವು ಕೇವಲ ಲಾಭದ ಉದ್ದೇಶವನ್ನು ಹೊಂದಿದ್ದು, ಈ ದೇಶದ ಜನರ ಮೇಲೆ ಅನುಕಂಪವಾಗಲಿ, ಮಾನವೀಯತೆಯನ್ನಾಗಲಿ ಹೊಂದಿಲ್ಲ. ಬರೀ ಭ್ರಮೆಯನ್ನು ಹುಟ್ಟಿಸಿದ್ದು, ನೈಜ ಸಮಸ್ಯೆಗಳನ್ನು ಬಗೆಹರಿಸುತ್ತಿಲ್ಲ. ಈ ನಿಟ್ಟಿನಲ್ಲಿ ದೇಶದ ಸಂಪತ್ತು ಉಳಿಯಬೇಕು, ಉದ್ಯೋಗ ಸೃಷ್ಟಿಗೆ ಆಗ್ರಹಿಸುವ ನಿಟ್ಟಿನಲ್ಲಿ ಜನಾಂದೋಲನ ರೂಪುಗೊಳ್ಳಬೇಕು ಎಂದು ತಿಳಿಸಿದರು. ನಿವೃತ್ತ ಮೇಜರ್ ಜನರಲ್ ಎಸ್.ಜಿ. ಒಂಬತ್ಕೆರೆ ಮಾತನಾಡಿ ಭಾರತದ ಅರ್ಥ ವ್ಯವಸ್ಥೆಯ ಮಾನದಂಡವೇ ಸರಿಯಿಲ್ಲ. ಜಿಡಿಪಿ ಬೆಳವಣಿಗೆಯೇ ದೇಶದ ಆರ್ಥಿಕ ಬೆಳವಣಿಗೆ ಅಲ್ಲ, ಕೃಷಿ ಕ್ಷೇತ್ರವನ್ನು ಉತ್ತೇಜಿಸುವ ಅಗತ್ಯವಿದೆ ಹಾಗೆಯೇ ಕೈಗಾರಿಕಾ ಕ್ಷೇತ್ರಕ್ಕೆ ಹೆಚ್ಚು ಒತ್ತು ನೀಡಬೇಕು ಅದಕ್ಕಾಗಿ ಕೇಂದ್ರ ರಾಜ್ಯ ಸರ್ಕಾರಗಳು ಪ್ರತ್ಯೇಕ ಕೃಷಿ ಬಜೆಟ್ ಮಂಡಿಸುವ ಅಗತ್ಯವಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಸಮಾಜವಾದಿ ಚಿಂತಕ ಪ.ಮಲ್ಲೇಶ್ ಮಾತನಾಡಿ ಪರಸ್ಪರ ಸಿದ್ಧಾಂತ ಮರೆತು ದೇಶದ ಆರ್ಥಿಕ ಸ್ಥಿತಿಯನ್ನು ಸರಿಯಾದ ದಿಕ್ಕಿಗೆ ತರಬೇಕು ರಾಜಕೀಯ ಸಿದ್ಧಾಂತದ ಆಧಾರದ ಮೇಲೆ ಆರ್ಥಿಕ ನೆಲೆಗಟ್ಟನ್ನು ರೂಪಿಸಬೇಕು. ಪರ್ಯಾಯ ವ್ಯವಸ್ಥೆಯ ಬಗ್ಗೆ ಯೋಚನೆ ಮಾಡಿ ಸಂಘಟನೆ ಮಾಡಬೇಕು. ಮಾಜಿ ಸ್ಪೀಕರ್ ಕೆ.ಆರ್. ಪೇಟೆ ಕೃಷ್ಣ ಮಾತನಾಡಿ ಈಚೆಗೆ ರಾಜಕೀಯ ಪಕ್ಷಗಳು ಭಾವನಾತ್ಮಕ ವಿಚಾರವಿಟ್ಟುಕೊಂಡು ಜಾತಿಯನ್ನು ಅಸ್ತ್ರ ಮಾಡಿಕೊಂಡಿದೆ.ಈಗ ವಿದ್ಯಾವಂತರೆ ಜಾತಿಯ ಪರವಾಗಿ ನಿಲ್ಲುತ್ತಿದ್ದಾರೆ ಪ್ರಾದೇಶಿಕ ಪಕ್ಷಗಳಂತೂ ಜಾತಿಯನ್ನು ಮತ್ತಷ್ಟೂ ಗಟ್ಟಿಗೊಳಿಸಿವೆ. ಜೈಲಿಗೆ ಹೋಗಿ ಬಂದವರನ್ನು ಮೆರವಣಿಗೆ ಮಾಡುತ್ತಿರುವ ಕಾಲಘಟ್ಟದಲ್ಲಿ ನಾವಿದ್ದೇವೆಂದು ಬೇಸರಿಸಿದರು. ಅಲ್ಲದೇ ಮಾಧ್ಯಮದವರಿಗು ಹಾಗೂ ರಾಜಕಾರಣಿಗಳಿಗು ಇಂದು ವ್ಯತ್ಯಾಸವಿಲ್ಲದಂತಾಗಿದೆ ಎಂದು ತಿಳಿಸಿದರು. ಎಸ್‌ಯುಸಿಐನ ಜಿಲ್ಲಾ ಕಾರ್ಯದರ್ಶಿ ರವಿ ದೇಶದಲ್ಲಿ ಶೇ.80 ರಷ್ಟು ಕಾರ್ಮಿಕರು ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿದ್ದಾರೆ. ಉತ್ಪಾದನಾ ವೆಚ್ಚ ಕಡಿಮೆ ಮಾಡುವ ಉದೇಶದಿಂದ ವೇತನವನ್ನೂ ಕಡಿಮೆ ಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ಜನವರಿ 8 2020 ರಂದು ನಡೆಯಲಿರುವ ಸಾರ್ವತ್ರಿಕ ಮುಷ್ಕರ ಮಹತ್ವ ಪಡೆಯುತ್ತದೆ ಎಂದರು. ನಿವೃತ್ತ ಇಂಗ್ಲೀಷ್ ಪ್ರಾಧ್ಯಾಪಕ ಪ್ರೊ.ವಿ. ಲಕ್ಷ್ಮಿನಾರಾಯಣ ಮಾತನಾಡಿ. ಬಂಡವಾಳ ಶಾಹಿ ತಾತ್ಕಾಲಿಕ ಪರಿಹಾರ ನೀಡುತ್ತದೆ. ಆದರೆ ದೀರ್ಘಾವಧಿಯಲ್ಲಿ ಅದು ಇನ್ನೊಂದು ಸಮಸ್ಯಯನ್ನು ಸೃಷ್ಟಿಸುತ್ತದೆ. ಈಗ ಆರ್ಥಿಕ ಬೆಳವಣಿಗೆ ಅಂದರೆ ಅದು ಬಂಡವಾಳ ಶಾಹಿಯ ಬೆಳವಣಿಗೆ, ಕುಸಿತ ಎಂದರೆ ಅದು ಬಂಡವಾಳ ಶಾಹಿಯ ಕುಸಿತ. ಯಾವುದೇ ಆರ್ಥಿಕ ಹಿಂಜರಿತ, ಕುಸಿತ ನೇರವಾಗಿ ಕಾರ್ಮಿಕರ ಉದ್ಯೋಗ ಮತ್ತು ವೇತನಗಳ ಮೇಲೆ ಪರಿಣಾಮ ಬೀರುತ್ತದೆ ಎಂದರು. ನಂತರ ಸಿಪಿಐ(ಎಂ)ನ ಜಿಲ್ಲಾ ಕಾರ್ಯದರ್ಶಿ ಕೆ. ಬಸವರಾಜು ಮಾತನಾಡಿ ನಿರುದ್ಯೋಗದ ಹೆಚ್ಚಳವೇ ಬೇಡಿಕೆ ಕುಸಿಯಲು ಕಾರಣವಾಗಿದೆ ಅದಕ್ಕಾಗಿ ಪರ್ಯಾಯ ಆರ್ಥಿಕ ವ್ಯವಸ್ಥೆಗೆ ಚಳುವಳಿ ರೂಪಿಸಬೇಕಿದೆ ಎಂದರು. ಈ ನಿಟ್ಟಿನಲ್ಲಿ ಮುಂದಿನ ದಿನಗಳಲ್ಲಿ ಮತ್ತೊಮ್ಮೆ ಚರ್ಚಿಸಿ ಹೋರಾಟವನ್ನು ರೂಪಿಸೋಣ ಎಂದು ತಿಳಿಸಿದರು. ಕಾರ್ಯಕ್ರಮದ ಆರಂಭದಲ್ಲಿ ಎಲ್. ಜಗನ್ನಾಥ್ ಸ್ವಾಗತಿಸಿದರೆ ಜಗದೀಶ್ ಸೂರ್ಯ ಕಾರ್ಯಕ್ರಮವನ್ನು ನಿರೂಪಣೆ ಮಾಡಿದರು.

ಸಭೆಯಲ್ಲಿ ಕೈಗೊಂಡ ನಿರ್ಣಯಗಳು

- ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲಿ ಖಾಲಿ ಇರುವ ಉದ್ಯೋಗಗಳನ್ನು ತುಂಬಬೇಕು, ಮುಚ್ಚಿದ ಕಾರ್ಖಾನೆಗಳನ್ನು ತೆರೆಯಬೇಕು, ಉದ್ಯೋಗ ಸೃಷ್ಟಿಸಬೇಕು;
- ಸ್ವಾಮಿನಾಥನ್ ಆಯೋಗದ ಶಿಫಾರಸ್ಸಿನಂತೆ ವೆಚ್ಚದ ಒಂದುವರೆ ಪಟ್ಟು ಬೆಲೆ ನಿಗದಿ ಮಾಡಬೇಕು. ಆ ಮೂಲಕ ಜನರ ಕೊಂಡುಕೊಳ್ಳುವ ಶಕ್ತಿಯನ್ನು ಹೆಚ್ಚಿಸಬೇಕು.
- ಕೇಂದ್ರ ಸರ್ಕಾರದ ಕಾರ್ಪೋರೇಟ್ ಪರವಾದ ನೀತಿಗಳನ್ನು ಬದಲಾಯಿಸಿ, ಜನಪರ ನೀತಿಗಳಿಗಾಗಿ ವಿಶಾಲ ತಳಹದಿಯ ಜನಾಂದೋಲನ ರೂಪಿಸಬೇಕು.
- ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳಿಗೆ ಪೂರಕವಾಗಿರುವ ಸಾರ್ವಜನಿಕ ಉದ್ದಿಮೆಗಳನ್ನು ಖಾಸಗೀಕರಣ ಮಾಡಬಾರದು.

ಕೇಂದ್ರ ಸರ್ಕಾರದ ಕಾರ್ಪೋರೇಟ್ ಪರ ನೀತಿಗಳನ್ನು ವಿರೋಧಿಸಿ, ಆರ್.ಸಿ.ಇ.ಪಿ. ಒಪ್ಪಂದ ವಿರೋಧಿಸಿ, ರೈತ ಕಾರ್ಮಿಕರ ಪರ ನೀತಿಗಳಿಗಾಗಿ, ಕೇಂದ್ರ ಕಾರ್ಮಿಕ ಸಂಘಟನೆಗಳು ಜನವರಿ 8, 2020ರಂದು ಕರೆ ನೀಡಿರುವ ಅಖಿಲ ಭಾರತ ಸಾರ್ವತ್ರಿಕ ಮುಷ್ಕರವನ್ನು ಮೈಸೂರು ಜಿಲ್ಲೆಯಲ್ಲಿ ಯಶಸ್ವಿಗೊಳಿಸಲು ತೀರ್ಮಾನಿಸಲಾಯಿತು.

ವರದಿ: ಜಗದೀಶ್ ಸೂರ್ಯ

ಚುನಾವಣೆ :– ಜಾತಿ, ಭ್ರಷ್ಟಾಚಾರಕ್ಕೆ ಪ್ರೇರಕ

(ದೇಶಪ್ರೇಮಿಯೊಬ್ಬರ ಚಿಂತನೆ)

ಭರತಖಂಡ ಬ್ರಿಟೀಷರ ಕಪಿಮುಷ್ಟಿಯಿಂದ ಸ್ವತಂತ್ರವಾಗಲು ಅದೆಷ್ಟೋ ಸ್ವಾತಂತ್ರ ಹೋರಾಟಗಾರರು, ಮಾಹಾನ್ ತ್ಯಾಗಿಗಳು, ರಾಷ್ಟ್ರಭಕ್ತರು ಪ್ರಾಣವನ್ನೆ ಪಣಕ್ಕಿಟ್ಟು ಸ್ವಾತಂತ್ರ ದೊರಕ್ಕಿಸಿಕೊಟ್ಟಿದ್ದಾರೆ. ಭಾರತೀಯರಾದ ನಾವು ಆ ದಿವ್ಯೆ ಚೇತನಗಳನ್ನು ದಿನನಿತ್ಯೆ ಸ್ಮರಿಸಿಕೊಂಡರೂ ಅವರ ಋಣ ತೀರಿಸಲಿಕ್ಕಾಗದು. ಅಂದು ಅನೇಕ ಭಾರತೀಯರಲ್ಲಿ ಲಕ್ಷ ಲಕ್ಷ ಜನರ ತ್ಯಾಗ ಬಲಿದಾನದ ಫಲವಾಗಿ ಇಂದು ನಾವು ಸರ್ವತಂತ್ರ ಸ್ವತಂತ್ರ ಗಣರಾಜ್ಯದಲ್ಲಿ ಸುಂದರವಾದ ಬದುಕನ್ನು ಕಟ್ಟಿಕೊಂಡಿದ್ದೇವೆ. 7 ರಿಂದ 8 ಲಕ್ಷ ಭಾರತೀಯರು ಬ್ರಿಟೀಷರ ಬಂದೂಕಿಗೆ ಎದೆಯನ್ನು ಕೊಟ್ಟು ದೇಶಕ್ಕಾಗಿ ಪ್ರಾಣಾರ್ಪನೆ ಮಾಡಿ ಅಮರರಾಗಿದ್ದಾರೆ.

ಜಗತ್ತಿನ ದಿವ್ಯ ಚೇತನ ಗಾಂಧಿಜೀಯವರ ಮಾತಿಗೆ ಬೆಲೆಕೊಟ್ಟು, ರೈತರು ವಕೀಲರು, ಶಿಕ್ಷಕರು, ದೇಶ ಪ್ರೇಮಿಗಳು, ಅನೇಕ ಮಹಿಳಾ ಹೋರಾಟಗಾರರು ತಮ್ಮ ಸಂಸಾರ ತೊರೆದು ಈ ನಾಡನ್ನು ಬ್ರಿಟೀಷರಿಂದ ಮುಕ್ತಗೊಳಿಸಿದ್ದಾರೆ. ಅಂದು ದೇಶದ ಸ್ವಾತಂತ್ರ್ಯಕ್ಕಾಗಿ ಬಲಿದಾನ ಮಾಡಿದ ಮಹಾನ್ ವ್ಯಕ್ತಿಗಳು ತಮ್ಮ ಸ್ವಂತ ಆಸ್ತಿಯನ್ನು ರಾಷ್ಟ್ರಕ್ಕೆ ಅರ್ಪಿಸಿ ರಾಷ್ಟ್ರಸೇವೆಮಾಡಿದ ಧೀಮಂತ ನಾಯಕರ ಚರಿತ್ರೆ ಸಾರಿ ಸಾರಿ ಹೇಳುತ್ತಿದೆ. ಅವರ ಪ್ರಾಮಾಣಿಕತನ, ಹಾಗೂ ಚಾರಿತ್ರಿಕ ಇತಿಹಾಸವನ್ನು ಅಧ್ಯಯನ ಮಾಡಿದ್ದೇವೆ. ಅಂದಿನ ನಮ್ಮ ರಾಷ್ಟ್ರನಾಯಕರು ನಮ್ಮ ದೇಶಕ್ಕೆ ಅಷ್ಟೇ ಅಲ್ಲದೇ ಜಗತ್ತಿನ ಆದರ್ಶ ನಾಯಕರಾಗುವ ಗುಣಗಳನ್ನು ಅಳವಡಿಸಿಕೊಂಡಿದ್ದರೆಂದು ಭಾರತೀಯರು ಹೆಮ್ಮೆ ಪಡಬೇಕಾಗಿದೆ.

ಪ್ರಸುತ ಭಾರತ 1950 ಜನೇವರಿ 26 ರಿಂದ ಸರ್ವತಂತ್ರ ಸ್ವತಂತ್ರ ಗಣರಾಜ್ಯವಾಗಿ ಸಂವಿಧಾನದ ನೀತಿ ನಿಯಮಗಳನ್ನು ಜಾರಿಗೆ ತಂದು, ಜಗತ್ತಿನಲ್ಲಿಯೆ ಅತೀ ದೊಡ್ಡ ಪ್ರಜಾಪ್ರಭುತ್ವ ದೇಶವಾಗಿ ಮಿಂಚುತ್ತದೆ. ನಮ್ಮ ದೇಶ ಎಲ್ಲರಂಗಗಳಲ್ಲಿ ಅಭಿವೃದ್ದಿಯ ಚಾಪು



ಮುಡಿಸೂತ್ತ ಆರ್ಥಿಕ, ಸಾಮಾಜಿಕ, ವೈಜ್ಞಾನಿಕ, ಕೃಷಿ ಹಾಗು ಶಿಕ್ಷಣ ರಂಗದಲ್ಲಿ ಮುಂದುವರೆದ ದೇಶವಾಗಿದೆ. ಇನ್ನೂ ಹಲವಾರು ಜಾಡುಗಟ್ಟಿದ ದೇಶದ ಸಮಸ್ಯೆಗಳು ಆರ್ಥಿಕ ಅಭಿವೃದ್ಧಿಗೆ ಕೊಡಲಿ ಪೆಟ್ಟು ಹಾಕುತ್ತಿವೆ. ದೇಶದಲ್ಲಿ ಬೃಹದ್ದಾಕಾರವಾಗಿ ಬೆಳೆದ ಭ್ರಷ್ಟಾಚಾರ, ಜಾತೀಯತೆ, ಬಂಡವಾಳ ಶಾಹಿಗಳ ಅಟ್ಟಹಾಸ, ಕೆಲವು ಬ್ಯಾಕುಗಳಲ್ಲಿ ಹಣ ಲೂಟಿ, ಸರಕಾರಿ ಅಧಿಕಾರಿಗಳ ಹಣದಾಸೆ, ರಾಜಕಾರಣಿಗಳ ವೈಭವದ ಜೀವನ ನೋಡುತ್ತ ರೈತರು, ಕಾರ್ಮಿಕರು, ಕಡು ಬಡವರು ಬದುಕುವದನ್ನು ನೋಡಿದರೆ, ಇದೆಂಥ ಪ್ರಜಾಪ್ರಭುತ್ವ ವೈವಸ್ಯೆ ಎಂದು ಚಿಂತನೆಗೈಯುತ್ತಿದ್ದಾರೆ.

ಇಂದು ಪ್ರಜಾಪ್ರಭುತ್ವದ ವೈವಸ್ಥೆಯಲ್ಲಿ ಪ್ರಜೆಗಳೇ ಪ್ರಭುಗಳೆನ್ನುವ ಚುನಾವಣೆಯ ಸಡಿಲು ನೀತಿಗಳೇ ಕಾರಣ. ಭಾರತದ ಪ್ರಜ್ಞಾವಂತ ಪ್ರಜೆಗಳು ತಮ್ಮನ್ನಾಳುವ ಜನಪ್ರತಿನಿಧಿಗಳನ್ನು ಆಯ್ಕೆ ಮಾಡುವ ಅತ್ಯಮೂಲ್ಯವಾದ ಮತದಾನದ ಹಕ್ಕು ನೀಡಿದ್ದು, ಈ ಜಗದ ಸೊರ್ಯ ಡಾ.ಅಂಬೇಡ್ಕರ ಹಾಗೂ ಅನೇಕ ಮಹಾನ ಸಂವಿಧಾನ ತಜ್ಞರು ನೀಡಿದ ಫಲ. ನಮ್ಮ ಸಂವಿಧಾನದಲ್ಲಿರುವ ಚುನಾವಣೆಯ ನೀತಿ ನಿಯಮಗಳು, ಅದರ ಪರಮಾಧಿಕಾರ ಹಾಗೂ ವ್ಯಾಪ್ತಿಯನ್ನು ಸ್ಪಷ್ಠವಾಗಿ ಪರಿಚಯಸಿ ದೇಶದಲ್ಲಿ ಜಾರಿಗೆ ತಂದವರು ದಿವಂಗತ ಖಿ. ಓ ಶೇಷನ. ಆದರೆ ನಮ್ಮ ಚತುರ ರಾಜಕಾರಣಿಗಳು ಚುನಾವಣೆ ಆಗಮಿಸುತ್ತಿದ್ದಂತೆ ತಮ್ಮದೇ ಆದ ಕುಟೀಲ ರಾಜನೀತಿಗಳನ್ನು ಬಳಸುತ್ತಾರೆ.

5 ವರ್ಷಕ್ಕೊಮ್ಮೆ ನಡೆಯುವ ಚುನಾವಣೆಯಿಂದ ಅಧಿಕಾರದ ಗದ್ದುಗೆ ಹಿಡಿಯಲು ಹರಸಾಹಸ ಮಾಡುತ್ತ, ಹಣ ಹೆಂಡ ಹಂಚುತ್ತ, ಬಾಡೂಟ ನೀಡುತ, ಜಾತಿ ಮತಗಳನ್ನು ಲೆಕ್ಕಹಾಕುತ್ತ, ಅಧಿಕಾರ ಪಡೆದುಕೊಂಡು, ಕೋಟಿ ಕೋಟಿ ಹಣ ಸಂಗ್ರಹ ಮಾಡುವದು, ತಮ್ಮ ಅಧಿಕಾರದ ಕುರ್ಚಿ ಬೇರೆ ಜನಾಂಗದವರಿಗೆ ದಕ್ಕ ಬಾರದೆಂದು ಮಗ, ಹೆಂಡತಿಗೆ ಸ್ಪರ್ಧಿಸಲು ಅವಕಾಶ ಕೊಡಿ ಎಂದು ಹಟ ಹಿಡಿಯುತ್ತ, ಇಲ್ಲವೆ ಪಕ್ಷಾಂತರ ಮಾಡುತ್ತ ಮಾದಲಿನ ರಾಜರಂತೆ (ಎಲ್ಲರೂಅಲ್ಲ) ವೈಭವದ ಜೀವನ ನಡೆಸುತ್ತ ಸರಕಾರದ ವೆಚ್ಚದಲ್ಲಿ ಕುಟುಂಬ ಸಮೇತ ಪ್ರಪಂಚ ಸುತ್ತುತ್ತ ಕಾಲ ಹರಣ ಮಾಡುವ ನಾಯಕರನ್ನು ಕಾಣುತ್ತೇವೆ.

⇨

ಮೋದಿ ಸರಕಾರ ಶ್ರೀಮಂತರ ಪರ, ಬಡವರ ವಿರೋಧಿ

ಉಡುಪಿ ಜಿಲ್ಲಾಧಿಕಾರಿ ಕಚೇರಿ ಎದುರು ನಿವೇಶನ ರಹಿತರ ಅನಿರ್ದಿಷ್ಟಾವಧಿ ಪ್ರತಿಭಟನೆಯಲ್ಲಿ– *ತಿರುನಾವಕ್ಕರಸು* ಆರೋಪ



ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸರಕಾರವು ಶ್ರೀಮಂತ ಬಂಡವಾಳಶಾಹಿಗಳ ಪರವೇ ಹೊರತು, ಬಡವರು, ಕಾರ್ಮಿಕರ ಪರ ಇಲ್ಲ. ಬಡವರಿಗೆ ಸೌಲಭ್ಯಗಳನ್ನು ನೀಡುವ ಬದಲು ಇರುವ ಸೌಲಭ್ಯಗಳನ್ನು ಕಿತ್ತುಕೊಳ್ಳುವ ಕೆಲಸ ಮಾಡುತ್ತಿದೆ ಎಂದು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಅಧ್ಯಕ್ಷ ಕಾಮ್ರೆಡ್ ತಿರುನಾವಕ್ಕರಸು ಆರೋಪಿಸಿದರು.

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಉಡುಪಿ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಜಿಲ್ಲಾಧಿಕಾರಿ ಕಚೇರಿ ಎದುರು 18 ನವಂಬರ್ 2019 ರಿಂದ ನಿವೇಶನ ರಹಿತರ ಅನಿರ್ದಿಷ್ಟಾವಧಿ ಧರಣಿ ಮುಷ್ಕರಕ್ಕೆ ಚಾಲನೆ ಕೊಟ್ಟು, ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರು. ಪ್ರತಿಯೊಬ್ಬರಿಗೂ ನಿವೇಶನ ಕೊಡುವುದು ಕೇಂದ್ರ ಹಾಗೂ ರಾಜ್ಯ ಸರಕಾರಗಳ ಜವಾಬ್ದಾರಿ. ಆದರೆ ಕಳೆದ ಏಳು ದಶಕಗಳಿಂದ ಕಾಂಗ್ರೇಸ್ ಹಾಗೂ ಬಿಜೆಪಿ ಸರಕಾರಗಳು ನಿವೇಶನ ರಹಿತರನ್ನು ಕಣ್ಣೆತ್ತಿಯೂ ನೋಡಿಲ್ಲ, ಈಗಿನ ಮೋದಿ ಸರಕಾರವೂ ಅದೇ ಹಾದಿಯಲ್ಲಿ ಸಾಗಿದೆ ಎಂದು ದೂರಿದರು.

ಪ್ರಸ್ತುತ ಕೇಂದ್ರ ಸರಕಾರವು ಬಂಡವಾಳ ಶಾಹಿಗಳಿಗೆ ರೂ 17 ಲಕ್ಷ ಕೋಟಿ ನೀಡಿದ್ದು, ರೂ.3500 ಲಕ್ಷ ಕೋಟಿ ತೆರಿಗೆ ಮನ್ನಾ ಮಾಡಿದೆ, ಆದರೆ ಬಡವರಿಗೆ ಉದ್ಯೋಗ ನೀಡದೆ ವಂಚನೆ ಮಾಡಲಾಗುತ್ತಿದೆ. ಸಾಮಾಜಿಕ ಭದ್ರತೆಗೆ ಕೇಂದ್ರ ಸರಕಾರ ನೀಡುತ್ತಿರುವ ಅನುದಾನವನ್ನು ಕಡಿತ ಮಾಡಲಾಗಿದೆ. ಸರಕಾರ ಆರ್ಥಿಕ ಕುಸಿತಕ್ಕೆ ಒಳಗಾಗಿದೆ. ಸರಕಾರದ ಖಜಾನೆ ಲೂಟಿಯಾಗಿದೆ. ಸರಕಾರಿ ನೌಕರರಿಗೆ ಸಂಬಳ ಕೊಡಲು ಹಣ ಇಲ್ಲವಾಗಿದೆ ಎಂದು ಹೇಳಿದರು. ಲೋಕಸಭೆ ಚುನಾವಣೆ ಸಂದರ್ಭ ಬಂಡವಾಳ ಶಾಹಿಗಳಿಂದ ರೂ.1150 ಕೋಟಿ ಪಾರ್ಟಿಫಂಡ್ ದೇಣಿಗೆ ರೂಪದಲ್ಲಿ ಪಡಕೊಂಡಿದೆ. ಆದ್ದರಿಂದ ಸರಕಾರ ಎಂದಿಗೂ ಅವರ ಪರವಾಗಿಯೇ ಇರುತ್ತದೆ ಎಂದು ಟೀಕಿಸಿದರು. ಸರಕಾರ ಜಿಲ್ಲೆಯಲ್ಲಿ ಸ್ವಂತ ಮನೆ ಇಲ್ಲದವರನ್ನು ಗುರುತಿಸಿ ಅವರಿಗೆ ನಿವೇಶನ ಒದಗಿಸಲು ಜಾಗ ಗುರುತಿಸಿ ಹಕ್ಕುಪತ್ರ ನೀಡಬೇಕೆಂದು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಕೃಷಿ ಕೂಲಿಕಾರರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೆಂಕಟೇಶ ಕೋಣಿ, ಜಿಲ್ಲೆಯ ಅರ್ಹ ಅರ್ಜಿದಾರರಿಗೆ ನಿವೇಶನ ಒದಗಿಸಲು ಸರಕಾರಿ/ಖಾಸಗಿ ಜಾಗ ಗುರುತಿಸಿ ಹಕ್ಕು ಪತ್ರ ನೀಡಬೇಕು, ಜಿಲ್ಲೆಯ ಡೀಮ್ಡ್ ಪಾರೆಸ್ಟ್ ಸಮಸ್ಯೆಯನ್ನು ಬಗೆಹರಿಸಬೇಕು, ಕುಂದಾಪುರ ತಾಲೂಕಿನಲ್ಲಿ ಖಾಸಗಿ ಜಾಗ ಕರೀದಿಸಲು ಪ್ರಸ್ತಾವನೆ ಸಲ್ಲಿಸಬೇಕು ಎಂದು ಸರಕಾರವನ್ನು ಒತ್ತಾಯಿಸಿದರು.

ಬೇಡಿಕೆಗಳು:

ಉಡುಪಿ ಹೋಬಳಿಯಲ್ಲಿ ಸರಕಾರಿ ದಾಖಲೆ ಪ್ರಕಾರ 25 ಗ್ರಾಮಗಳಲ್ಲಿ 280 ಎಕ್ರೆ ಜಾಗವನ್ನು 985 ಮಂದಿ ಹಾಗೂ ಕಾಪು ಹೋಬಳಿಯಲ್ಲಿ 55 ಗ್ರಾಮಗಳಲ್ಲಿ 1937 ಮಂದಿ ಒಟ್ಟು 687.73 ಎಕ್ರೆ ಸರಕಾರಿ ಜಾಗವನ್ನು ಅತಿಕ್ರಮಿಸಿಕೊಂಡಿದ್ದು ಕೂಡಲೆ ಇದನ್ನು ತೆರವುಗೊಳಿಸಿ, ಬಡ ನಿವೇಶನ ರಹಿತರಿಗೆ ಹಂಚಬೇಕು. ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಸುಮಾರು 1000 ಕ್ಕೂ ಅಧಿಕ ನಿವೇಶನ ರಹಿತರಿಂದ ತಲಾ ರೂ:500=00 ನಂತೆ ಠೇವಣಿ ಪಡೆದು 19 ವರ್ಷ ಕಳೆದರೂ ನಿವೇಶನ ಹಂಚಿಕೆ ಮಾಡದೆ ವಂಚನೆ ಎಸಗಲಾಗಿದೆ.



ಕೊರಂಗ್ರಪಾಡಿ, ಪುತ್ತೂರು ಕೆಳಾರ್ಕಳ ಬೆಟ್ಟು ಹಾಗೂ 80 ನೇ ಬಡಗುಬೆಟ್ಟು ಗ್ರಾಮಗಳಲ್ಲಿ ಗುರುತಿಸಲಾಗಿರುವ 115.66 ಎಕ್ರೆ ಜಾಗದಲ್ಲಿ ಬಡಾವಣೆ ಗಳನ್ನು ರಚಿಸಿ ನಿವೇಶನ ಹಂಚಬೇಕು. ಕುಂದಾಪುರ ತಾಲೂಕಿನಲ್ಲಿ 224 ಮಂದಿ ಯಿಂದ ಒಟ್ಟು 368.18 ಎಕ್ರೆ ಸರ್ಕಾರಿ ಭೂಮಿ ಅತಿಕ್ರಮಣಗೊಂಡಿದ್ದು ಕೂಡಲೇ ಅದನ್ನು ತೆರವುಗೊಳಿಸಿ ನಿವೇಶನ ರಹಿತ ಅರ್ಜಿದಾರರಿಗೆ ಹಂಚಬೇಕು. ಉಡುಪಿ ಜಿಲ್ಲೆಯ ಡೀಮ್ಡ್ ಫಾರೆಸ್ಟ್ ಸಮಸ್ಯೆಯನ್ನು ಬಗೆಹರಿಸಿ ಸರಕಾರಿ ಜಾಗದಲ್ಲಿ ವಾಸವಾಗಿರುವ ಮಂದಿಗೆ ಹಕ್ಕುಪತ್ರ ನೀಡಬೇಕು. ನಿವೇಶನ ರಹಿತರ ಧರಣಿ ಮುಷ್ಕರದ 2 ನೇ ದಿನದ ಆರಂಭದಲ್ಲಿ ಸಿಐಟಿಯು ಹಿರಿಯ ಮುಖಂಡ ಪಿ.ವಿಶ್ವನಾಥ ರೈ ಧರಣಿ ಮುಷ್ಕರದ ಹೋರಾಟಕ್ಕೆ ಚಾಲನೆ ಕೊಟ್ಟು ನಿವೇಶನ ರಹಿತರ ನ್ಯಾಯ ಸಮ್ಮತ ಬೇಡಿಕೆಗಳನ್ನು ಈ ಕೂಡಲೇ ಪರಿಹರಿಸಬೇಕು ಎಂದು ಜಿಲ್ಲಾಡಳಿತವನ್ನು ಒತ್ತಾಯ ಮಾಡಿದರು, ನಿವೇಶನ ರಹಿತರಿಗೆ ನ್ಯಾಯ ಸಿಗದಿದ್ದಲ್ಲಿ ಜಿಲ್ಲೆಯ ಸಂಘಟಿತ ಕಾರ್ಮಿಕ ವರ್ಗ ಸಿಐಟಿಯು ನೇತೃತ್ವದಲ್ಲಿ ನಿರ್ಣಾಯಕ ಹೋರಾಟವನ್ನು ದುಮುಕಲಿದೆ ಎಂದು ಜಿಲ್ಲಾಡಳಿತವನ್ನು ಎಚ್ಚರಿಸಿದರು.ಸಿಐಟಿಯು ಮುಖಂಡರಾದ ಬಾಲಕೃಷ್ಣ ಶೆಟ್ಟಿ, ಕೆ. ಶಂಕರ, ನಿವೇಶನ ರಹಿತರ ಹೋರಾಟಕ್ಕೆ ಬೆಂಬಲಿಸಿ ಮಾತನಾಡಿದರು.

ಜಿಲ್ಲಾಧಿಕಾರಿ ಕಚೇರಿ ಎದುರಿನ ನಿವೇಶನ ರಹಿತರ ಹೋರಾಟದಲ್ಲಿ ಜಿಲ್ಲೆಯಾದ್ಯಂತ ಸುಮಾರು 60 ಹಳ್ಳಿಗಳಿಂದ ನಿಗದಿ ಪಡಿಸಿದಂತೆ ವಿವಿಧ ದಿನಗಳಲ್ಲಿ ಹಂತ ಹಂತವಾಗಿ ಹೋರಾಟದಲ್ಲಿ ಬಹಳ ಉತ್ಸುಕತೆಯಿಂದ ನಿವೇಶನ ರಹಿತರು ಭಾಗವಹಿಸಿದ್ದಾರೆ. ಅಂತೆಯೇ ಸಾಲಿಗ್ರಾಮ ಪಟ್ಟಣ ಪಂಚಾಯತ್ ವ್ಯಾಪ್ತಿಗೊಳಪಟ್ಟ, ಗುಂಡ್ಮಿ, ಚಿತ್ರಪಾಡಿ, ಕಾರ್ಕಡ, ಪೇರಂಪಳ್ಳಿ ಹಾಗೂ ಕೋಟೇಶ್ವರ, ಬೀಜಾಡಿ, ಗೋಪಾಡಿ, ತೆಕ್ಕಟ್ಟೆ, ಕುಂಭಾಶಿ, ಹಂಗಳೂರು ಗ್ರಾಮಗಳ ಬಡ ನಿವೇಶನ ರಹಿತ ಅರ್ಹ ಅರ್ಜಿದಾರರು ಸುಮಾರು 300 ಕ್ಕೂ ಹೆಚ್ಚು ಮಂದಿ ಹೋರಾಟದಲ್ಲಿ ಭಾಗವಹಿಸಿದ್ದರು. 3 ನೇ ದಿನದ ಅನಿರ್ದಿಷ್ಟಾವಧಿ ಧರಣಿಯನ್ನು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್–ಡಿವೈಎಫ್ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ ಚಾಲನೆ ನೀಡಿ ಮಾತನಾಡುತ್ತಾ, ಜಿಲ್ಲೆಯಾದ್ಯಂತ ಮನೆ ನಿವೇಶನ ರಹಿತರು ತುಂಡು ಭೂಮಿಗಾಗಿ ಜಿಲ್ಲಾಧಿಕಾರಿ ಕಚೇರಿ ಎದುರು ನ್ಯಾಯಯುತ ಭೂಮಿ ಹಕ್ಕಿನ ಬೇಡಿಕೆಗಳನ್ನು ಸರಕಾರ ಕೂಡಲೇ ಪರಿಹರಿಸಬೇಕು ಎಂದು ಜಿಲ್ಲಾಡಳಿತವನ್ನು ಒತ್ತಾಯಿಸಿದರು. ಇಲ್ಲವಾದರೆ ನಿವೇಶನ ರಹಿತರ ಪರವಾಗಿ ಯುವಜನ ಸಂಘಟನೆ ಬೆಂಬಲಿಸಿ ಬೀದಿಗಿಳಿದು ಬೇಡಿಕೆ ಈಡೇರಿಸಲು ತೀವ್ರವಾದ ಹೋರಾಟಕ್ಕೆ ಮುಂದಾಗುವುದು ಎಂದು ಸರಕಾರವನ್ನು ಎಚ್ಚರಿಸಿದರು. ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಮನವಿ ಸ್ವೀಕರಿಸಿ ಧರಣಿ ನಿರತರನ್ನುದ್ದೇಶಿಸಿ ಮಾತನಾಡಿ, ಇದೇ 29, ನವಂಬರ್ 2019 ರಂದು ಮಾನ್ಯ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಕೃಷಿ ಕೂಲಿಕಾರ ಮುಖಂಡರ ಜತೆ ಅಧಿಕಾರಿಗಳ ಜಂಟಿ ಸಭೆ ನಡೆಸಿ, ಬೇಡಿಕೆ ಈಡೇರಿಸಲಾಗುವುದು ಎಂಬ ಭರವಸೆ ಹಿನ್ನೆಲೆಯಲ್ಲಿ ಧರಣಿ ಮುಷ್ಕರವನ್ನು ಹಿಂಪಡೆಯಲಾಯಿತು. ಕೃಷಿ ಕೂಲಿಕಾರರ ಸಂಘದ ಜಿಲ್ಲಾಧ್ಯಕ್ಷ ಯು. ದಾಸ ಭಂಡಾರಿ ಸಮಾರೋಪ ಭಾಷಣ ಮಾಡಿದರು. ನಿವೇಶನ ರಹಿತರ ಭೂಮಿ ಹಕ್ಕಿನ ಯಶಸ್ವಿ ಹೋರಾಟದಲ್ಲಿ ಮುಖಂಡರಾದ ಬಾಲಕೃಷ್ಣ ಶೆಟ್ಟಿ, ಕೆ. ಶಂಕರ, ಮಹಾಬಲ ವಡೇರ ಹೋಬಳಿ, ಸುರೇಶ ಕಲ್ಲಾಗರ, ಎಚ್. ನರಸಿಂಹ, ಕವಿರಾಜ್ ಎಸ್.ಎಚ್., ವಿಠಲ ಪೂಜಾರಿ, ಶಶಿಧರ ಗೊಲ್ಲ, ನಳಿನಿ ಎಸ್., ಉಮೇಶ ಕುಂದರ್, ನಾಗರತ್ನ ನಾಡ, ಪದ್ಮಾವತಿ ಶೆಟ್ಟಿ, ಕಾಂಚನಮಾಲ, ಕುಶಲ, ಬಲ್ಕೀಸ್, ರಾಜೀವ ಪಡುಕೋಣೆ, ಮನೋರಮ ಭಂಡಾರಿ, ಅಮ್ಮಯ್ಯ ಪೂಜಾರಿ, ಬಿಜೂರು, ರಾಘವೇಂದ್ರ ಉಪ್ಪುಂದ, ಮೊದಲಾದವರು ಇದ್ದರು.

ವರದಿ: **ವೆಂಕಟೇಶ ಕೋಣಿ**

⇨ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆ ಅತ್ಯಂತ ಪವಿತ್ರವಾದ ಕಾರ್ಯವಾಗಿದೆ. ಭಾರತ ಸರಕಾರದ ಚುನಾವಣೆ ಆಯೋಗ ಅತೀ ಬಿಗಿಯಾದ ಕಾಯ್ದೆಕಾನೂನುಗಳನ್ನು ಜಾರಿಗೆ ತಂದು ಅಫರಾಧಿಗಳಗೆ, ಬ್ರಷ್ಠರಿಗೆ ಹಾಗೂ ಕೊಲೆಗಡುಕರಿಗೆ, ಭಾರತೀಯರ ಹೃದಯ ಸಿಂಹಾಸನಗಳಾದ ವಿಧನಸೌಧ ಹಾಗೂ ಸಂಸತ್ತ ಭವನಕ್ಕೆ ಪ್ರವೇಶಿಸದಂತೆ ಆಯೋಗ ಎಚ್ಚರವಹಿಸಬೇಕಾಗಿದೆ. ಇಂದು ದೇಶದಲ್ಲಿ ಬಡತನದ ರೇಖೆಗಿಂತ ಕೆಳಗಿರುವ ಕೋಟಿ ಕೋಟಿ ಜನರ ಬದುಕು ಹಸನಾಗಲು ಚುನಾವಣೆಯ ನೀತಿ ನಿಯಮಗಳು ಕಾಲ ಕಾಲಕ್ಕೆ ಬದಲಾವಣೆ ಮಾಡಿ ಅತೀಕಠಿಣ ಹಾಗೂ ವೈಜ್ಞಾನಿಕ ನಿಯಮಗಳನ್ನು ದೇಶದಲ್ಲಿ ಜಾರಿಗೆ ತಂದು ಜಗತ್ತಿನ ಅತೀ ದೊಡ್ಡ ಪ್ರಜಾಪ್ರಭುತ್ವ ಇನ್ನಷ್ಟು ಅರ್ಥ ಪೂರ್ಣವಾಗಲೆಂದು ಆಶಿಸುವೆ.

ಪರಶುರಾಮ ಮಡಿವಾಳರ

ವಿಟ್ಲದಲ್ಲಿ ನಿವೇಶನ ರಹಿತರ ಸಮಾವೇಶ:

ದ.ಕ.ಜಿಲ್ಲೆ ಬಂಟ್ವಾಳ ತಾಲೂಕಿನ ವಿಟ್ಲದಲ್ಲಿ ವಿಟ್ಲ ಪಟ್ಟಣ ಪಂಚಾಯತ್ ವ್ಯಾಪ್ತಿಯ ನಿವೇಶನ ರಹಿತರ ಮತ್ತು ಅಕ್ರಮ ಸಕ್ರಮದಾರರ ಸಮಾವೇಶವು ನವಂಬರ್ 17 ರಂದು ನಡೆಯಿತು. ಡಿವೈಎಫ್ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದರು.

ಸರಕಾರಿ ಭೂಮಿಗಳು ಶ್ರೀಮಂತರ ಪಾಲಾಗದಂತೆ ನೋಡಿಕೊಂಡು ನಿವೇಶನ ರಹಿತರಿಗೆ ಹಂಚಲು ಸರಕಾರ ಮುಂದಾಗಬೇಕೆಂದು ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಸಿಐಟಿಯು ದ.ಕ. ಜಿಲ್ಲಾಧ್ಯಕ್ಷ ಜೆ.ಬಾಲಕೃಷ್ಣ ಶೆಟ್ಟಿ ಹೇಳಿದರು.

ನಿವೇಶನ ರಹಿತರ ಹೋರಾಟ ಸಮಿತಿ ಅಧ್ಯಕ್ಷ ಹಾಗೂ ಕರ್ನಾಟಕ ಪ್ರಾಂತ ರೈತ ಸಂಘದ ತಾಲೂಕು ಮುಖಂಡ ರಾಮಣ್ಣ ವಿಟ್ಲ, ಡಿವೈಎಫ್ಐ ಬಂಟ್ವಾಳ ತಾಲೂಕು ಅಧ್ಯಕ್ಷ ಸುರೇಂದ್ರ ಕೋಟ್ಯಾನ್ ಸಮಾವೇಶವನ್ನುದ್ದೇಶಿಸಿ ಮಾತನಾಡಿದರು.

ಬಂಟ್ವಾಳ ಆಸ್ಪತ್ರೆ ಹುದ್ದೆ ಭರ್ತಿಗೊಳಿಸಲು ಡಿವೈಎಫ್ಐ ಒತ್ತಾಯ:

ಬಂಟ್ವಾಳ ಸರಕಾರೀ ಆಸ್ಪತ್ರೆಯ ಅವ್ಯವಸ್ಥೆಗಳನ್ನು ಸರಿಪಡಿಸಲು ಹಾಗೂ ಬಂಟ್ವಾಳ ಸರಕಾರೀ ಆಸ್ಪತ್ರೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಬೇಕೆಂದು ಆಗ್ರಹಿಸಿ, ಬಂಟ್ವಾಳ ತಾಲೂಕು ಡಿವೈಎಫ್ಐ ನೇತೃತ್ವದಲ್ಲಿ ನವಂಬರ್ 17 ರಂದು ಬಂಟ್ವಾಳ ಸರಕಾರೀ ಆಸ್ಪತ್ರೆಯ ಮುಂಭಾಗದಲ್ಲಿ ಧರಣಿ ಸತ್ಯಾಗ್ರಹವನ್ನು ನಡೆಸಲಾಯಿತು.

ಧರಣಿ ಸತ್ಯಾಗ್ರಹವನ್ನು ಉದ್ದೇಶಿಸಿ ಡಿವೈಎಫ್ಐ ದ.ಕ.ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್ ಮಾತನಾಡಿದರು. ಡಿವೈಎಫ್ಐ ಬಂಟ್ವಾಳ ತಾಲೂಕು ಅಧ್ಯಕ್ಷ ಸುರೇಂದ್ರ ಕೋಟ್ಯಾನ್, ಕಾರ್ಯದರ್ಶಿ ತುಳಸೀದಾಸ್ ವಿಟ್ಲ, ಕಾರ್ಮಿಕ ಮುಖಂಡ ರಾಮಣ್ಣ ವಿಟ್ಲ ಕೂಡಾ ಧರಣಿ ನಿರತರನ್ನು ಉದ್ದೇಶಿಸಿ ಮಾತನಾಡಿದರು. ಡಿವೈಎಫ್ಐ ಮಾಜಿ ಮುಖಂಡರಾದ ಉದಯಕುಮಾರ್, ಜನಾರ್ಧನ ಕುಲಾಲ್, ಹಿರಿಯ ಕಾರ್ಮಿಕ ಮುಖಂಡ ಸಂಜೀವ ಬಂಗೇರ ಈ ಧರಣಿ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು.

“ಖಾಸಗೀಕರಣವನ್ನು ನಿಲ್ಲಿಸಿ-ಸಾರ್ವಜನಿಕ ಆಸ್ತಿಗಳನ್ನು ಉಳಿಸಿ”- ಸಿಪಿಐ(ಎಂ) ಪೊಲಿಟ್‌ಬ್ಯುರೊ ಕರೆ

ಅಯೋಧ್ಯಾ ವಿವಾದ:

ತೀರ್ಪು ನೀಡಲಾಗಿದೆ ; ನ್ಯಾಯ ನೀಡಿಲ್ಲ

ಅಯೋಧ್ಯಾ ವಿವಾದವನ್ನು ಮಾತುಕತೆಯ ಮೂಲಕ ಇತ್ಯರ್ಥಗೊಳಿಸಿಕೊಳ್ಳಬೇಕು, ಅದು ಸಾಧ್ಯವಾಗದಿದ್ದರೆ ಅದನ್ನು ಬಗೆಹರಿಸುವ ಏಕೈಕ ದಾರಿಯೆಂದರೆ ಒಂದು ನ್ಯಾಯಾಲಯದ ತೀರ್ಪಿನ ಮೂಲಕ, ಎಂದು ಸಿಪಿಐ(ಎಂ) ಸದಾ ಹೇಳುತ್ತ ಬಂದಿದೆ. ಈ ರೀತಿಯಲ್ಲಿ ಮಾತ್ರವೇ ಕಾನೂನಿನ ಆಳ್ವಿಕೆಯಿರುವ ಒಂದು ಜಾತ್ಯತೀತ ಗಣರಾಜ್ಯ ಇಂತಹ ಒಂದು ವಿವಾದವನ್ನು ನಿಭಾಯಿಸಬಹುದು. ಈಗ ತೀರ್ಪನ್ನು ನೀಡಲಾಗಿದೆ. ಆದರೆ ಈ ತೀರ್ಪಿನ ಕೆಲವು ಪ್ರಮೇಯಗಳು ಗಂಭೀರ ಪ್ರಶ್ನೆಗಳನ್ನು ಎತ್ತಿವೆ ಎಂದು ಪೊಲಿಟ್‌ಬ್ಯುರೊ ಅಭಿಪ್ರಾಯಪಟ್ಟಿದೆ.

ಮುಖ್ಯ ನ್ಯಾಯಾಧೀಶರ ನೇತೃತ್ವದ ಐವರು ಸದಸ್ಯರ ಸಂವಿಧಾನ ಪೀಠ ಸಂವಿಧಾನಿಕ ಮೌಲ್ಯಗಳಿನ್ನು ಎತ್ತಿ ಹಿಡಿಯಲು ತಾನು ಬದ್ಧ ಎಂದೂ, “ಆಸ್ತಿಯನ್ನು ಕುರಿತ ನಾಗರಿಕ ದಾವೆಗಳ ನ್ಯಾಯನಿರ್ಣಯ ಜಾತ್ಯತೀತ ಪರಿಧಿಯೊಳಗೆ ಇರಬೇಕು..”, “ಹಕ್ಕುದಾರಿಕೆಯನ್ನು ನಂಬಿಕೆ ಮತ್ತು ವಿಶ್ವಾಸದ ಆಧಾರದಲ್ಲಿ ಸ್ಥಾಪಿಸಲು ಸಾಧ್ಯವಿಲ್ಲ..” ಎಂದೂ ಮತ್ತೆ-ಮತ್ತೆ ಹೇಳುತ್ತದೆ, ಆದರೆ ತೀರ್ಪಿನ ಕೊನೆಯಲ್ಲಿ ಕಾಣುವ ಫಲಿತಾಂಶದಲ್ಲಿ ಮಾತ್ರ ವಿವಾದದ ಒಂದು ಪಕ್ಷದ ನಂಬಿಕೆ ಮತ್ತು ವಿಶ್ವಾಸಗಳಿಗೆ ಅಗ್ರಸ್ಥಾನ ನೀಡಲಾಗಿದೆ. ಈ ಮೊಕದ್ದಮೆಯ ಅರ್ಜಿದಾರರ ದಾವೆಗಳನ್ನು ನಿಭಾಯಿಸುವ ಬದಲು ಈ ತೀರ್ಪು ಹಿಂದೂಗಳು ಮತ್ತು ಮುಸ್ಲಿಮರ ಬಗ್ಗೆ ಹೇಳುತ್ತ ವಿಷಯಾಂತರ ಮಾಡುತ್ತದೆ ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಡಿಸೆಂಬರ್ 1992ರಲ್ಲಿ ಬಾಬ್ರಿ ಮಸೀದಿಯನ್ನು ಧ್ವಂಸ ಮಾಡಿದ್ದು “ಕಾನೂನಿನ ಗಂಭೀರ ಉಲ್ಲಂಘನೆ” ಎಂದು ನಿಸ್ಸಂದಿಗ್ಧವಾಗಿ ಹೇಳುತ್ತದೆ. ಆದರೆ, ಅಂತಿಮವಾಗಿ ಆ ಜಾಗವನ್ನು ಈ ಕ್ರಿಮಿನಲ್ ದಾಳಿಗೆ ಹೊಣೆಯಾದ ಶಕ್ತಿಗಳಿಗೇ ಒಪ್ಪಿಸುತ್ತದೆ. 1989ರಲ್ಲಿ ನ್ಯಾಯಾಲಯದಲ್ಲಿ ಸಲ್ಲಿಸಿದ ಅರ್ಜಿಯನ್ನು ವಿಶ್ವ ಹಿಂದೂ ಪರಿಷದ್‌ನ ಒಬ್ಬ ಮುಖಂಡರು ಪ್ರತಿನಿಧಿಸಿದ್ದರು. ಆ ಸಂಘನೆಯ ನೇತೃತ್ವದ ಚಳುವಳಿಯೇ ಬಾಬ್ರಿ ಮಸೀದಿ ಧ್ವಂಸಕ್ಕೆ ಹಾದಿ ಮಾಡಿಕೊಟ್ಟದ್ದು.

ಡಿಸೆಂಬರ್ 1949ರಲ್ಲಿ ಮಸೀದಿಯೊಳಗೆ ಕಾನೂನುಬಾಹಿರವಾಗಿ ಮೂರ್ತಿಗಳನ್ನಿಟ್ಟು ಮಸೀದಿಯನ್ನು ಅಪವಿತ್ರಗೊಳಿಸಿದ್ದು ಕೂಡ ಒಂದು ಗಂಭೀರ ಕಾನೂನು ಉಲ್ಲಂಘನೆ ಎಂದು ತೀರ್ಪು ಹೇಳುತ್ತದೆ. ಆದರೂ ಇಡೀ ವಿವಾದಿತ ಜಾಗವನ್ನು ಕಾನೂನಿನ ಉಲ್ಲಂಘನೆ ಮಾಡಿದವರಿಗೇ ವಹಿಸಿ ಕೊಟ್ಟಿದೆ.

ಮಸೀದಿ ಕಟ್ಟಲು ಅಲ್ಲಿದ್ದ ಒಂದು ಮಂದಿರವನ್ನು ಕೆಡವಲಾಗಿದೆ ಎಂಬ ಹಿಂದುತ್ವ ಶಕ್ತಿಗಳ ದಾವೆಗೆ ಯಾವುದೇ ಸಾಕ್ಷ್ಯವನ್ನು ಭಾರತೀಯ ಪುರಾತತ್ವ ಸರ್ವೆ(ಎ.ಎಸ್.ಐ.) ಕಂಡುಕೊಂಡ ಸಂಗತಿಗಳು ಒದಗಿಸುವುದಿಲ್ಲ ಎಂದು ತೀರ್ಪು ಸ್ಪಷ್ಟವಾಗಿ ಹೇಳುತ್ತದೆ. ಆದರೆ, ಮುಂದುವರೆದು, 1528 ಮತ್ತು 1857ರ ನಡುವೆ ಬಾಬ್ರಿ ಮಸೀದಿಯ ಸಮಸ್ತ ರಚನೆ ಕೇವಲ ಮುಸ್ಲಿಮರ ಸುಪರ್ದಿಯಲ್ಲಿ ಇತ್ತು ಎಂದು ಸೂಚಿಸುವ ಯಾವುದೇ ಪುರಾವೆಯನ್ನು ನೀಡಲಾಗಿಲ್ಲ ಎಂದು ಹೇಳುತ್ತದೆ. 1528ರಲ್ಲಿ ಮಸೀದಿಯನ್ನು ಕಟ್ಟಿದಂದಿನಿಂದ 1856ರಲ್ಲಿ ಬ್ರಿಟಿಶರು ಅವಧ್ ಸಂಸ್ಥಾನವನ್ನು ವಶಪಡಿಸಿಕೊಳ್ಳುವ ವರೆಗೆ ಮೂರು ಶತಮಾನಗಳಿಗೂ ಹೆಚ್ಚು ಕಾಲ ಅದು, ಮೊದಲಿಗೆ ಮೊಗಲರ, ನಂತರ ಅವಧ್ ನವಾಬರ ಆಳ್ವಿಕೆಯಲ್ಲಿ ಇತ್ತು. 1857ರ ಮೊದಲು ವಿವಾದವಿರಲಿಲ್ಲ ಎಂಬ ಸಂಗತಿ ಅದು ಸಂಪೂರ್ಣವಾಗಿ ಮುಸ್ಲಿಮರ ಸ್ವಾಧೀನದಲ್ಲಿ ಇರಲಿಲ್ಲ, ಅಥವ ಅದನ್ನು ಪ್ರಾರ್ಥನೆ ಸಲ್ಲಿಸಲು ಬಳಸಲಾಗುತ್ತಿರಲಿಲ್ಲ ಎಂಬುದನ್ನೇನೂ ಸಾಬೀತು ಮಾಡಲು ಸಾಧ್ಯವಿಲ್ಲ. ತದ್ವಿರುದ್ಧವಾಗಿ, ಅದು ಸತತವಾಗಿ ತಮ್ಮ ಸುಪರ್ದಿಯಲ್ಲಿತ್ತು ಎಂಬ ಹಿಂದೂಗಳ ದಾವೆಯನ್ನು ಎತ್ತಿ ಹಿಡಿದಿರುವುದು ತಥ್ಯಗಳ ಆಧಾರದಲ್ಲಿ ಅಲ್ಲ. ನಂಬಿಕೆ ಮತ್ತು ವಿಶ್ವಾಸದ ಪ್ರದರ್ಶನ ಮೇಲುಗೈ ಪಡೆದಂತೆ ಕಾಣುತ್ತದೆ ಎಂದು ಪೊಲಿಟ್‌ಬುರೊ ಅಭಿಪ್ರಾಯ ಪಟ್ಟಿದೆ.

ಈ ತೀರ್ಪು 1991ರ ಆರಾಧನೆಯ ಸ್ಥಳಗಳ ಕಾಯ್ದೆ ಎಲ್ಲ ಧರ್ಮಗಳು ಸಮಾನ ಎಂಬುದನ್ನು ಮತ್ತು ಜಾತ್ಯತಿತತೆಯನ್ನು ಎತ್ತಿ ಹಿಡಿಯುವ ಸಂವಿಧಾನಿಕ ಬಾಧ್ಯತೆಗಳನ್ನು ಜಾರಿಗೆ ತರುವ ಒಂದು ಕಾಯ್ದೆ ಎಂದು ಪುನರುಚ್ಚರಿಸುತ್ತದೆ. ಯಾವುದೇ ಆರಾಧನಾ ಸ್ಥಳ ಆಗಸ್ಟ್ 15, 1947ರಂದು ಹೇಗಿತ್ತೋ ಅದನ್ನು ಬದಲಿಸಲು ಸಾಧ್ಯವಿಲ್ಲ. ಎಂದು ಅದು ಹೇಳುತ್ತದೆ. ಆದರೆ ಈ ತೀರ್ಪು ಕಾಶಿ ಅಥವ ಮಥುರಾದಂತಹ ಇತರ ಸ್ಥಳಗಳಲ್ಲಿ ಇಂತಹ ವಿವಾದಗಳನ್ನು ಭವಿಷ್ಯದಲ್ಲಿ ಎತ್ತದಂತೆ ನಿರ್ಬಂಧಿಸುವಲ್ಲಿ ವಿಫಲವಾಗಿದೆ. ಆರೆಸ್ಸೆಸ್ ಮುಖ್ಯಸ್ಥರು ಒಂದು ಮುಸುಕಿನ ಎಚ್ಚರಿಕೆಯಲ್ಲಿ ಕಾಶಿ ಮತ್ತು ಮಥುರಾದ ವಿವಾದಗಳು “ಸದ್ಯಕ್ಕೆ” ತಮ್ಮ ಅಜೆಂಡಾದಲ್ಲಿ ಇಲ್ಲ ಎಂದು ಸಾರಿದ್ದಾರೆ. ಇದೊಂದು ಅಶುಭಸೂಚಕ ಘೋಷಣೆ, ಭವಿಷ್ಯದಲ್ಲಿ ಯಾವಾಗ ಬೇಕಾದರೂ ಈ ವಿವಾದಗಳ ಮೇಲೆ ಭಾವೋದ್ರೇಕಗಳನ್ನು ಬಡಿದೆಬ್ಬಿಸಬಹುದು ಎಂಬುದರ ಸೂಚನೆಯಾಗಿದೆ. ಇಂತಹ ಸಾಧ್ಯತೆಗಳನ್ನು ನಿರ್ಬಂಧಿಸುವ ಒಂದು ದೃಢ ನಿರ್ಧಾರ ದೇಶದ ಅತ್ಯುನ್ನತ ನ್ಯಾಯಾಲಯದಿಂದ ವ್ಯಕ್ತಗೊಳ್ಳಲಿಲ್ಲ.

ಡಿಸೆಂಬರ್ 1949 ಮತ್ತು ಡಿಸೆಂಬರ್ 1992ರ ಘಟನೆಗಳನ್ನು ಗಂಭೀರ ಕಾನೂನು ಉಲ್ಲಂಘನೆಗಳು ಎಂದು ವರ್ಗೀಕರಿಸಿದ್ದರೂ ಇಂತಹ ಕ್ರಿಮಿನಲ್ ಕೃತ್ಯಗಳನ್ನು ಎಸಗಿದವರ ಬಗ್ಗೆ ನ್ಯಾಯ ತೀರ್ಪನ್ನು ನೀಡಲಿಲ್ಲ. ಬಾಬ್ರಿ ಮಸೀದಿ ಧ್ವಂಸಕ್ಕೆ ಹೊಣೆಗಾರರು ಎನ್ನಲಾಗಿರುವ ಎಲ್.ಕೆ.ಅಡ್ವಾಣಿ, ಮುರಳಿ ಮನೋಹರ ಜೋಷಿ, ಕಲ್ಯಾಣ್ ಸಿಂಗ್ ಮುಂತಾದವರ ವಿರುದ್ಧ ಮೊಕದ್ದಮೆ ಸುಮಾರು 28 ವರ್ಷಗಳಿಂದ ನೆನಗುದಿಯಲ್ಲಿದೆ. ಇದನ್ನು ತ್ವರಿತಗೊಳಿಸಬೇಕು, ತಪ್ಪಿತಸ್ಥರನ್ನು ಶಿಕ್ಷಿಸಬೇಕು ಮತ್ತು ಸುಪ್ರಿಂ ಕೋರ್ಟಿನ ಈ ತೀರ್ಪು ಅದರಲ್ಲಿ ನ್ಯಾಯನೀಡಿಕೆಗೆ ಅಡ್ಡಿಯಾಗಬಾರದು ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಈಗಾಗಲೇ ಎರಡು ದಶಕಗಳಿಗೂ ಹೆಚ್ಚು ಸಮಯದ್ರಿಂದ ಸಾವಿರಾರು ಜೀವಗಳನ್ನು ಬಲಿತೆಗೆದುಕೊಂಡಿರುವ ಮತ್ತು ರಕ್ತಪಾತ ಹಾಗೂ ಉತ್ಪಾತಗಳನ್ನು ನಡೆಸಿರುವ ಈ ದೀರ್ಘಕಾಲದ ವಿವಾದವನ್ನು ಇತ್ಯರ್ಥಗೊಳಿಸಲು ಒಂದು ನ್ಯಾಯಾಂಗ ತೀರ್ಪನ್ನು ನೀಡಲಾಗಿದೆ.

ಶಬರಿಮಲೆ ಪರಾಮರ್ಶೆ-ಸಂದಿಗ್ಧ, ಅನಿಶ್ಚಿತ ಪರಿಸ್ಥಿತಿ ನಿರ್ಮಿಸಿರುವ ಬಹುಮತದ ತೀರ್ಪು

ಐವರು ಸದಸ್ಯರ ಸಂವಿಧಾನ ಪೀಠ ಶಬರಿಮಲೆಯಲ್ಲಿ ಎಲ್ಲ ವಯಸ್ಸಿನ ಮಹಿಳೆಯರಿಗೆ ಪ್ರವೇಶ ನೀಡುವ ಸಪ್ಟಂಬರ್ 2018ರ ತೀರ್ಪಿನ ಪರಾಮರ್ಶೆ ಅರ್ಜಿಗಳ ಮತ್ತು ರಿಟ್ ಅರ್ಜಿಗಳ ವಿಚಾರಣೆ ನಡೆಸಬೇಕಾಗಿತ್ತು. ಪರಾಮರ್ಶೆ ಅರ್ಜಿಗಳ ವಿಲೇವಾರಿಯ ಬದಲು, ಎಂದಿನ ವಿಧಿ-ವಿಧಾನಗಳನ್ನು ಬಿಟ್ಟು, ಬಹುಮತದ ತೀರ್ಪು ಸಂವಿಧಾನದ ಅಡಿಯಲ್ಲಿ ವಿವಿಧ ಧಾರ್ಮಿಕ ಹಕ್ಕುಗಳನ್ನು ಪ್ರಸ್ತಾಪಿಸುತ್ತ ವಿಚಾರಣೆಯ ವ್ಯಾಪ್ತಿಯನ್ನು ವಿಸ್ತರಿಸಿ ಏಳು ನ್ಯಾಯಾಧೀಶರ ಪೀಠಕ್ಕೆ ಕಳಿಸಿದೆ. ಇಬ್ಬರು ನ್ಯಾಯಾಧೀಶರ ಅಲ್ಪಮತದ ತೀರ್ಪು ಎಲ್ಲ ಮರುಪರಾಮರ್ಶೆ ಅರ್ಜಿಗಳನ್ನು ತಳ್ಳಿ ಹಾಕಿ ಸಪ್ಟಂಬರ್ 2018ರ ತೀರ್ಪನ್ನು ಎತ್ತಿ ಹಿಡಿದಿದೆ.

ಈಗಾಗಲೇ ನ್ಯಾಯಾಲಯದ ಇತರ ಪೀಠಗಳು ವಿಚಾರಣೆ ನಡೆಸುತ್ತಿರುವ ಇತರ ಧರ್ಮಗಳ ಮಹಿಳೆಯರ ಹಕ್ಕುಗಳಿಗೆ ಸಂಬಂಧಪಟ್ಟ ಇತರ ಸಂಗತಿಗಳತ್ತ ವಿಷಯಾಂತರ ಮಾಡಿ ಬಹುಮತದ ತೀರ್ಪು 2018ರ ತೀರ್ಪನ್ನು ಎತ್ತಿ ಹಿಡಿಯುವಲ್ಲಿ ವಿಫಲವಾಗಿದೆ ಮತ್ತು ಮರು ಪರಾಮರ್ಶೆ ಅರ್ಜಿಗಳ ವಿಚಾರಣೆಯನ್ನು ಬಾಕಿಯಿಟ್ಟು ಒಂದು ಸಂದಿಗ್ಧ ಮತ್ತು ಅನಿಶ್ಚಿತ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದೆ ಎಂದಿರುವ ಪೊಲಿಟ್‌ಬ್ಯುರೊ, ಸಿಪಿಐ(ಎಂ)ಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಎಲ್ಲ ರಂಗಗಳಲ್ಲಿ ಮಹಿಳಾ ಸಮಾನತೆಗೆ ಅದು ಬದ್ಧವಾಗಿದೆ, ಮತ್ತು ನ್ಯಾಯಾಲಯ ಆದಷ್ಟು ಬೇಗನೇ ಒಂದು ನಿರ್ಣಾಯಕ ನಿಲುವಿಗೆ ಬರಬೇಕು ಎಂದು ಬಯಸುವುದಾಗಿ ಹೇಳಿದೆ.

ರಫೆಲ್ ಆದೇಶ-ಪರಾಮರ್ಶೆಯಿಲ್ಲ, ತನಿಖೆಗೆ ಅವಕಾಶವಿದೆ ; ಜೆಪಿಸಿ ರಚಿಸಿ

ರಫೆಲ್ ವಿವಾದದ ಬಗ್ಗೆ ಮರಾಮರ್ಶೆ ಅರ್ಜಿಯನ್ನು ಸುಪ್ರಿಂ ಕೋರ್ಟ್ ತಿರಸ್ಕರಿಸಿದೆ, ಆದರೆ ಸಿಬಿಐ ಅಥವ ಇತರ ಸಂಸ್ಥೆಗಳಿಂದ ಹಣ ದುರ್ಬಳಕೆ, ಭ್ರಷ್ಟಾಚಾರದ ಆಪಾದನೆಗಳ ತನಿಖೆಗೆ ಯಾವುದೇ ಅಡ್ಡಿಯಿಲ್ಲ ಎಂದಿದೆ. ಈ ಸರಕಾರದ ಅಡಿಯಲ್ಲಿ ಸಿಬಿಐನಿಂದ ತನಿಖೆಯ ಬಗ್ಗೆ ನಂಬಿಕೆ ಇಟ್ಟುಕೊಳ್ಳುವ ಪ್ರಶ್ನೆಯೇ ಇಲ್ಲ. ಆದ್ದರಿಂದಲೇ ಸಿಪಿಐ(ಎಂ) ಈ ವಿವಾದ ಎದ್ದು ಬಂದಂದಿನಿಂದ, ಇದರಿಂದಾಗಿ ಸಾರ್ವಜನಿಕ ಖಜಾನೆಗೆ ಒಂದು ದೊಡ್ಡ ಪ್ರಮಾಣದ ಹಾನಿಯಾಗಿದೆ, ಅದರಿಂದ ಈ ಸರಕಾರದ ಬಂಟ ಕಾರ್ಪೊರೇಟ್ ಮಿತ್ರರಿಗೆ ಪ್ರಯೋಜನವಾಗಿರುವುದು ಬೆಳಕಿಗೆ ಬಂದಿರುವುದರಿಂದ, ಈ ಹಗರಣದ ತನಿಖೆಗೆ ಒಂದು ಜಂಟಿ ಸಂಸದೀಯ ಸಮಿತಿ(ಜೆಪಿಸಿ)ಯನ್ನು ರಚಿಸಬೇಕು ಎಂದು ಆಗ್ರಹಿಸುತ್ತ ಬಂದಿದೆ. ಮೋದಿ ಸರಕಾರ ಇದನ್ನು ಸ್ವೀಕರಿಸಲು ನಿರಾಕರಿಸುತ್ತದೆ. ಅದು ಬಹಳಷ್ಟು ಸಂಗತಿಗಳನ್ನು ಮುಚ್ಚಿಡಬಯಸುತ್ತದೆ ಎಂಬುದು ಸ್ಪಷ್ಟ.

ಈ ಹಗರಣದ ತನಿಖೆ ನಡೆಸಲು ಒಂದು ಜೆಪಿಸಿಯನ್ನು ರಚಿಸಬೇಕು ಎಂದು ತನ್ನ ಆಗ್ರಹವನ್ನು ಸಿಪಿಐ(ಎಂ) ಪುನರುಚ್ಚರಿಸಿದೆ.

ಜಮ್ಮು ಮತ್ತು ಕಾಶ್ಮೀರ-ಅನಿಶ್ಚಿತತೆ, ಭೀತಿ ಕಾಡುವ ಪರಿಸ್ಥಿತಿ ಮುಂದುವರೆಯಬಾರದು

ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ಸಂಪರ್ಕಗಳು, ಸಾರ್ವಜನಿಕ ಸಾರಿಗೆ, ಚಲನವಲನಗಳಿಗೆ ನಿರ್ಬಂಧ ಹೇರಿ ನೂರು ದಿನಗಳಿಗಿಂತ ಹೆಚ್ಚಾಗಿದೆ. ಕೆಲವು ನಿರ್ಬಂಧಗಳನ್ನು ಸಡಿಲಿಸುವುದಾಗಿ ಪ್ರಕಟಿಸಿದರೂ, ಜನಗಳ ದೈನಂದಿನ ಬದುಕು ಅಪಾರ ಸಂಕಷ್ಟಗಳಿಂದಾಗಿ ಅಸ್ತವ್ಯಸ್ತಗೊಂಡೇ ಇದೆ.

ಹೆಚ್ಚಿನ ರಾಜಕೀಯ ಮುಖಂಡರು ಒಂದೋ ಕರಾಳ ಸಾರ್ವಜನಿಕ ಸುರಕ್ಷತಾ ಕಾಯ್ದೆಯ ಅಡಿಯಲ್ಲಿ ಬಂಧನದಲ್ಲಿದ್ದಾರೆ ಅಥವ ಗೃಹ ಬಂಧನದಲ್ಲೇ ಉಳಿದಿದ್ದಾರೆ. ಅವರನ್ನು ಬಂಧಿಸಿಲ್ಲ, ಅವರ ಮೇಲೆ ಯಾವುದೇ ಆಪಾದನೆಗಳಿಲ್ಲ ಎಂದು ಸರಕಾರ ಹೇಳಿಕೊಳ್ಳುತ್ತಿದೆ. ಆದರೆ ನಿಜಸಂಗತಿಯೆಂದರೆ ಅವರು ತಮ್ಮ ಮನೆಗಳಿಂದ ಹೊರಹೋಗುವಂತಿಲ್ಲ, ಯಾರೂ ಅವರನ್ನು ಭೇಟಿಯಾಗುವಂತಿಲ್ಲ. ಇತರ ನೂರಾರು ಮಂದಿ ದೇಶದ ವಿವಿಧ ಜೈಲುಗಳಲ್ಲಿ ಬಂಧನದಲ್ಲಿದ್ದಾರೆ ಎಂದು ವರದಿಯಾಗಿದೆ. ನೂರು ದಿನಗಳಾದ ನಂತರವೂ ಎಷ್ಟು ಮಂದಿ, ಯಾವ ಆಪಾದನೆಗಳ ಮೇಲೆ ಬಂಧನದಲ್ಲಿದ್ದಾರೆ ಎಂಬುದರ ಸ್ಪಷ್ಟತೆ ಇಲ್ಲ. ಜನಗಳ ಸಾಮಾನ್ಯ ಬದುಕುಗಳನ್ನು ಮತ್ತು ಚಟುವಟಿಕೆಗಳನ್ನು ಇನ್ನೂ ಬಾಧಿಸುತ್ತಿರುವ ಎಲ್ಲ ನಿರ್ಬಂಧಗಳನ್ನು ಸಂಪೂರ್ಣವಾಗಿ ತೆಗೆಯಬೇಕು ಎಂದು ಆಗ್ರಹಿಸಿರುವ ಸಿಪಿಐ(ಎಂ) ಇಂಟರ್ನೆಟ್ ಮತ್ತು ಎಸ್‌ಎಂಎಸ್ ಗಳೂ ಈಗಲೂ ನಿರ್ಬಂಧಿತವಾಗಿದ್ದು, ಇದು ಅರ್ಥವ್ಯವಸ್ಥೆಯನ್ನು ಆತಂಕಕಾರಿಯಾಗಿ ತಟ್ಟಿದೆ. ಇಲ್ಲಿನ ಅರ್ಥವ್ಯವಸ್ಥೆ ಮುಖ್ಯವಾಗಿ ಪ್ರವಾಸೋದ್ಯಮ ಮತ್ತು ಹಣ್ಣುಗಳು, ಕೇಸರಿಯಂತಹ ವಾಣಿಜ್ಯ ಬೆಳೆಗಳ ಮಾರಾಟವನ್ನು ಅವಲಂಬಿಸಿದೆ. ಇವುಗಳಲ್ಲಿ ಹೆಚ್ಚಿನವುಗಳ ಆರ್ಡರುಗಳು ಮತ್ತು ಪಾವತಿಗಳು ಆನ್‌ಲೈನ್ ಮೂಲಕವೇ ಆಗುವಂತವುಗಳು. ಇವೆಲ್ಲ ಈಗಲೂ ಅಸ್ತವ್ಯಸ್ತಗೊಂಡಿವೆ.

ಇಲ್ಲಿನ ವಾರ್ಷಿಕ ಸೇಬು ವ್ಯಾಪಾರ 10,000 ಕೋಟಿ ರೂ. ಗಳಷ್ಟು ಇರುತ್ತದೆ. ಇದು ಸಂಪೂರ್ಣವಾಗಿ ಹಾಳಾಗಿದೆ. ಕೇಂದ್ರ ಸರಕಾರ ಇದೊಂದು ರಾಷ್ಟ್ರೀಯ ಅನಾಹುತ ಎಂದು ಘೋಷಿಸಿ ಸೇಬು ಬೆಳೆಗಾರರಿಗೆ ಪರಿಹಾರ ನೀಡಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಬಂಧನದಲ್ಲಿಟ್ಟಿರುವ ಎಲ್ಲ ರಾಜಕೀಯ ಮುಖಂಡರನ್ನು ತಕ್ಷಣವೇ ಬಿಡುಗಡೆ ಮಾಡಬೇಕು, ಸಂವಿಧಾನ ಖಾತ್ರಿಪಡಿಸಿರುವ ಪ್ರಜಾಪ್ರಭುತ್ವ ಹಕ್ಕುಗಳು ಮತ್ತು ನಾಗರಿಕ ಸ್ವಾತಂತ್ರ್ಯಗಳನ್ನು ಮತ್ತೆ ನೆಲೆಗೊಳಿಸಬೇಕು ಎಂದು ಸಿಪಿಐ(ಎಂ) ಆಗ್ರಹಿಸಿದೆ. ಮುಖ್ಯವಾಗಿ, ಶಾಲಾ ಮಕ್ಕಳನ್ನು ಅಪಾರ ಭೀತಿ ಕಾಡುತ್ತಿದೆ, ಅವರ ಭವಿಷ್ಯ, ಉದ್ಯೋಗದ ಬಗ್ಗೆ ಅನಿಶ್ಚಿತತೆ ಉಂಟಾಗಿದೆ. ಇದು ಹೀಗೇ ಮುಂದುವರೆಯಲು ಬಿಡಲಾಗದು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಆರ್ಥಿಕ ಸಂಕಟ

ಜಿಡಿಪಿ ಬೆಳವಣಿಗೆ ಸತತ ಎರಡು ತ್ರೈಮಾಸಿಕಗಳಿಗಿಂತಲೂ ಹೆಚ್ಚು ಸಮಯದಿಂದ ಇಳಿಕೆ ತೋರಿಸುತ್ತಿದ್ದು ಭಾರತೀಯ ಅರ್ಥವ್ಯವಸ್ಥೆ ಹಿಂಜರಿತದ ಘಟ್ಟವನ್ನು ತಲುಪಿಯೇ ಬಿಟ್ಟಿರುವಂತಿದೆ. ಆದರೆ ಮೋದಿ ಸರಕಾರ ಇದನ್ನು ನಿರಾಕರಿಸುತ್ತಲೇ ಇದೆ. ಇದ ಫಲಿತಾಂಶವೆಂದರೆ ನಮ್ಮ ಬಹುಪಾಲು ಜನಗಳ ಮೇಲೆ ಅಭೂತಪೂರ್ವ ಹೊರೆಗಳು ಬಿದ್ದಿವೆ. ಎನ್ ಎಸ್ ಎಸ್ ಒ. ಬಿಡುಗಡೆ ಮಾಡಿರುವ ಮಾಹಿತಿ 2017-18ರಲ್ಲಿ ಬಳಕೆ ವಸ್ತುಗಳಿಗೆ ಜನ ಮಾಡುವ ವೆಚ್ಚದ ಪ್ರಮಾಣ ಗ್ರಾಮೀಣ ಭಾರತದಲ್ಲಿ 8.8ಶೇ.ದಷ್ಟು ಇಳಿದಿದೆ ಎಂದು ತೋರಿಸುತ್ತಿದೆ. ನಾಲ್ಕು ದಶಕಗಳಲ್ಲಿ ಮೊದಲ ಬಾರಿಗೆ ಇದು ಇಳಿದಿದ್ದು, ಅದರಿಂದಾಗಿ ಬಡತನದ ಮಟ್ಟ ಏರಿರುವುದನ್ನು ಇದು ಸೂಚಿಸುತ್ತದೆ. ಸರಕಾರ ಈ ವರದಿಯನ್ನು ಈಗ “ಮಾಹಿತಿ ಗುಣಮಟ್ಟ ಪ್ರಶ್ನೆಗಳಿಂದಾಗಿ” ಹಿಂತೆಗೆದುಕೊಂಡಿದೆ. ಈ ಮೋದಿ ಸರಕಾರ ಮಾಹಿತಿಗಳ ದಗಲಿಬಾಜಿತನದಲ್ಲಿ ತೊಡಗಿದೆ. ಇಂತಹ ಮಾಹಿತಿ ಅವಿಶ್ವಸನೀಯತೆ ಭಾರತದ ಜಾಗತಿಕ ರೇಟಿಂಗ್‌ಗಳನ್ನೂ ತಟ್ಟುತ್ತಿದೆ.

ನಮ್ಮ ಅರ್ಥವ್ಯವಸ್ಥೆಯ ಎಲ್ಲ ವಲಯಗಳು, ಕೃಷಿ, ಕೈಗಾರಿಕೆ, ಮತ್ತು ಸೇವಾವಲಯ, ಎಲ್ಲವೂ ಮಂದಗತಿಗೆ ಒಳಗಾಗಿವೆ. ಕೈಗಾರಿಕಾ ಉತ್ಪಾದನೆ ಕಳೆದ ಎಂಟು ವರ್ಷಗಳಲ್ಲೇ ವಿಪರೀತ ಇಳಿಕೆ ದಾಖಲಿಸಿದೆ. ವಿದ್ಯುತ್ ಬೇಡಿಕೆ ಕಳೆದ ಹನ್ನೆರಡ ವರ್ಷಗಳಲ್ಲೇ ಅತಿ ಹೆಚ್ಚು ಪ್ರಮಾಣದಲ್ಲಿ ಇಳಿದಿದೆ. ಜಿಡಿಪಿಯ ಎಲ್ಲ ಪ್ರಸಕ್ತ ಅಂದಾಜುಗಳು ಅದು 5ಶೇ.ಕ್ಕಿಂತ ಕೆಳಕ್ಕೆ ಬೀಳುವ ಸಾಧ್ಯತೆಯನ್ನು ತೋರಿಸುತ್ತಿವೆ.

ನಿರುದ್ಯೋಗ ಮಟ್ಟ ಕಳದೆ ಐವತ್ತು ವರ್ಷಗಳಲ್ಲೇ ಅತ್ಯುನ್ನತ ಮಟ್ಟವನ್ನು ಮುಟ್ಟಿದೆ. ಮಾಹಿತಿ ತಂತ್ರಜ್ಞಾನ ವಲಯವೂ ಸೇರಿದಂತೆ ಎಲ್ಲ ವಲಯಗಳಲ್ಲೂ ಬೃಹತ್ ಪ್ರಮಾಣದಲ್ಲಿ ಲೇ-ಆಫ್, ರಿಟ್ರೆಂಚ್‌ಮೆಂಟ್‌ಗಳು ನಡೆಯುತ್ತಿವೆ.

ಇದರೊಂದಿಗೇ, ಮೋದಿ ಸರಕಾರ ಸಾರ್ವಜನಿಕ ವಲಯದ ಒಂದು ದೊಡ್ಡ ಪ್ರಮಾಣದ ಖಾಸಗೀಕರಣಕ್ಕೆ ಕೈಹಾಕಿದೆ. ಇದು ಭಾರತದ ಸ್ವಾವಲಂಬೀ ಆಧಾರವನ್ನು ಧ್ವಂಸ ಮಾಡುವುದಲ್ಲದೆ, ಈ ಸರಕಾರದ ಕಾರ್ಪೊರೇಟ್ ಬಂಟರಿಗೆ ನೇರವಾಗಿ ಪ್ರಯೋಜನಗಳನ್ನು ಕೂಡ ಕೊಡಿಸುತ್ತದೆ. ಇಂತಹ ಖಾಸಗೀಕರಣ ದೇಶದಲ್ಲಿ ಈಗಾಗಲೇ ದೊಡ್ಡ ಪ್ರಮಾಣದಲ್ಲಿ ಏರುತ್ತಿರುವ ನಿರುದ್ಯೋಗವನ್ನು ಮತ್ತಷ್ಟು ಹೆಚ್ಚಿಸುತ್ತದೆ. ಅಲ್ಲದೆ, ಭಾರತೀಯ ಸಮಾಜದ ಅಂಚಿಗೆ ತಳ್ಳಲ್ಪಟ್ಟ ವಿಭಾಗಗಳು ಮೀಸಲಾತಿಯಿಂದ ಪಡೆದಿರುವ ಅಲ್ಪ-ಸ್ವಲ್ಪ ಪ್ರಯೋಜನವನ್ನೂ ಗಂಭೀರವಾಗಿ ಕ್ಷಯಿಸುತ್ತದೆ.

ಈ ಆರ್ಥಿಕ ಹಿಂಜರಿತ ನಮ್ಮ ಬಹುಪಾಲು ಜನಗಳ ಕೊಳ್ಳುವ ಸಾಮರ್ಥ್ಯಗಳು ತೀವ್ರವಾಗಿ ಇಳಿದಿರುವುದರಿಂದಾಗಿ ಆಗಿದೆ. ಅರ್ಥ

ಪುಟ 12 ಕ್ಕೆ

ಸುಪ್ರಿಂ ಕೋರ್ಟ್ ವಿಫಲತೆಗಳು.....

ಚಿತ್ರ ಕೃಪೆ: ನ್ಯೂಸ್ ಲಾಂಡ್ರಿ



ಸುಪ್ರಿಂ ಕೋರ್ಟಿನ ಮುಖ್ಯ ನ್ಯಾಯಾಧೀಶರು, ರಂಜನ್ ಗೊಗೊಯ್ ನವಂಬರ್ 17ರಂದು ನಿವೃತ್ತರಾಗಿದ್ದಾರೆ. ನ್ಯಾಯಮೂರ್ತಿ ಎಸ್ ಎ ಬೋಬ್ಡೆ ಭಾರತದ ಹೊಸ ಮುಖ್ಯ ನ್ಯಾಯಾಧೀಶರಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ಇದೀಗ ನಾಡಿನ ಅತ್ಯುನ್ನತ ನ್ಯಾಯಾಲಯದಲ್ಲಿ ಏನು ನಡೆಯುತ್ತಿದೆ ಎಂದು ನೋಡಲು ಸೂಕ್ತ ಸಮಯ. ಸುಪ್ರಿಂ ಕೋರ್ಟಿಗೆ ಸಂಸತ್ತು ಅಂಗೀಕರಿಸುವ ಕಾನೂನುಗಳು ಸಂವಿಧಾನಕ್ಕೆ ಅನುಗುಣವಾಗಿ ಇವೆ ಎಂದು ಖಾತ್ರಿಗೊಳಿಸುವ ಮತ್ತು ನಾಗರಿಕರ ಸಂವಿಧಾನಿಕ ಹಕ್ಕುಗಳನ್ನು ಕಾಪಾಡುವ ಕರ್ತವ್ಯವನ್ನು ವಿಧಿಸಲಾಗಿದೆ.

ದುರದೃಷ್ಟವಶಾತ್, ಕೆಲವು ಸಮಯದಿಂದ ಸುಪ್ರಿಂ ಕೋರ್ಟ್ ತನ್ನ ಹೊಣೆಗಾರಿಕೆಗಳಿಗೆ ಅನುಗುಣವಾಗಿ ನಡೆದುಕೊಳ್ಳುವಲ್ಲಿ ಮತ್ತು ಸಂವಿಧಾನದ ರಕ್ಷಕನಾಗಿ ಕೆಲಸ ಮಾಡುವಲ್ಲಿ ವಿಫಲವಾಗುತ್ತಿದೆ ಎಂಬ ಆತಂಕಕಾರಿ ಸೂಚನೆಗಳು ಕಾಣುತ್ತಿವೆ. ಒಂದು ಸರ್ವಾಧಿಕಾರಶಾಹಿ ಹಿಂದುತ್ವ ಆಳ್ವಿಕೆ ಸಂವಿಧಾನದ ಜಾತ್ಯತೀತ ಮತ್ತು ಪ್ರಜಾಸತ್ತಾತ್ಮಕ ಚೌಕಟ್ಟನ್ನು ಬುಡಮೇಲು ಮಾಡಲು ಕೆಲಸ ಮಾಡುತ್ತಿರುವ ಸಮಯದಲ್ಲಿ ಹೀಗಾಗುತ್ತಿದೆ ಎಂಬುದು ಒಂದು ಗಂಭೀರ ಆತಂಕದ ಸಂಗತಿಯಾಗಿದೆ.

ಕಾರ್ಯಾಂಗದೊಡನೆ ನ್ಯಾಯಾಲಯದ ಹೆಚ್ಚೆಚ್ಚು ಮೌನಸಮ್ಮತಿ, ನಾಗರಿಕರ ಮೂಲಭೂತ ಹಕ್ಕುಗಳನ್ನು ಎತ್ತಿಹಿಡಿಯುವಲ್ಲಿ ಉಪೇಕ್ಷೆ ಮತ್ತು ನಂಬಿಕೆಯ ವಿಷಯಗಳಲ್ಲಿ ಬಹುಸಂಖ್ಯಾತವಾದದೊಂದಿಗೆ ರಾಜಿ ಗೊಗೊಯ್ ಅವರ ಅಧಿಕಾರಾವಧಿಯ ಲಕ್ಷಣಗಳಾಗಿದ್ದವು. ಕಳೆದ ಒಂದು ವರ್ಷದಲ್ಲಿ ಈ ಪ್ರವೃತ್ತಿಯನ್ನು ದೃಢಪಡಿಸುವ ಹಲವಾರು ತೀರ್ಪುಗಳು ಬಂದಿವೆ. ಇವು ನ್ಯಾಯಾಂಗದ ಸ್ವಾತಂತ್ರ್ಯಕ್ಕೆ ಸಲ್ಲದ ತೀರ್ಪುಗಳು. ನಾಗರಿಕರ ಹಕ್ಕುಗಳನ್ನು ರಕ್ಷಿಸುವಲ್ಲಿ ವಿಫಲತೆ ಮೊದಲ ವಿಫಲತೆಯಾಗಿತ್ತು. ಸುಪ್ರಿಂ ಕೋರ್ಟ್ ನಾಗರಿಕರ ಮೂಲ ಹಕ್ಕುಗಳನ್ನು ರಕ್ಷಿಸುವ ಒಬ್ಬ ಪಹರೇದಾರ ಎಂದು ಪರಿಗಣಿಸಲಾಗಿದೆ. ಆದರೆ, ಇತ್ತೀಚಿನ ಅವಧಿಯಲ್ಲಿ ನ್ಯಾಯಾಲಯ ಜಮ್ಮು ಮತ್ತು ಕಾಶ್ಮೀರದಲ್ಲಿ ನಾಗರಿಕರ ಮೂಲಭೂತ ಹಕ್ಕುಗಳನ್ನು ರಕ್ಷಿಸಲು ಮಧ್ಯಪ್ರವೇಶಿಸುವಲ್ಲಿ ವಿಫಲವಾಗಿದೆ. ಕಲಮು 370ನ್ನು ಲೋಪಗೊಳಿಸಿದ ಮೇಲೆ ಮತ್ತು ಆಗಸ್ಟ್ 5 ರಿಂದ ನಿರ್ಬಂಧಗಳನ್ನು ಹೇರಿದ ಮೇಲೆ ನಾಗರಿಕರ ಮೇಲೆ ಮಿತಿಗಳನ್ನು ಹೇರಿರುವುದು, ರಾಜಕೀಯ ಮುಖಂಡರು ಮತ್ತು ಕಾರ್ಯಕರ್ತರನ್ನು ನಿರ್ಬಂಧಿಸಿರುವುದರ ವಿರುದ್ಧ ಸುಪ್ರಿಂ ಕೋರ್ಟಿನಲ್ಲಿ ಹಲವಾರು ಅರ್ಜಿಗಳನ್ನು ಸಲ್ಲಿಸಲಾಗಿದೆ.

ಈ ಅರ್ಜಿಗಳನ್ನು ಸುಪ್ರಿಂ ಕೋರ್ಟ್ ನಿಭಾಯಿಸಿದ ರೀತಿ ನಿಜಕ್ಕೂ ವಿವರಣೆಗೆ ನಿಲುಕದ್ದು. ಮಹಮ್ಮದ್ ಯುಸುಫ್ ತಾರಿಗಾಮಿಯವರನ್ನು ನಿರ್ಬಂಧಿಸಿದ್ದಕ್ಕೆ ಸಂಬಂಧಪಟ್ಟಂತೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿಯವರ ಹೆಬಿಯಸ್ ಕಾರ್ಪಸ್ ಅರ್ಜಿ ಇರಬಹುದು, ಅಥವ ಪತ್ರಿಕಾ ಸ್ವಾತಂತ್ರ್ಯ, ನಾಗರಿಕರ ಚಲನವಲನದ ಹಕ್ಕಿನ ಮೇಲೆ ನಿರ್ಬಂಧಗಳನ್ನು ಕುರಿತಾಗಿರಬಹದು, ವಯಸ್ಕರಲ್ಲದವರ ಬಂಧನಗಳದ್ದಿರಬಹುದು– ಯಾವ ಅರ್ಜಿಯಲ್ಲೂ ಸುಪ್ರಿಂ ಕೋರ್ಟ್ ತಕ್ಷಣ ಕ್ರಮ ಕೈಗೊಳ್ಳಲು ಮತ್ತು ಸಂವಿಧಾನ ಖಾತ್ರಿಪಡಿಸಿರುವ ಮೂಲಭೂತ ಹಕ್ಕುಗಳನ್ನು ಎತ್ತಿ ಹಿಡಿಯಲು ನಿರಾಕರಿಸಿದೆ. ಇಂತಹ ಎಲ್ಲ ಅರ್ಜಿಗಳ ವಿಚಾರಣೆಗೆ ಮೂವರು ಸದಸ್ಯರ ಪೀಠವನ್ನು ರಚಿಸಿದರೆ, ಸಂವಿಧಾನದ ಕಲಮು 370 ಮತ್ತು 35ಎ ನ್ನು ರದ್ದಗೊಳಿಸಿರುವುದರ ಬಗ್ಗೆ ಅರ್ಜಿಗಳ ವಿಚಾರಣೆಗೆ ಐವರು ಸದಸ್ಯರ ಸಂವಿಧಾನ ಪೀಠವನ್ನು ರಚಿಸಲಾಗಿದೆ.

ಮೂವರು ಸದಸ್ಯರ ಪೀಠ, ಇನ್ನೂ, ಎರಡು ತಿಂಗಳ ನಂತರವೂ ಯಾವುದೇ ಅರ್ಜಿಯ ಮೇಲೆ ತೀರ್ಪು ನೀಡಿಲ್ಲ. ಚಿಕ್ಕ ಹುಡುಗರ ಬಂಧನ ಕುರಿತ ಗಂಭೀರ ವಿಷಯ ಕುರಿತ ಅರ್ಜಿಗಳಲ್ಲೂ ಪ್ರತಿ ವಿಚಾರಣೆಯ ನಂತರವೂ ವಿಳಂಬವಾಗುತ್ತಿದೆ. ಮುಂದಿನ ವಿಚಾರಣೆಯನ್ನು ಡಿಸೆಂಬರ್ 3ಕ್ಕೆ ಹಾಕಲಾಗಿದೆ. ಈ ಮೂವರು ಸದಸ್ಯರ ಸುಪ್ರಿಂ ಕೋರ್ಟಿನ ಪೀಠ ಸಪ್ಟಂಬರ್ 16 ರಂದು ನೀಡಿದ ಆದೇಶದಲ್ಲಿ "ಜಮ್ಮು ಮತ್ತು ಕಾಶ್ಮೀರದಲ್ಲಿ ಒಂದು ಆಯ್ದ ಆಧಾರದಲ್ಲಿ, ರಾಷ್ಟ್ರೀಯ ಭದ್ರತೆಗೆ ಕುಂದು ಬರದಂತೆ ಜಮ್ಮು ಮತ್ತು ಕಾಶ್ಮೀರದಲ್ಲಿ ಸಾಮಾನ್ಯ ಪರಿಸ್ಥಿತಿ ಮತ್ತೆ ನೆಲೆಗೊಳ್ಳುವಂತೆ ಖಾತ್ರಿಪಡಿಸಬೇಕು" ಎಂದು ಕೇಂದ್ರ ಸರಕಾರ ಮತ್ತು ಜಮ್ಮು ಮತ್ತು ಕಾಶ್ಮೀರ ಸರಕಾರಕ್ಕೆ ನಿರ್ದೇಶನ ನೀಡಿದೆಯಷ್ಟೇ. ಈ ಮೂಲಕ ನ್ಯಾಯಾಲಯ ಕಾರ್ಯಾಂಗಕ್ಕೆ ಆಯ್ದ ರೀತಿಯಲ್ಲಿ ನಿರ್ಬಂಧಗಳನ್ನು ಸಡಿಲಿಸಲು ಅವಕಾಶ ಮಾಡಿಕೊಟ್ಟಿತು ಮತ್ತು ಇದನ್ನು ಕೂಡ ರಾಷ್ಟ್ರೀಯ ಹಿತಾಸಕ್ತಿಗಳಿಗೆ ಕುಂದು ಬಾರದಂತೆ ಎಂದು ಶರತ್ತುಬದ್ಧಗೊಳಿಸಿತು.

ಒಂದು ನ್ಯಾಯಾಂಗ ತೀರ್ಪನ್ನು ನೀಡುವಲ್ಲಿ ವಿಳಂಬ "ನ್ಯಾಯಾಂಗ ನುಣುಚಿಕೆ'ಯ ಒಂದು ಸ್ವರೂಪವಾಗಿದೆ. ಇದು ಸರಕಾರಕ್ಕೆ/ಕಾರ್ಯಾಂಗಕ್ಕೆ

ಪುಟ 12 ಕ್ಕೆ

ದುರದೃಷ್ಟವಶಾತ್, ಕೆಲವು ಸಮಯದಿಂದ ಸುಪ್ರಿಂ ಕೋರ್ಟ್ ತನ್ನ ಹೊಣೆಗಾರಿಕೆಗಳಿಗೆ ಅನುಗುಣವಾಗಿ ನಡೆದುಕೊಳ್ಳುವಲ್ಲಿ ಮತ್ತು ಸಂವಿಧಾನದ ರಕ್ಷಕನಾಗಿ ಕೆಲಸ ಮಾಡುವಲ್ಲಿ ವಿಫಲವಾಗುತ್ತಿದೆ ಎಂಬ ಆತಂಕಕಾರಿ ಸೂಚನೆಗಳು ಕಾಣುತ್ತಿವೆ. ಒಂದು ಸರ್ವಾಧಿಕಾರಶಾಹಿ ಹಿಂದುತ್ವ ಆಳ್ವಿಕೆ ಸಂವಿಧಾನದ ಜಾತ್ಯತೀತ ಮತ್ತು ಪ್ರಜಾಸತ್ತಾತ್ಮಕ ಚೌಕಟ್ಟನ್ನು ಬುಡಮೇಲು ಮಾಡಲು ಕೆಲಸ ಮಾಡುತ್ತಿರುವ ಸಮಯದಲ್ಲಿ ಹೀಗಾಗುತ್ತಿದೆ ಎಂಬುದು ಒಂದು ಗಂಭೀರ ಆತಂಕದ ಸಂಗತಿಯಾಗಿದೆ. ಒಂದು ವಿಸ್ತೃತ ಮಟ್ಟದಲ್ಲಿ, ಪ್ರಭುತ್ವದ ಎಲ್ಲ ಸಂಸ್ಥೆಗಳಲ್ಲಿ ಹಿಂದುತ್ವದ ನುಸುಳಿಕೆ ನಡೆಯುತ್ತಿದೆ. ಬೇಸರದ ಸಂಗತಿಯೆಂದರೆ, ನ್ಯಾಯಾಂಗವೂ ಇದರಿಂದ ಹೊರತಾಗಿಲ್ಲ.

ಪ್ರಕಾಶ ಕಾರಟ್




ಚುನಾವಣಾ ಬಾಂಡುಗಳು: ಪ್ರಜಾಪ್ರಭುತ್ವಕ್ಕೆ ಅಪಾಯಕಾರಿ

ಚುನಾವಣಾ ಬಾಂಡುಗಳ ವಿಷಮಯ ಸ್ವರೂಪದ ಬಗ್ಗೆ ಇನ್ನೇನು ಪುರಾವೆ ಬೇಕು? ಭಾರತೀಯ ರಿಝರ್ವ್ ಬ್ಯಾಂಕ್(ಆರ್‌ಬಿಐ) ಮತ್ತು ಚುನಾವಣಾ ಆಯೋಗ ಎರಡೂ ಈ ಪ್ರಸ್ತಾವಕ್ಕೆ ಬಲವಾದ ಆಕ್ಷೇಪ ವ್ಯಕ್ತಪಡಿಸಿದ್ದವು.

'ಹಫ್ಟಿಂಗ್‌ಟನ್ ಪೋಸ್ಟ್' ಈ ಕುರಿತು ವರದಿಗಳನ್ನು ಪ್ರಕಟಿಸಿದೆ. ಇವು ಮಾಹಿತಿ ಹಕ್ಕು ಕಾಯ್ದೆ (ಆರ್‌ಟಿಐ) ಯ ಅಡಿಯಲ್ಲಿ ಪಡೆದ ಮಾಹಿತಿಗಳು. ಇವುಗಳ ಪ್ರಕಾರ ಆರ್‌ಬಿಐ ಮತ್ತು ಚುನಾವಣಾ ಆಯೋಗ ಬಲವಾದ ಆಕ್ಷೇಪಗಳನ್ನು ಎತ್ತಿದ್ದವು, ಆದರೆ ಸರಕಾರ ಇವನ್ನು ಸಂಪೂರ್ಣವಾಗಿ ತಿರಸ್ಕರಿಸಿತಷ್ಟೇ ಅಲ್ಲ, ಚುನಾವಣಾ ಆಯೋಗದ ಟಿಪ್ಪಣಿಯ ಬಗ್ಗೆ ಸಂಸತ್ತಿನಲ್ಲಿ ಸುಳ್ಳು ಹೇಳಿತು ಕೂಡ. ಚುನಾವಣಾ ಬಾಂಡುಗಳನ್ನು ಆರಂಭಿಸಲು ವಿವಿಧ ಕಾಯ್ದೆಗಳ ತಿದ್ದುಪಡಿಗಳಿಗೆ ಚುನಾವಣಾ ಆಯೋಗದ ಆಕ್ಷೇಪಗಳು ಈಗಾಗಲೇ ತಿಳಿದಿರುವ ಸಂಗತಿ. ಆದರೆ ಆರ್‌ಬಿಐ ಕೂಡ ಈ ಯೋಜನೆಯ ವಿರುದ್ಧ ಬಹಳ ತೂಕದ ತರ್ಕಗಳನ್ನು ಮುಂದಿಟ್ಟಿತ್ತು ಎಂಬುದು ಈಗಷ್ಟೇ ಮೊದಲ ಬಾರಿಗೆ ತಿಳಿದು ಬಂದಿದೆ.

ಆರ್‌ಬಿಐ ಜನವರಿ 30, 2017ರಂದು ಹಣಕಾಸು ಮಂತ್ರಾಲಯಕ್ಕೆ ಬರೆದ ಪತ್ರದಲ್ಲಿ ಚುನಾವಣಾ ಬಾಂಡುಗಳು ಮತ್ತು ಇದಕ್ಕಾಗಿ ಆರ್‌ಬಿಐ ಕಾಯ್ದೆಗೆ ತಿದ್ದುಪಡಿ ಕಪ್ಪು ಹಣವನ್ನು ಬಿಳಿ ಮಾಡುವುದನ್ನು ಪ್ರೋತ್ಸಾಹಿಸಿ "ಕೆಟ್ಟ ಪೂರ್ವನಿದರ್ಶನ"ವಾಗುತ್ತದೆ ಎಂದಿತ್ತು. ಬೇರರ್ ಬಾಂಡುಗಳ ಬಳಕೆಯನ್ನು ತಿರಸ್ಕರಿಸುತ್ತ, ಇವುಗಳಲ್ಲಿ ಪಾರದರ್ಶಕತೆ ಇಲ್ಲ, "ಅಂತಿಮವಾಗಿ ಮತ್ತು ವಾಸ್ತವವಾಗಿ ರಾಜಕೀಯ ಪಕ್ಷಗಳಿಗೆ ಯಾರು ದೇಣಿಗೆ ನೀಡುತ್ತಿದ್ದಾರೆ ಎಂದು ತಿಳಿಯುವುದೇ ಇಲ್ಲ" ಎಂದಿತ್ತು. ಸರಕಾರ ಪ್ರತಿಕ್ರಿಯೆಯನ್ನು ಕೇಳಿದ ಮರುದಿನವೇ ಆರ್‌ಬಿಐ ತನ್ನ ಟಿಪ್ಪಣಿಯನ್ನು ಕಳಿಸಿದ್ದರೂ ಆಗಿನ ರೆವಿನ್ಯೂ



ಕಾರ್ಯದರ್ಶಿ ಹಸ್‌ಮುಖ್ ಆದಿಯ ಆರ್‌ಬಿಐಗೆ ಬೇರರ್ ಬಾಂಡಿನ ಪರಿಕಲ್ಪನೆಯೇ ಅರ್ಥವಾಗಿರುವಂತೆ ಕಾಣಿಸುತ್ತಿಲ್ಲ ಎಂದು ಟಿಪ್ಪಣಿ ಮಾಡಿರುವುದು ದಾಖಲಾಗಿದೆ. ಆರ್‌ಬಿಐ ಸಲಹೆ ಬಹಳ ತಡವಾಗಿ ಬಂತು, ಆ ವೇಳೆಗೆ ಹಣಕಾಸು ಮಸೂದೆ ಮುದ್ರಿತಗೊಂಡಿತ್ತು ಎಂದೂ ಅವರು ಹೇಳಿದ್ದರು. ಆರ್‌ಬಿಐನ ಅಭಿಪ್ರಾಯಗಳನ್ನು ಸಂಪೂರ್ಣವಾಗಿ ತಿರಸ್ಕರಿಸಿದ ರೀತಿಯೇ ಸರಕಾರ ಈ ಪ್ರಸ್ತಾವವನ್ನು ಕಾರ್ಯರೂಪಕ್ಕೆ ತರಲು ಆಗಲೇ ನಿರ್ಧರಿಸಿತ್ತು, ಆರ್‌ಬಿಐ ಅಭಿಪ್ರಾಯಗಳನ್ನು ಕೇಳಿದ್ದು ಕೇವಲ ಒಂದು ಸೋಗು ಎಂಬುದನ್ನು ತೋರಿಸುತ್ತದೆ.

ಚುನಾವಣಾ ಆಯೋಗ ಕಾನೂನು ಮತ್ತು ನ್ಯಾಯ ಮಂತ್ರಾಲಯಕ್ಕೆ ಬರೆದ ಪತ್ರದಲ್ಲಿ ಚುನಾವಣಾ ಬಾಂಡುಗಳು ರಾಜಕೀಯ ಪಕ್ಷಗಳಿಗೆ ವಿದೇಶಿ ಮೂಲಗಳಿಂದ ಕಾನೂನುಬಾಹಿರ ವಂತಿಗೆಗಳನ್ನು ಮುಚ್ಚಿಡಲು ನೆರವಾಗುತ್ತವೆ ಎಂದಿತ್ತು. ಕಾರ್ಪೊರೇಟ್‌ಗಳು ಸತತವಾಗಿ ಮೂರು ವರ್ಷಗಳ ಸರಾಸರಿ ಲಾಭದ 7.5%ದ ವರೆಗೆ ವಂತಿಗೆ ನೀಡಬಹುದು ಎಂದು ಕಂಪನಿ ಕಾನೂನು ಕಾಯ್ದೆಯಲ್ಲಿ ಇದ್ದ ಅಂಶವನ್ನು ತೆಗೆಯಲು ತರಬೇಕೆಂದಿದ್ದ ತಿದ್ದುಪಡಿಯ ಫಲಿತಾಂಶವಾಗಿ ಕಪ್ಪು ಹಣವನ್ನು ರಾಜಕೀಯ ಪಕ್ಷಗಳಿಗೆ ವರ್ಗಾಯಿಸಲು ಚಿಪ್ಪು ಕಂಪನಿಗಳು ಹುಟ್ಟಿಕೊಳ್ಳುತ್ತವೆ ಎಂದು ಎಚ್ಚರಿಸಿತ್ತು.

ಚುನಾವಣಾ ಬಾಂಡುಗಳ ಮೂಲಕ ವಿದೇಶಿ ಕಂಪನಿಗಳು ರಾಜಕೀಯ ಪಕ್ಷಗಳಿಗೆ ಹಣ ಒದಗಿಸುವುದು ಸಾಧ್ಯವಾಗುತ್ತದೆ ಎಂದು ಆರ್‌ಬಿಐ ಮತ್ತು ಚುನಾವಣಾ ಆಯೋಗ ಎರಡೂ ಎಚ್ಚರಿಸಿರುವುದು ಗಮನಾರ್ಹ.

ಹಣಕಾಸು ರಾಜ್ಯಮಂತ್ರಿ ಪಿ ರಾಧಾಕೃಷ್ಣನ್ ಚುನಾವಣಾ ಆಯೋಗದಿಂದ ಸರಕಾರಕ್ಕೆ ಚುನಾವಣಾ ಬಾಂಡುಗಳ ಬಗ್ಗೆ ಟಿಪ್ಪಣಿ ಬಂದಿಲ್ಲ ಎಂದು ಸಂಸತ್ತಿನಲ್ಲಿ ಒಂದು ಸುಳ್ಳು ಉತ್ತರ ನೀಡಿದರು ಎಂಬುದನ್ನು ಆರ್‌ಟಿಐ ಮೂಲಕ ದೊರೆತಿರುವ ದಸ್ತಾವೇಜುಗಳು ತೋರಿಸುತ್ತವೆ. ನಿಜಸಂಗತಿಯೆಂದರೆ ಚುನಾವಣಾ ಆಯೋಗ ಈ ವಿಷಯದಲ್ಲಿ ತನ್ನ ವಿವರವಾದ ಅಭಿಪ್ರಾಯಗಳನ್ನು ಕೊಡಲು ಒಂದು ಪತ್ರವನ್ನು ಕಳಿಸಿತ್ತು. ಮಂತ್ರಿಗಳ ತಪ್ಪು ಹೇಳಿಕೆಯಿಂದ ಹಿಂದಕ್ಕೆ ಸರಿಯಲು ಮತ್ತು ತಪ್ಪಿಸಿಕೊಳ್ಳಲು ಹಣಕಾಸು ಮಂತ್ರಾಲಯದ ಅಧಿಕಾರಿಗಳು ದಾರಿಗಳನ್ನು ಹುಡುಕಬೇಕಾಗಿ ಬಂದಿತ್ತು.

2017ರ ಹಣಕಾಸು ಮಸೂದೆಯನ್ನು ಚುನಾವಣಾ ಬಾಂಡುಗಳಿಗೆ ಅವಕಾಶ ಕಲ್ಪಿಸಲು ಆರ್‌ಬಿಐ ಕಾಯ್ದೆ, ಜನತಾ ಪ್ರಾತಿನಿಧ್ಯ ಕಾಯ್ದೆ, ಮತ್ತು ಕಂಪನಿ ಕಾಯ್ದೆಗೆ ವಿವಿಧ ತಿದ್ದುಪಡಿಗಳನ್ನು ಒಳಗೊಂಡು ಪಾಸು ಮಾಡಿಸಿಕೊಳ್ಳಲಾಯಿತು. ವಿವಿಧ ಕಾಯ್ದೆಗಳ ತಿದ್ದುಪಡಿಗಳನ್ನು ಹಣಕಾಸು ಮಸೂದೆಗೆ ಲಗತ್ತಿಸಿದ್ದರಿಂದಾಗಿ, ಇವಕ್ಕೆ 'ಹಣ ಮಸೂದೆ'ಯ ವೇಷ ತೊಡಿಸಿ ರಾಜ್ಯಸಭೆಯ ಮಂಜೂರಾತಿ ಅಗತ್ಯವಿಲ್ಲದಂತೆ ಮಾಡಿ ತಪ್ಪಿಸಿಕೊಳ್ಳಲಾಯಿತು.

ಸರಕಾರ ಚುನಾವಣಾ ಬಾಂಡುಗಳ ಯೋಜನೆಯನ್ನು ಆಳುವ ಪಕ್ಷದ

ಪುಟ 12 ಕ್ಕೆ

ಚುನಾವಣಾ ಬಾಂಡು ಯೋಜನೆ ಖಂಡಿತವಾಗಿಯೂ ಭಾರತದಲ್ಲಿ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಗೆ ಒಂದು ಅತ್ಯಂತ ಅಪಾಯಕಾರಿ ಕ್ರಮ. ಅದನ್ನು ಎಷ್ಟು ಬೇಗ ರದ್ದು ಮಾಡಲಾಗುತ್ತೋ ಭಾರತದಲ್ಲಿ ಪ್ರಜಾಪ್ರಭುತ್ವಕ್ಕೆ ಅಷ್ಟು ಒಳ್ಳೆಯದು. ಇಂತಹ "ನ್ಯಾಯಾಂಗ ನುಣಿಚಿಕೆ" ಆಳುವ ಪಕ್ಷಕ್ಕೆ ಇಂತಹ ಒಂದು ತಪ್ಪು ಮತ್ತು ಹಾನಿಕಾರಕ ಯೋಜನೆಯನ್ನು ಬಳಸಿಕೊಂಡು ಪಾರಾಗಲು ಬಿಟ್ಟಿದೆ.




ವ್ಯಂಗ್ಯಚಿತ್ರ: ಮಂಜುಲ್, ಮಿಡ್‌ಡೇ

ಕರ್ನಾಟಕ ಏಕೀಕರಣಕ್ಕೆ ದ್ರೋಹ ಬಗೆದವರು



ಆರ್. ರಾಮಕೃಷ್ಣ

ಭಾಷಾ ನೀತಿಯ ವಿಷಯ ಬಂದಾಗ ನಾನು ಆರೆಸ್ಸೆಸ್ ಕಾರ್ಯಕರ್ತನಾಗಿದ್ದಾಗಿನ ಒಂದು ಘಟನೆಯನ್ನು ಎಂದಿಗೂ ನನಗೆ ಮರೆಯಲು ಸಾಧ್ಯವಿಲ್ಲ. ಒಮ್ಮೆ ಹೊರರಾಜ್ಯದಿಂದ ಒಬ್ಬರು ಆರೆಸ್ಸೆಸ್ ಮುಖಂಡರು ಬೆಂಗಳೂರಿಗೆ ಭೇಟಿ ಕೊಟ್ಟಿದ್ದಾರೆಂದು, ನಮ್ಮ ಪ್ರದೇಶದ ಶಾಖೆಗಳ ಪ್ರಮುಖ ಕಾರ್ಯಕರ್ತರನ್ನು ಉದ್ದೇಶಿಸಿ ಅವರು ಮಾತನಾಡುವರೆಂದು, 'ಭೈಠಕ್'ಗೆ ಬರಬೇಕೆಂದು ನನಗೆ ಆಹ್ವಾನ ಸಿಕ್ಕಿತು. ಆ ಮುಖಂಡರ ಹೆಸರೇನು ನನಗೆ ನೆನಪಿಲ್ಲ. ಅವರು ಉತ್ತರ ಭಾರತದವರು.



ಭೈಠಕ್ ನಡೆದದ್ದು ಶ್ರೀನಗರದ ಪಕ್ಕದ ಹನುಮಂತನಗರಲ್ಲಿರುವ 'ರಾಮ ಸಮರ್ಥ ಗೋಂದಾವಲೇಖರ್ ಸದ್ಗುರು ಶ್ರೀ ಬ್ರಹ್ಮ ಚೈತನ್ಯ ಮಂದಿರ'ದಲ್ಲಿ. ಹೇಳಿದ ಸಮಯಕ್ಕೆ ನಾನು 'ಬ್ರಹ್ಮ ಚೈತನ್ಯ ಮಂದಿರ'ದಲ್ಲಿ ಹಾಜರಾದೆ. ಭೈಠಕ್ ಆರಂಭವಾಯಿತು. ಸುಮಾರು 10–12 ಜನ ಪ್ರಮುಖ ಕಾರ್ಯಕರ್ತರು, ಮುಖಂಡರು ಭೈಠಕ್‌ನಲ್ಲಿ ಪಾಲ್ಗೊಂಡಿದ್ದರು. ಹೊರಗಿನಿಂದ ಬಂದ ಮುಖಂಡರು ಸುಮಾರು ಒಂದು ಗಂಟೆಗಿಂತಲೂ ದೀರ್ಘ ಕಾಲ ನಿರರ್ಗಳವಾಗಿ ಮಾತನಾಡಿದರು. ಅವರು ಮಾತನಾಡಿದ್ದು ಹಿಂದಿ ಭಾಷೆಯಲ್ಲಿ. ನನಗೆ ಹಿಂದಿ ಒಂದು ವಾಕ್ಯವೂ ಅರ್ಥವಾಗುತ್ತಿರಲಿಲ್ಲ. ಸಾಮಾನ್ಯವಾಗಿ ಆರೆಸ್ಸೆಸ್ ಸಭೆ ಸಮಾರಂಭ, ಭೈಠಕ್‌ಗಳಲ್ಲಿ ಹಾಸ್ಯ ಬಾರಿ ಕಡಿಮೆ. ಆದರೆ ಈ ಮುಖಂಡರು ಹಾಸ್ಯ ಪ್ರವೃತ್ತಿಯವರು ಎಂದು ಕಾಣುತ್ತದೆ. ಭೈಠಕ್‌ನ ಉದ್ದಕ್ಕೂ ಕಾರ್ಯಕರ್ತರು ನಡು ನಡುವೆ ತುಂಬಾ ನಗುತ್ತಿದ್ದರು. ಎಲ್ಲರೂ ಎದ್ದು ಬಿದ್ದು ನಗುತ್ತಿದ್ದರೆ ನಾನು ಮಾತ್ರ ಒಂದು ವಾಕ್ಯವೂ ಅರ್ಥವಾಗದೇ ಪೆಚ್ಚಾಗಿ ಎಲ್ಲರ ಮುಖ ಮುಖ ನೋಡುತ್ತಾ ಕುಳಿತಿದ್ದೆ. ನಾನು ಯಾವ ಮಾತಿಗೂ ನಗದೇ, ಮುಖ ಚಿಕ್ಕದು ಮಾಡಿಕೊಂಡು ಕುಳಿತಿದ್ದರೂ ಯಾವ ಮುಖಂಡರಾಗಲೀ, ಕಾರ್ಯಕರ್ತರಾಗಲಿ ಆ ಮುಖಂಡರ ಮಾತುಗಳನ್ನು ಕನ್ನಡಕ್ಕೆ ಅನುವಾದ ಮಾಡಬೇಕೆಂದಾಗಲಿ ಪ್ರಯತ್ನಿಸಲಿಲ್ಲ ಅಥವಾ ಮಾತುಗಳು ಎಲ್ಲರಿಗೂ ಅರ್ಥವಾಗುತ್ತಿದೆಯಾ ಎಂದಾದರೂ ಯಾರೂ ಕೇಳಲಿಲ್ಲ. ಹೋಗಲಿ ಕನಿಷ್ಟ ಭೈಠಕ್ ಮುಗಿದ ಮೇಲಾದರೂ ಭೈಠಕ್ ಯಾವ ವಿಷಯಕ್ಕೆ ಸಂಬಂಧಿಸಿದ್ದು, ಮುಖಂಡರ ಮಾತಿನ ಸಾರಾಂಶ ಏನು ಎಂದು ಯಾರೂ ನನಗೆ ವಿವರಿಸಲಿಲ್ಲ.

ಇಲ್ಲಿ ನಾನು ಒಂದು ವಿಷಯವನ್ನು ಹೇಳಲೇ ಬೇಕು. ನಾನು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.) ಸಂಘಟನೆಯ ಕಾರ್ಯಕರ್ತನಾದ ಮೇಲೆ ನನಗೆ ಗಮನಕ್ಕೆ ಬಂದ ಅಂಶ ಇದು. ಹೊರ ರಾಜ್ಯಗಳಿಂದ ಅಥವಾ ದೆಹಲಿ ಕೇಂದ್ರದಿಂದ ಯಾರೇ ಎಸ್ಸೆಫೈ ಮುಖಂಡರು ಬರಲಿ, ಅವರು ಎಷ್ಟೇ ದೊಡ್ಡವರಿರಲಿ, ಇಲ್ಲಿ ಯಾರೇ ಬಂದು ಭಾಷಣ ಮಾಡಲಿ, ಎಲ್ಲೇ ಮಾತನಾಡಲಿ ಆ ಮಾತುಗಳನ್ನು, ಭಾಷಣವನ್ನು ಇಲ್ಲಿನ ಸ್ಥಳೀಯ ಭಾಷೆಯಾದ ಕನ್ನಡ ಭಾಷೆಗೆ ಅನುವಾದ ಮಾಡುವ ವ್ಯವಸ್ಥೆ ಕಡ್ಡಾಯವಾಗಿ ಇರುತ್ತಿತ್ತು. ಸಣ್ಣಪುಟ್ಟ ಸಭೆಗಳಾದರೂ ಅಷ್ಟೆ. ಅಖಿಲ ಭಾರತ ಮಟ್ಟದ ಸಭೆಗಳಲ್ಲಿ, ಸಮಾರಂಭಗಳಲ್ಲಿ ಸಹ ಯಾವುದೇ ರಾಜ್ಯದ ಪ್ರತಿನಿಧಿಗಳಿಗೆ ತಮಗೆ ಇಂಗ್ಲೀಷ್ ಅಥವಾ ಹಿಂದಿಯಲ್ಲಿ ಮಾತನಾಡಲು ಬರುವುದಿಲ್ಲವೆಂದಾದರೆ ಅವರು ತಮ್ಮ ರಾಜ್ಯದ ಭಾಷೆಯಲ್ಲಿ ಮಾತನಾಡಲು ಅವಕಾಶ ಇರುತ್ತಿತ್ತು. ಇಂತಹ ಸಂದರ್ಭಗಳಲ್ಲಿ ಆ ಸ್ಥಳೀಯ ಭಾಷೆ ಮತ್ತು ಹಿಂದಿ/ಇಂಗ್ಲಿಷ್ ಬಲ್ಲ ನೆರೆಯ ಗಡಿಭಾಗಗಳ ಪ್ರತಿನಿಧಿಗಳಿಂದ ಆ ಮಾತುಗಳನ್ನು ಅನುವಾದ ಮಾಡಿಸಿ ಎಲ್ಲರಿಗೂ ವಿಷಯವನ್ನು ತಿಳಿಯುಪಡಿಸಲಾಗುತ್ತಿತ್ತು. ಇದು ದೇಶೀಯ ಭಾಷೆಗಳನ್ನು ಗೌರವಿಸುವ, ಗುರುತಿಸುವ ಒಂದು ಉತ್ತಮ ಮಾದರಿ.

ಆದರೆ ಇದಕ್ಕೆ ವಿರುದ್ಧವಾಗಿ ನಾನು ಆರೆಸ್ಸೆಸ್‌ನಲ್ಲಿ ಕಂಡದ್ದು ದೇಶೀಯ ಭಾಷೆಗಳನ್ನು ದುರ್ಲಕ್ಷಿಸುವ, ಹಿಂದಿಯನ್ನು ರಾಷ್ಟ್ರಭಾಷೆ ಎಂದು, ಸಂಸ್ಕೃತವನ್ನು ದೇವಭಾಷೆ ಎಂದು ಮೆರೆಸುವ ದುರಹಂಕಾರಿ ಪ್ರವೃತ್ತಿ.

ಬಹುತ್ವಕ್ಕೆ ಬೆಲೆಯಿಲ್ಲ – ವೈವಿಧ್ಯತೆಗೆ ಗೌರವವಿಲ್ಲ


ನೂರಾರು ಭಾಷೆಗಳು, ಹತ್ತಾರು ಮತಧರ್ಮಗಳು, ಅಸಂಖ್ಯಾತ–ವೈವಿಧ್ಯಮಯ ಸಂಸ್ಕೃತಿಯನ್ನುಳ್ಳ ಭಾರತ ದೇಶವನ್ನು ಒಂದು ಮತಧರ್ಮ, ಒಂದು ಭಾಷೆ, ಒಂದು ಸಂಸ್ಕೃತಿಯ 'ಹಿಂದೂ ರಾಷ್ಟ್ರ'ವನ್ನಾಗಿಸುವುದು ನಿಜಕ್ಕೂ ಆರೆಸ್ಸೆಸ್‌ನ ಗುರಿಯಾಗಿದೆ. 'ಹಿಂದೂ ಸಂಸ್ಕೃತಿ'ಯ ಹೆಸರಿನಲ್ಲಿ ಬ್ರಾಹ್ಮಣ್ಯದ ಮೇಲ್ಮೆಯ ವೈದಿಕ ಪುರೋಹಿತಶಾಹಿ ಮೌಲ್ಯಗಳನ್ನು, ವ್ಯವಸ್ಥೆಯನ್ನು ಇಡೀ ಸಮಾಜದ ಮೇಲೆ ಬಲಾತ್ಕಾರವಾಗಿ ಹೊರಿಸುವುದು, ಹಿಂದಿ ಭಾಷೆಯನ್ನು ಎಲ್ಲ ಕಡೆ ಹೇರುವುದು, ಸಾಧ್ಯವಾದ ಕಡೆಗಳಲ್ಲೆಲ್ಲಾ ಸಂಸ್ಕೃತ ಭಾಷೆಯನ್ನು ಸಮಾಜದ ಮೇಲೆ ಹೇರುವುದು ಆರೆಸ್ಸೆಸ್‌ನ ಉದ್ದೇಶವಾಗಿದೆ.

ಶೂದ್ರರು, ಮಹಿಳೆಯರು ಸಂಸ್ಕೃತವನ್ನು ಕಲಿಯಬಾರದೆಂದು ಭಾರತದಲ್ಲಿ ಸಾವಿರಾರು ವರ್ಷಗಳ ಕಾಲ ನಿರ್ಬಂಧವಿತ್ತು. ಸಂಸ್ಕೃತ ಭಾಷೆಯ ವೇದ ಮಂತ್ರಗಳನ್ನು ಕೇಳಿದ ಕಿವಿಗಳಿಗೆ ಕಾದ ಸೀಸವನ್ನು ಹುಯ್ಯಲಾಗುತ್ತಿತ್ತು. ವೇದಗಳನ್ನು ಉಚ್ಚರಿಸಿದ ಶೂದ್ರರ ನಾಲಿಗೆಯನ್ನು ಕತ್ತರಿಸಲಾಗುತ್ತಿತ್ತು. ಇಂತಹ ಶಿಕ್ಷೆಗಳನ್ನು ಪ್ರತಿಪಾದಿಸುವ ಶಾಸ್ತ್ರಗ್ರಂಥಗಳೇ ಇವೆ. ವೇದಗಳನ್ನು ಯಾರಾದರೂ ಶೂದ್ರರು ಮನನ ಮಾಡಿಕೊಂಡು ಬಿಟ್ಟಿದ್ದರೆ ಅಂತಹವರ ದೇಹವನ್ನೇ ಛಿದ್ರಗೊಳಿಸಬೇಕು ಎಂದು ಪ್ರತಿಪಾದಿಸುವ ಸಂಸ್ಕೃತ ಶ್ಲೋಕಗಳೂ ಇವೆ. ಅಂತಹ ನಿರ್ಬಂಧಗಳ ಕಾರಣದಿಂದಲೇ ಸಂಸ್ಕೃತ ಕೇವಲ ಪಂಡಿತರ ಭಾಷೆಯಾಗಿ ಉಳಿದು ಹೋಯಿತು. ಜನಸಾಮಾನ್ಯರ ಪಾಲಿಗೆ ಅದು 'ಮೃತ ಭಾಷೆ'ಯಾಗಿ ಹೋಯಿತು. ಈಗ ಹೇಗಾದರೂ ಮಾಡಿ ಸಂಸ್ಕೃತ ಭಾಷೆಗೆ ಜೀವ ಕೊಡಬೇಕೆಂದು ನಿರ್ಧರಿಸಿರುವ ಪುರೋಹಿತಶಾಹಿಗಳು ಶಿಕ್ಷಣದಲ್ಲಿ ಸಂಸ್ಕೃತವನ್ನು ಎಲ್ಲರಿಗೂ ಕಡ್ಡಾಯ ಮಾಡಬೇಕೆಂದು ಆಗ್ರಹಿಸುತ್ತಾರೆ. ಎರಡು ಬಗೆಯ ಸರ್ವಾಧಿಕಾರ. ಆಗ ಸಂಸ್ಕೃತವನ್ನು ಶೂದ್ರರು ಕಲಿಯಬಾರದು ಎಂದು ಆಜ್ಞೆ, ಈಗ ಎಲ್ಲರೂ ಸಂಸ್ಕೃತವನ್ನು ಕಡ್ಡಾಯವಾಗಿ ಕಲಿಯಲೇ ಬೇಕು ಎಂದು ಆಜ್ಞೆ ಹೊರಡಿಸುವ ಪ್ರಯತ್ನ. ಇದು ಪುರೋಹಿತಶಾಹಿಯ ನಿಜವಾದ ಮುಖ.



ಭಾಷಾವಾರು ರಾಜ್ಯಗಳ ಏಕೀಕರಣಕ್ಕೆ ವಿರೋಧ

ಸ್ವಾತಂತ್ರ್ಯಾನಂತರ ಭಾರತದಲ್ಲಿ ರಚನೆಯಾಗಿರುವ ಭಾಷಾವಾರು ಪ್ರಾಂತ್ಯ ರಚನೆ ಒಂದು ಪ್ರಜಾಸತ್ತಾತ್ಮಕ ಪ್ರಕ್ರಿಯೆಯಾಗಿದೆ. ಒಂದು ಭಾಷೆ ಮಾತನಾಡುವವರೆಲ್ಲಾ ಒಂದು ಆಡಳಿತದ ಘಟಕವಾಗಿರುವುದು ಒಂದು ಪ್ರಜಾಸತ್ತಾತ್ಮಕ ಆಶಯ. ಒಂದು ಭಾಷೆ ಮಾತನಾಡುವ ಜನರು ಒಟ್ಟಾಗಿದ್ದರೆ ತಮ್ಮ ಭಾಷೆ, ಸಂಸ್ಕೃತಿಗಳ ರಕ್ಷಣೆ, ಅಭಿವೃದ್ಧಿಗೂ ಅದು ಸಹಾಯವಾಗುತ್ತದೆ. ಒಂದು ಭಾಷೆಯನ್ನಾಡುವ ಜನರು ಒಂದು ಆಡಳಿತ ಘಟಕದ ಅಡಿ ಇರುವುದು ಜನರ ಆಶಯಗಳಿಗೆ ಹತ್ತಿರವಾದ ಆಡಳಿತವನ್ನು ನೀಡುವುದಕ್ಕೆ ಕೂಡ ಅನುಕೂಲಕರ. ಈ ಪರಿಕಲ್ಪನೆಯ ಮೇಲೆಯೇ ಕರ್ನಾಟಕ, ಕೇರಳ, ತಮಿಳುನಾಡು,(ಹಿಂದೆ ಆಂಧ್ರ ಪ್ರದೇಶ), ಮಹಾರಾಷ್ಟ್ರ, ಗುಜರಾತ್, ಒರಿಸ್ಸಾ, ಪಶ್ಚಿಮ ಬಂಗಾಳ, ಬಿಹಾರ, ಅಸ್ಸಾಂ ಮುಂತಾದ ರಾಜ್ಯಗಳು ರಚನೆಯಾಗಿವೆ. ಈ ವ್ಯವಸ್ಥೆ ಸ್ಥಳೀಯ ಭಾಷೆ, ಸಂಸ್ಕೃತಿಯ ಉಳಿವು ಮತ್ತು ಬೆಳವಣಿಗೆಗೆ ಸಹ ಪೂರಕವಾಗಿದೆ. ಆದರೆ ಇಂತಹ ಭಾಷಾವಾರು ರಾಜ್ಯ ರಚನೆ ಆರೆಸ್ಸೆಸ್‌ಗೆ ಒಪ್ಪಿಗೆ ಇಲ್ಲ. ಭಾರತ ದೇಶವು ಹಿಂದೂ ಧರ್ಮದ ಆಧಾರದ ಮೇಲೆ 'ಹಿಂದೂ ರಾಷ್ಟ್ರ'ವಾಗಬೇಕೆಂಬುದು ಆರೆಸ್ಸೆಸ್ ಸಿದ್ಧಾಂತ. ಇಂತಹ ದೇಶದಲ್ಲಿ ಕೇಂದ್ರ ಸರ್ಕಾರವು ಬಲಿಷ್ಟವಾಗಿದ್ದು ರಾಜ್ಯ ಸರ್ಕಾರಗಳು ಕೇಂದ್ರ ಸರಕಾರದ ಮೇಲೆ ಅವಲಂಬಿತವಾಗಿರಬೇಕಾದಂತಹ ಚಿಕ್ಕ ಚಿಕ್ಕ ರಾಜ್ಯಗಳ ವ್ಯವಸ್ಥೆಯನ್ನು ಆರೆಸ್ಸೆಸ್ ಪ್ರತಿಪಾದಿಸುತ್ತದೆ.



ಏನನ್ನೂ ಮಾಡಲಿಲ್ಲ, ಗುರೂಜಿ ಸರ್ಕಾರವನ್ನು ಎಚ್ಚರಿಸಿದರು.
ಭಾಷಾವಾರು ಪ್ರಾಂತಗಳ ರಚನೆಯಿಂದ ದೇಶದ ಐಕ್ಯತೆಗೆ
ಭಂಗಬರುವುದೆಂದೂ ಅವರು ಸಾರಿ ಹೇಳಿದರು. ಗುರೂಜಿ

'ರಾಷ್ಟ್ರೋತ್ಥಾನ ಸಾಹಿತ್ಯ'ದ ಭಾರತ–ಭಾರತ ಪುಸ್ತಕ ಸಂಪದದ 97 ನೇ ಸಂಖ್ಯೆಯ 'ಮಾ.ಸ. ಗೋಳವಲಕರ್' ಪುಸ್ತಕದ ಪುಟ 36 ರಲ್ಲಿ ಈ ವಿಷಯವನ್ನು ಸ್ಪಷ್ಟವಾಗಿ ಸಾರಲಾಗಿದೆ. "ಭಾಷಾವಾರು ಪ್ರಾಂತಗಳ ರಚನೆಯಿಂದ ದೇಶದ ಐಕ್ಯತೆಗೆ ಭಂಗ ಬರುವುದೆಂದೂ ಅವರು(ಗೋಲ್ವಾಲ್ಕರ್) ಸಾರಿ ಹೇಳಿದರು." ಎಂದು ಆರೆಸ್ಸೆಸ್‌ನ ಗುರೂಜಿಯವರ ವಿಚಾರವನ್ನು ದಾಖಲಿಸಲಾಗಿದೆ. ಇದೇ ತಿಳುವಳಿಕೆಯ ಆಧಾರದಲ್ಲಿಯೇ ಸಂಘ ಪರಿವಾರವು ಮಧ್ಯಪ್ರದೇಶ, ಬಿಹಾರ, ಉತ್ತರ ಪ್ರದೇಶಗಳನ್ನು ವಿಭಜಿಸಿ ಕ್ರಮವಾಗಿ ಛತ್ತೀಸ್‌ಗಡ, ಜಾರ್ಖಂಡ್, ಉತ್ತರಾಖಂಡ್ ಮುಂತಾದ ರಾಜ್ಯಗಳನ್ನು ರಚಿಸುವ ಪ್ರತ್ಯೇಕ ರಾಜ್ಯ ಚಳುವಳಿಗೆ ಬೆಂಬಲ ನೀಡಿತು. ಮುಂದೊಮ್ಮೆ ಸಂಘ ಪರಿವಾರಕ್ಕೆ ಅನುಕೂಲಕರ ಸನ್ನಿವೇಶವು ಒದಗಿ ಬಂದಾಗ ಕರ್ನಾಟಕ ರಾಜ್ಯದ ಐಕ್ಯತೆಯನ್ನು ಮುರಿಯಲು ಸಂಘಪರಿವಾರ ಹೇಸುವುದಿಲ್ಲ. ಈ ಬಗೆಗೆ ಅನುಮಾನವೇ ಬೇಡ.



ಆ ಸಂದರ್ಭದಲ್ಲಿ ವಿವಿಧ ರಾಜಕೀಯ ಪಕ್ಷಗಳಲ್ಲಿ ಕರ್ನಾಟಕದ ಏಕೀಕರಣ ಸಾಧ್ಯವಾಗುತ್ತದೆ ಎಂಬ ವಿಶ್ವಾಸವಿದ್ದ ಏಕೈಕ ರಾಜಕೀಯ ಪಕ್ಷ ಕಮ್ಯೂನಿಸ್ಟ್ ಪಕ್ಷ ಎಂದು ಹಿರಿಯ ಸ್ವಾತಂತ್ರ ಹೋರಾಟಗಾರರಾದ ನಿಟ್ಟೂರು ಶ್ರೀನಿವಾಸ್‌ರಾವ್ ರವರು ದಾಖಲಿಸಿದ್ದಾರೆ. ಕಮ್ಯೂನಿಸ್ಟ್‌ರು ಕರ್ನಾಟಕದ ಏಕೀಕರಣಕ್ಕಾಗಿ ಶ್ರಮಿಸಿದರು. ಆದರೆ ಸ್ವಾತಂತ್ರ ಹೋರಾಟಕ್ಕೆ ದ್ರೋಹ ಬಗೆದಂತೆ ಕರ್ನಾಟಕದ ಏಕೀಕರಣ ಚಳುವಳಿಗೂ ಆರ್.ಎಸ್.ಎಸ್. ದ್ರೋಹ ಬಗೆಯಿತು.

ಆರೆಸ್ಸೆಸ್ ಬಯಸುವಂತೆ ಮತಧರ್ಮದ ಆಧಾರದ ಮೇಲೆ ರಾಷ್ಟ್ರ ನಿರ್ಮಾಣ, ದೇಶದ ಐಕ್ಯತೆಯ ಸಾಧನೆ ಸಾಧ್ಯವೇ ಇಲ್ಲ. ಈ ವಿಷಯದಲ್ಲಿ ಒಂದು ಜೀವಂತ ಉದಾಹರಣೆಯನ್ನು ನೋಡೋಣ. 1947 ರಲ್ಲಿ ಭಾರತ ದೇಶಕ್ಕೆ ಸ್ವಾತಂತ್ರ್ಯವೇನೋ ಬಂತು. ಆದರೆ ಈ ಸಂತೋಷದ ಜೊತೆಗೆ ದೇಶ ವಿಭಜನೆಯ ದುರಂತವೂ ನಡೆದು ಹೋಯಿತು. ಭಾರತವು ವಿವಿಧ ಮತಧರ್ಮಗಳು, ನಾನಾ ಭಾಷೆ, ಸಂಸ್ಕೃತಿಗಳನ್ನೊಳಗೊಳ್ಳುವ ಒಂದು ಧರ್ಮನಿರಪೇಕ್ಷ(ಜಾತ್ಯತೀತ) ದೇಶವಾಯಿತು. ಆದರೆ ನೆರೆಯ ಪಾಕಿಸ್ತಾನವು ಮತೀಯ ನೆಲೆಗಟ್ಟಿನಲ್ಲಿ 'ಮುಸ್ಲಿಂ ರಾಷ್ಟ್ರ'ವಾಯಿತು. ಈ ಕಾರಣದಿಂದಾಗಿಯೇ ಪಾಕಿಸ್ತಾನ ಇಂದಿಗೂ ಭಾರತಕ್ಕಿಂತಲೂ ಗಂಭೀರವಾದ, ಸಂಕೀರ್ಣವಾದ ಹತ್ತಾರು, ನೂರಾರು ಸಮಸ್ಯೆಗಳನ್ನು ಎದುರಿಸುತ್ತಿದೆ,



ಸಂಕಷ್ಟಗಳಲ್ಲಿ ನರಳುತ್ತಿದೆ. ಎಲ್ಲಕ್ಕಿಂತ ಮುಖ್ಯವಾಗಿ ಕೆಲವೇ ವರ್ಷಗಳಲ್ಲಿ ಪಾಕಿಸ್ತಾನವು ಎರಡು ತುಂಡುಗಳಾಗಿ ವಿಭಜನೆಗೊಂಡಿತು. ಪೂರ್ವ ಪಾಕಿಸ್ತಾನ ಎಂದು ಕರೆಯಲಾಗುತ್ತಿದ್ದ ಪಾಕಿಸ್ತಾನದ ಪೂರ್ವ ಭಾಗವು 'ಬಾಂಗ್ಲಾದೇಶ' ಎಂಬ ಹೊಸ ದೇಶವಾಗಿ ಮೂಡಿಬಂದಿತು. ಬಂಗಾಳಿ ಭಾಷೆಯನ್ನಾಡುವ ಪೂರ್ವ ಪಾಕಿಸ್ತಾನದ ಮೇಲೆ ಉರ್ದು ಭಾಷೆಯನ್ನು ಹೇರಿದ್ದು, ಪಾಕಿಸ್ತಾನದ ಐಕ್ಯತೆಗೆ ಮಾರಣಾಂತಿಕ ಹೊಡೆತವನ್ನು ನೀಡಿತು. ಎರಡೂ ಭಾಗಗಳ ಬಹುಸಂಖ್ಯಾತರು ಒಂದೇ ಮತಕ್ಕೆ ಸೇರಿದವರು ಎಂಬ ಧಾರ್ಮಿಕ ಅಂಶವು ಈ ಎರಡು ಭಾಗಗಳ ಐಕ್ಯತೆಯನ್ನು ಉಳಿಸಲು ಸಾಧ್ಯವಾಗಲಿಲ್ಲ. ಈ ವಿಷಯದಲ್ಲಿ ಭಾರತ ದೇಶವು ಕಲಿಯಬೇಕಾದ ಅಮೂಲ್ಯವಾದ ಪಾಠಗಳಿವೆ. ಇಂತಹ ಅನುಭವಗಳಿಂದ ಪಾಠ ಕಲಿಯದೇ ಹೋದರೆ ಪಾಕಿಸ್ತಾನ ಅಪ್ಪಿಕೊಂಡ ದುರಂತವನ್ನೇ ನಮ್ಮ ದೇಶವೂ ಅಪ್ಪಿಕೊಳ್ಳಬೇಕಾಗುತ್ತದೆ.

ಹುತಾತ್ಮ ರಂಜಾನ್ ಸಾಬ್ ಕನಸು ನನಸಾಗಲಿ

ಅಪಾರವಾದ ತ್ಯಾಗ, ಧೀರ್ಘ ಹೋರಾಟಗಳ ಮೂಲಕ 1956 ರಲ್ಲಿ ಕರ್ನಾಟಕ ರಾಜ್ಯದ ಏಕೀಕರಣ ಸಾಧ್ಯವಾಗಿದೆ. ಬಾಂಬೆ ಕರ್ನಾಟಕ, ಹೈದರಾಬಾದ್ ಕರ್ನಾಟಕ, ಹಳೇ ಮೈಸೂರು ಪ್ರಾಂತ, ಮದ್ರಾಸ್ ಪ್ರಾಂತಕ್ಕೆ ಸೇರಿದ ಕರ್ನಾಟಕದ ಭಾಗ ಈ ಎಲ್ಲವೂ ಸೇರಿ ಈಗ ಏಕೀಕೃತವಾದ ಐಕ್ಯ ಕರ್ನಾಟಕ ನಿರ್ಮಾಣವಾಗಿದೆ. ಈ ಭಾಷಾವಾರು ಪ್ರಾಂತ್ಯದ ಆಧಾರದಲ್ಲಿ ಕನ್ನಡ ನಾಡು, ನುಡಿ, ಸಂಸ್ಕೃತಿ, ಜನಜೀವನ ಏಳಿಗೆ ಕಾಣಲು, ಅಭಿವೃದ್ಧಿ ಹೊಂದಲು ನಾವೆಲ್ಲಾ ಶ್ರಮಿಸಬೇಕು. ಸಂಘ ಪರಿವಾರವು ಕರ್ನಾಟಕ ಐಕ್ಯತೆ ಮುರಿಯಲು ಮತ್ತು ಯಾವುದೇ ಭಾಷಾವಾರು ರಾಜ್ಯದ ಐಕ್ಯತೆಯನ್ನು ಮುರಿಯಲು ಎಂದಿಗೂ ಅವಕಾಶವನ್ನು ಕೊಡಬಾರದು.

ಕರ್ನಾಟಕದ ಏಕೀಕರಣ ಚಳುವಳಿಯಲ್ಲಿ ಬಳ್ಳಾರಿಯ ಕಾರ್ಯಕರ್ತ ರಂಜಾನ್ ಸಾಬ್ ಹುತಾತ್ಮರಾಗಿದ್ದಾರೆ. ಕರ್ನಾಟಕ ಏಕೀಕರಣದ ಮೊದಲ ಹುತಾತ್ಮ ಅವರು. ಇಂತಹ ಹುತಾತ್ಮರ ಐಕ್ಯತೆಯ ಮತ್ತು ಅಭಿವೃದ್ಧಿಯ ಕನಸುಗಳನ್ನು ನನಸು ಮಾಡಲು ನಾವೆಲ್ಲಾ ಶ್ರಮಿಸಬೇಕಿದೆ. ●

'ಸೈದ್ಧಾಂತಿಕ ಕ್ರಾಂತಿಕಾರಿ ಸಂಘಟನೆಯಿಂದ ಮಾತ್ರವೇ ಅಕ್ರಮಣಕಾರಿ ಕಾರ್ಪೊರೇಟ್ ನೀತಿಗಳನ್ನು ಹಿಮ್ಮೆಟ್ಟಿಸಲು ಸಾಧ್ಯ'

ಸಿಐಟಿಯು ರಾಜ್ಯ ಸಮ್ಮೇಳನದ ಸಂಘಟನಾ ವರದಿಯ ಪ್ರಮುಖ ಅಂಶಗಳು





1. ಆಕ್ರಮಣಕಾರಿ ಕಾರ್ಪೋರೇಟ್‌ಪರ ಆರ್ಥಿಕ ನೀತಿಗಳು ಜಾರಿಯಾದ ಪರಿಣಾಮವಾಗಿ ತೀವ್ರವಾಗುತ್ತಿರುವ ಆರ್ಥಿಕ, ಸಾಮಾಜಿಕ ಅಸಮಾನತೆಗಳಿಂದ ಸಂಕಷ್ಟಕ್ಕೊಳಗಾದ ಬಹುಸಂಖ್ಯೆಯ ಜನರ ಜೀವನ ಪರಿಸ್ಥಿತಿಯ ಸುಧಾರಣೆಗೆ ಅನಿವಾರ್ಯವಾಗಿರುವ ಚಳುವಳಿಗಳನ್ನು ತೀವ್ರವಾಗಿ ಕಟ್ಟಿ ಬೆಳೆಸಬೇಕಾದ ಕರ್ತವ್ಯ ಎಡ, ಪ್ರಗತಿಪರ ಹಾಗು ಸಮಾಜವಾದಿ ಚಳುವಳಿಗಳ ಮೇಲಿನ ಬಹುದೊಡ್ಡ ಜವಾಬ್ಧಾರಿಯಾಗಿದೆ.
2. ಸಾಮಾನ್ಯಜನರಲ್ಲಿ ಈ ವ್ಯವಸ್ಥೆಯ ವಿರುದ್ಧ ಬೆಳೆಯುತ್ತಿರುವ ಆಕ್ರೋಶವನ್ನು ಬಲಪಂಥೀಯ ಶಕ್ತಿಗಳು ಕೋಮುಭಾವನೆಗಳನ್ನಾಗಿ ಪರಿವರ್ತಿಸಿ ಕೆರಳಿಸುವ ಮೂಲಕ ಅದನ್ನು ರಾಜಕೀಯವಾಗಿ ಕ್ರೂಢೀಕರಿಸುವ ಪ್ರಯತ್ನದಲ್ಲಿ ಸಫಲವಾಗುತ್ತಿವೆ. ಎಲ್ಲಾ ಪ್ರಜಾಪ್ರಭುತ್ವ ಹಕ್ಕುಗಳನ್ನು ಹಾಗು ಮೌಲ್ಯಗಳನ್ನು ಮೊಟಕುಗೊಳಿಸಲು ಹಾಗು ಜನರ ಪ್ರತಿವಿರೋಧವನ್ನು ಅಮಾನವೀಯವಾಗಿ ನಿಯಂತ್ರಿಸುವ ಕೃತ್ಯಗಳಲ್ಲಿ ಈ ಬಲಪಂಥೀಯ ಶಕ್ತಿಗಳು ಪ್ರಯತ್ನ ಮಾಡುತ್ತಿವೆ. ಸರ್ಕಾರಿ ಯಂತ್ರಗಳಲ್ಲಿ ಬಲಫಂಥೀಯ ಆರ್‌ಎಸ್‌ಎಸ್ ಸಂಘಟನೆಗಳ ಹಿಂಬಾಲಕರನ್ನು ಆಯಕಟ್ಟಿನ ಎಲ್ಲಾ ಹಂತಗಳಲ್ಲಿ, ನೀತಿನಿರೂಪಕ ಸಮಿತಿಗಳಲ್ಲಿ, ನ್ಯಾಯಾಂಗ ಹಾಗು ಆಡಳಿತಾತ್ಮಕ ಉನ್ನತ ಹುದ್ದೆಗಳು ಮತ್ತು ಸಮಿತಿಗಳಲ್ಲಿ ನೇಮಕ ಮಾಡುವ ಮೂಲಕ ರಾಜಕೀಯ ಯಂತ್ರವನ್ನು ಸಂಪೂರ್ಣವಾಗಿ ಕೋಮುವಾಧೀಕರಣಗೊಳಿಸಲಾಗ ುತ್ತಿದೆ.
3. ಈ ಅಪಾಯವನ್ನು 2016ರಲ್ಲಿ ಪುರಿಯಲ್ಲಿ ಜರುಗಿದ ಸಿಐಟಿಯುವಿನ 15ನೇ ಅಖಿಲ ಭಾರತ ಸಮ್ಮೇಳನವು ನಿಖರವಾಗಿ ಗುರುತಿಸಿದೆ"ಈ ಅವಧಿಯಲ್ಲಿ ನಡೆದ ದೇಶವ್ಯಾಪಿ ಮುಷ್ಕರಗಳಲ್ಲಿ ಬೃಹತ್ ಸಂಖ್ಯೆಯ ಕಾರ್ಮಿಕರು ಭಾಗವಹಿಸಿದರು. ಸರ್ಕಾರಗಳು ಅನುಸರಿಸುತ್ತಿರುವ ನವಉದಾರೀಕರಣ ಆರ್ಥಿಕ ನೀತಿಗಳ ಪರಿಣಾಮಗಳ ವಿರುದ್ಧದ ದುಡಿಯುವ ಜನರ ಬೇಸರ ಹಾಗು ಆಕ್ರೋಶ ಈ ಮುಷ್ಕರಗಳ ಮೂಲಕ ಯಶಸ್ವಿಯಾಗಿ ಬಿಂಬಿತವಾಯಿತು. ಆದರೆ, 2014ರ ಚುನಾವಣೆಗಳ ಫಲಿತಾಂಶವು ಈ ನೀತಿಗಳ ವಿರುದ್ಧ ದುಡಿಯುವ ಜನರಿಗಿದ್ದಆಕ್ರೋಶವನ್ನು ಪ್ರತಿಧ್ವನಿಸುವಲ್ಲಿ ಯಶಸ್ವಿಯಾಗಲಿಲ್ಲ. ಯಾವಕಾರ್ಮಿಕರು ಹಾಗು ದುಡಿಯುವ ಜನರುಅಸಂಖ್ಯಾತ ಸಂಖ್ಯೆಯಲ್ಲಿ ಹೋರಾಟಗಳಲ್ಲಿ ಭಾಗವಹಿಸಿ ತಮ್ಮ ಹಕ್ಕುಗಳಿಗಾಗಿ ಒತ್ತಾಯಿಸುತ್ತಾರೊ ಅದೇಜನರು ಚುನಾವಣೆಗಳು ಬಂದಾಗ ಅವರ ಹಿತಕ್ಕೆ ಮಾರಕವಾದ ನೀತಿಗಳನ್ನು ಅನುಸರಿಸುವ ಅವೇ ರಾಜಕೀಯ ಪಕ್ಷಗಳನ್ನು ಬೆಂಬಲಿಸಿ ಮತ ಚಲಾಯಿಸುವುದನ್ನು ಗಮನಿಸಬೇಕಿದೆ. ಸಮಸ್ಯೆಗಳನ್ನು ಅದಕ್ಕೆ ಕಾರಣವಾಗಿರುವ ನೀತಿಗಳ ನಡುವಿನ ಸಂಬಧಗಳನ್ನು ಹಾಗು ಈ ನೀತಿಗಳ ಹಿಂದಿರುವ ರಾಜಕೀಯವನ್ನು ಬಯಲುಗೊಳಿಸಿ ಜನತೆಗೆ ಮನದಟ್ಟು ಮಾಡಬೇಕು. ಈ ನೀತಿಗಳನ್ನು ಬದಲಿಸುವ ಹೋರಾಟಗಳನ್ನು ತೀವ್ರಗೊಳಿಸಬೇಕು' ಎಂಬ ನಮ್ಮ ಘೋಷಣೆಯನ್ನು ನಮ್ಮ ಸದಸ್ಯರಿಗೆ ಹಾಗು ಬೇರುಮಟ್ಟದಲ್ಲಿನ ಕಾರ್ಮಿಕರಿಗೆ ಅರ್ಥಮಾಡಿಸುವುದರಲ್ಲಿ ಹಾಗು ಅವರ ಪ್ರಜ್ಞೆಯ ಭಾಗವನ್ನಾಗಿಸುವಲ್ಲಿ ನಾವು ಸಮರ್ಪಕ ಕೆಲಸ ಮಾಡಲು ಸಾಧ್ಯವಾಗಿಲ್ಲ."ಬಿಜೆಪಿ ಪಕ್ಷವು ತನ್ನ ಸ್ವಂತ ಬಲದಿಂದ ಅಧಿಕಾರಕ್ಕೆ ಬಂದಿರುವ ಹಾಗು ಆರ್‌ಎಸ್‌ಎಸ್ ಪ್ರಭಾವ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಬಲಪಂಥದ ಈ ತಿರುವನ್ನು ರಾಜಕೀಯ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಸೈದ್ಧಾಂತಿಕ ತಳಹದಿಗಳಲ್ಲಿ ಎದುರಿಸುವುದು ಮುಂದಿನ ದಿನಗಳಲ್ಲಿ ಮತ್ತಷ್ಟು ಸವಾಲಿನ ಕೆಲಸವಾಗಿರುತ್ತದೆ. ಈ ಸಂದರ್ಭದಲ್ಲಿ ನಿಸ್ಸಂಶಯವಾಗಿ ನಾವು ಬೆಸೆಯಲು ಪ್ರಯತ್ನಿಸುತ್ತಿರುವ ಕಾರ್ಮಿಕ ವರ್ಗದ ಐಕ್ಯತೆಯ ಮೇಲಿನ ದಾಳಿಗಳು ಹೆಚ್ಚಾಗುತ್ತಿವೆ. ಕಾರ್ಮಿಕ ವರ್ಗದ ಐಕ್ಯತೆಯನ್ನು ರಕ್ಷಿಸುವುದು, ಮತ್ತಷ್ಟು ದೃಢಗೊಳಿಸುವುದೊಂದಿಗೆ, ಕೆಲಸದ ಹಾಗು ವಾಸಸ್ಥಳಗಳಲ್ಲಿ ಈ ಐಕ್ಯತೆಯನ್ನು ಬಲಿಷ್ಟಗೊಳಿಸುವುದು ನಮ್ಮ ಆದ್ಯತೆಯ, ತುರ್ತಾದ ಗುರಿಯಾಗಬೇಕು."

ಸದಸ್ಯತ್ವ ಸಂಯೋಜನೆ:

ವರ್ಷ	2015	2016	2017	2018
ಸದಸ್ಯತ್ವ	2,52,062	2,29,286	2,29,378	2,30,181
ಮಹಿಳಾ ಸದಸ್ಯತ್ವ	1,48,779	1,33,280	1,19,713	1,14,699

ಮೀನಾಕ್ಷೀ ಸುಂದರಂ
ರಾಜ್ಯ ಪ್ರಧಾನ ಕಾರ್ಯದರ್ಶಿ

ವಿಭಾಗವಾರು ಸಿಐಟಿಯುಗೆ ಸೇರ್ಪಡೆಯಾಗಿರುವ ಸಂಘಟನೆಗಳಲ್ಲಿನ ಸದಸ್ಯತ್ವ:

ವಿಭಾಗ	2015	2016	2017	2018
ಸಂಘಟಿತ ವಲಯದ ಕಾರ್ಮಿಕರು	26,365	27,067	27,296	28,458
ಯೋಜನಾ ಕಾರ್ಮಿಕರು	80,675	77,075	80,050	78,513
ಅಸಂಘಟಿತ ಕಾರ್ಮಿಕರು	1,45,022	1,25,194	1,20,028	1,22,475

ಸಿಐಟಿಯುವಿನ ಪ್ರಭಾವಕ್ಕೆ ಅನುಗುಣವಾಗಿ ಸದಸ್ಯತ್ವ ಇಲ್ಲ ಎಂಬುದನ್ನು ಈ ಅಂಕಿ_ಅಂಶಗಳ ಮುಖೇನ ಗುರುತಿಸಬಹುದು. ಈ ಮೂರು ವರ್ಷಗಳ ಅವಧಿಯಲ್ಲಿ ನಡೆದ ಹೋರಾಟಗಳು ಅದರಲ್ಲಿ ಭಾಗವಹಿಸಿದ ಜನರನ್ನು ಸಿಐಟಿಯು ಸದಸ್ಯರನ್ನಾಗಿ ಮಾಡಲು ಸಾಧ್ಯವಾಗಿಲ್ಲ. ಸಂಘಟಿತ ವಲಯದಲ್ಲಿ ನಮ್ಮಿಂದ ಹೊರಹೋದ ಸದಸ್ಯತ್ವ ಈ ಅವಧಿಯಲ್ಲಿ ಗಣನೀಯವಾಗಿದೆ. ಕಾರ್ಖಾನೆಗಳಲ್ಲಿ ಕಡಿಮೆಯಾಗುತ್ತಿರುವ ಖಾಯಂ ನೌಕರರ ಸಂಖ್ಯೆ, ಕೆಲವು ಕಾರ್ಖಾನೆಗಳ ಮುಚ್ಚುವಿಕೆ, ಕೆಲವು ಸಂಘಟನೆಗಳು ವಿವಿಧ ಕಾರಣಗಳಿಗಾಗಿ ನಮ್ಮ ಸಂಘಟನೆಯಿಂದ ಹೊರ ಹೋಗಿರುವ ಕಾರಣಕ್ಕೆ ಸದಸ್ಯತ್ವ ಕಡಿಮೆಯಾಗಿದೆ. ಆದೇ ಸಂದರ್ಭದಲ್ಲಿ ಹಲವು ಕಾರ್ಖಾನೆಗಳಲ್ಲಿ ಹೊಸ ಸಂಪರ್ಕವನ್ನು ಮಾಡಲು ಸಾಧ್ಯವಾಗಿದೆ. ಸಂಘಟಿತ ವಲಯದಲ್ಲಿನ ಘನಕೈಗಾರಿಕೆಗಳಲ್ಲಿ ನಮ್ಮ ಚಟುವಟಿಕೆಗಳನ್ನು ಮತ್ತಷ್ಟು ಉತ್ತಮಪಡಿಸುವ ಅಗತ್ಯವಿದೆ. ಸಾರ್ವಜನಿಕ ಉದ್ದಿಮೆಗಳಲ್ಲಿ ಬಿಇಎಲ್ ಖಾಯಂ ನೌಕರರ ಸಂಘಟನೆ ಮಾತ್ರವೇ ನಮಗೆ ಸೇರ್ಪಡೆಯಾಗಿರುವ ಸಂಘಟನೆಯಾಗಿದೆ. ಬಿಇಎಂಎಲ್, ವಿಐಎಸ್‌ಎಲ್, ಬಿಇಎಲ್ ಮುಂತಾದ ಕಡೆಗಳಲ್ಲಿ ಗುತ್ತಿಗೆ ಕಾರ್ಮಿಕರ ಸಂಘಟನೆಗಳು ನಮ್ಮ ಜತೆ ಸೇರ್ಪಡೆಯಾಗಿದೆ. ಸಾರ್ವಜನಿಕ ವಲಯದಲ್ಲಿನ ಕಾರ್ಮಿಕರ ನಡುವೆ ನಮ್ಮ ಸಂಘಟನಾ ಪ್ರಭಾವವಿದ್ದರು ಸದಸ್ಯತ್ವ ಹೆಚ್ಚಿಸಲು ಸಾಧ್ಯವಾಗುತ್ತಿಲ್ಲ.

ಸಂಘಟಿತ ವಲಯದಲ್ಲಿನ ಕೆಲವು ಘನಕೈಗಾರಿಕೆಗಳಲ್ಲಿ ಸಿಐಟಿಯು ನಾಯಕರ ಮಾರ್ಗದರ್ಶನದಲ್ಲಿ ನಡೆಯುವ ಕಾರ್ಮಿಕ ಸಂಘಟನೆಗಳಿವೆ. ಈ ಸಂಘಟನೆಗಳು ಸ್ವತಂತ್ರ ಸಂಘಟನೆಗಳಾಗಿ ಇರುತ್ತವೆ. ಒಂದು ಕಾರ್ಖಾನೆ ಒಂದು ಸಂಘಟನೆ ಎಂಬ ಆಧಾರದಲ್ಲಿ ಸಿಐಟಿಯುವಿನ ಒಲವಿಲ್ಲದೆ ಕಾರ್ಮಿಕರು ಈ ಸಂಘಟನೆಯ ಸದಸ್ಯರಾಗಿರುತ್ತಾರೆ. ಆದ್ದರಿಂದ ಸಿಐಟಿಯುವಿಗೆ ಅಥವಾ ಇನ್ನಾವುದೆ ಕೇಂದ್ರ ಕಾರ್ಮಿಕ ಸಂಘಟನೆಗಳಿಗೆ ಇಂತಹ ಸಂಘಟನೆಗಳು ಸೇರ್ಪಡೆಯಾಗದೆ ಸ್ವತಂತ್ರ ಸಂಘಟನೆಗಳಾಗಿರುತ್ತವೆ. ಇಂತಹ ಸಂಘಟನೆಗಳಲ್ಲಿನ ಸಿಐಟಿಯು ಕಾರ್ಯಕರ್ತರನ್ನು ನಮ್ಮ ಸಂಘಟನಾ ಕೆಲಸಗಳಲ್ಲಿ ತೊಡಗಿಸುವ ಕುರಿತು ನಿರ್ಧಿಷ್ಟ ಸಂಘಟನಾ ತೀರ್ಮಾನಗಳನ್ನು ಕೈಗೊಳ್ಳಬೇಕು. ಐದುಲಕ್ಷಗಳ ಸದಸ್ಯತ್ವ ತಲುಪುವ ನಮ್ಮ ಗುರಿಯನ್ನು ಸಾಧಿಸಲು ಅಗತ್ಯ ಸಂಘಟನಾ ಸಿದ್ಧತೆಗಳನ್ನು ರಾಜ್ಯ ಹಾಗು ಜಿಲ್ಲಾ ಮಟ್ಟಗಳಲ್ಲಿ ಈ ಅವಧಿಯಲ್ಲಿ ಮಾಡಲಾಗಿಲ್ಲ.

ರಾಜ್ಯದ 30 ಜಿಲ್ಲೆಗಳಲ್ಲಿಯು ನಮಗೆ ಸದಸ್ಯತ್ವ ಹಾಗು ಚಟುವಟಿಕೆಗಳು ಇದ್ದರೂ ಆ ಸಂಪರ್ಕಗಳನ್ನು ಸಿಐಟಿಯು ಸಂಘಟನಾ ನಿಯಮಗಳ ಆಧಾರದಲ್ಲಿ ಚಳುವಳಿಯಾಗಿಕ್ರೂಢೀಕರಿಸುವ ಹಾಗು ವಿಸ್ತರಿಸುವ ಪ್ರಯತ್ನಗಳನ್ನು ಮುಂದಿನ ದಿನಗಳಲ್ಲಿ ಯೋಜನಾ ಬದ್ದವಾಗಿ ಮಾಡಬೇಕು.

4. ನಮ್ಮ ಸದಸ್ಯತ್ವದ ಸಂಯೋಜನೆ:

2018ರ ನಮ್ಮ ಒಟ್ಟು ಸದಸ್ಯತ್ವದಲ್ಲಿ ಅಸಂಘಟಿತ ವಲಯದ ಕಾರ್ಮಿಕರ ಸಂಖ್ಯೆ 88% ಹಾಗು ಸಂಘಟಿತ ವಲಯದ ಸದಸ್ಯರ ಸಂಖ್ಯೆ 12% ರಷ್ಟಿದೆ. ಇದು ಅಸಂಘಟಿತ ವಲಯದ ಕಾರ್ಮಿಕರ ನಡುವೆ ನಮ್ಮ ಕೆಲಸದ ಪ್ರತಿಫಲವಾಗಿದೆ. ರಾಜ್ಯದಲ್ಲಿನ ಅಸಂಘಟಿತ ವಲಯದಲ್ಲಿನ ಒಟ್ಟು ಕಾರ್ಮಿಕರ ಸಂಖ್ಯೆಗೆ ಹೋಲಿಸಿದರೆ ನಮ್ಮ ಸದಸ್ಯತ್ವದ ಪ್ರಮಾಣ ಅತಿಕಡಿಮೆ. ನಾವು ಯೋಜನಾ ಬದ್ಧವಾಗಿ ಈ ಕಾರ್ಮಿಕರ ನಡುವೆ ಸದಸ್ಯತ್ವವನ್ನು ಹೆಚ್ಚಿಸಲು ಪ್ರಯತ್ನ ಮಾಡುವ ಅಗತ್ಯವಿದೆ. ಈ ಬಗ್ಗೆ ಅಖಿಲ ಭಾರತ ಕೇಂದ್ರ ಹಾಗು ರಾಜ್ಯ ಸಮಿತಿ ನೀಡಿದ ಮಾರ್ಗದರ್ಶನಗಳನ್ನು ಸಮರ್ಪಕವಾಗಿ ಜಾರಿಮಾಡಲು ಸಾಧ್ಯವಾಗಿಲ್ಲ.

ಸರ್ಕಾರದ ಯೋಜನೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ನಡುವೆ ನಾವು ಮಾಡಿದ ಕೆಲವು ಯಶಸ್ವಿ ಪ್ರಯತ್ನಗಳನ್ನು ಖಾಸಗಿರಂಗದಲ್ಲಿನ ಅಸಂಘಟಿತ ಕಾರ್ಮಿಕರ ನಡುವೆ ಮಾಡಲು ಸಾಧ್ಯವಾಗಿಲ್ಲ. ನಮ್ಮ ಸಂಘಟನಾ ಕೌಶಲ್ಯದ ಕೊರತೆ ಹಾಗೂ ಅತ್ಮವಿಶ್ವಾಸದ ಕೊರತೆಯಿಂದ ಆಗುತ್ತಿರುವ ಸ್ಥಗಿತತೆ ಇದು. ವಿಭಿನ್ನವಾದ ಪ್ರಯೋಗಗಳನ್ನು ಮಾಡಲು ನಮಗೆ ಸಾಧ್ಯವಾಗುತ್ತಿಲ್ಲ. ಈ ವಿಭಾಗದಲ್ಲಿ ಅಲ್ಲಲ್ಲಿ ನಾವು ಮಾಡಿದ ಪ್ರಯತ್ನಗಳಲ್ಲಿ ದೊರಕಿದ ಅನುಭವಗಳನ್ನು ವಿಮರ್ಶೆ ಮಾಡಿಕೊಂಡು ಮುನ್ನಡೆಯುವ ಅಗತ್ಯವಿದೆ.

ಸಂಘಟಿತ ವಲಯದ ಕಾರ್ಮಿಕರನ್ನು ಸಿಐಟಿಯು ಅಡಿಯಲ್ಲಿ ಸಂಘಟಿತರನ್ನಾಗಿ ಮಾಡುವುದು ಅತ್ಯಂತ ಪ್ರಮುಖ ಹಾಗು ಆಧ್ಯತೆಯ ಕೆಲಸವಾಗಬೇಕು. ಬಂಡವಾಳಶಾಹಿ ಉತ್ಪಾದನಾ ವಿಧಾನದಲ್ಲಿ ನಿರ್ಣಾಯಕವಾದ ಮತ್ತು ಕಾರ್ಯತಂತ್ರದ ಪ್ರಧಾನ ಪಾತ್ರವನ್ನು ವಹಿಸುವುದು 'ಸಂಘಟಿತ ಉತ್ಪಾದನಾ ವಲಯ' ಎಂಬುದನ್ನು ನಾವು ಮರೆಯಬಾರದು. ಇಲ್ಲಿ ಕೆಲಸ ಮಾಡುವ ಆಧುನಿಕ ವಿಭಾಗವಾಗಿರುವ ಕಾರ್ಮಿಕವರ್ಗವನ್ನು ಸಂಘಟನೆ ಮಾಡದೆ ಪ್ರಭಾವಬೀರುವ ಚಳುವಳಿಗಳನ್ನು ಸಂಘಟಿಸುವುದು ಸಾಧ್ಯವಿಲ್ಲ.

ಹಲವು ಸಂದರ್ಭಗಳಲ್ಲಿ ನಾವು ನಡೆಸುವ ಸಾಮೂಹಿಕ ಪ್ರದರ್ಶನಗಳಲ್ಲಿ ಭಾಗವಹಿಸುವ ಕಾರ್ಮಿಕರ ಸಂಖ್ಯೆಯ ಆಧಾರದಲ್ಲಿ ಸಂಘಟಿತ ಹಾಗು ಅಸಂಘಟಿತ ವಲಯದ ಕಾರ್ಮಿಕರನ್ನು ಒಂದಕ್ಕೊಂದು ವಿರುದ್ಧ ಭಾವನೆಯಲ್ಲಿ ಸಮೀಕರಿಸುವ ಚಿಂತನಾ ವಿಧಾನವು ಅಲ್ಲಲ್ಲಿ ಕಂಡುಬರುತ್ತಲಿದೆ. ಅತಿಹೆಚ್ಚು ವೇತನ ಪಡೆಯುವ ಕಾರ್ಮಿಕರಲ್ಲಿ ಬೆಳೆದು ಬರುತ್ತಿರುವ ಪ್ರತ್ಯೇಕತೆ ಹಾಗು ಪರಕೀಯ ಮನೋಭಾವಗಳನ್ನು ಸರಿಯಾದ ರೀತಿಯಲ್ಲಿ ಅರ್ಥಮಾಡಿಕೊಂಡು ಈ ವಿಭಾಗದ ಕಾರ್ಮಿಕರನ್ನು ನಮ್ಮ ಸಂಘಟನೆಯಲ್ಲಿ ಸಕ್ರಿಯರನ್ನಾಗಿ ಮಾಡಲು ಪ್ರಯತ್ನಿಸಬೇಕು. ಸಂಘಟಿತ ವಲಯದ ಕಾರ್ಮಿಕರ ಮೇಲೆ ಪ್ರಭಾವಬೀರಲು ಅಗತ್ಯವಾದ ಸಂಘಟನಾ ಕುಶಲತೆಯ ಹಾಗು ದೃಷ್ಟಿಕೋನದ ಕೊರತೆಯು ನಮ್ಮ ಹಲವು ಜಿಲ್ಲಾ ಸಮಿತಿಗಳಲ್ಲಿದೆ. ಯುವ, ವಿದ್ಯಾವಂತ ಹಾಗು ಕುಶಲಕಾರ್ಮಿಕರಿಂದ ಕಾರ್ಯಕರ್ತರನ್ನು ಗುರುತಿಸಿ ಬೆಳಸಬೇಕಾದ ತುರ್ತು ಅಗತ್ಯವಿದೆ. ಇಂತಹ ಪ್ರಯತ್ನಗಳ ಮೂಲಕ ಮಾತ್ರವೇ ಸಾರ್ವಜನಿಕ ಮತ್ತು ಖಾಸಗಿ ಘನಕೈಗಾರಿಕೆಗಳಲ್ಲಿ ನಾವು ಎದುರಿಸುತ್ತಿರುವ ಸ್ಥಗಿತತೆ ಹಾಗು ಹಿನ್ನಡೆಯನ್ನು ಸರಿಪಡಿಸಲು ಸಾಧ್ಯವಾಗುತ್ತದೆ.

ಇತ್ತೀಚಿನ ದಿನಗಳಲ್ಲಿ ಸಂಘಟಿತ ವಲಯದಲ್ಲಿ ಕೆಲಸ ಮಾಡುವ ಗುತ್ತಿಗೆ ಹಾಗು ಹೊರಗುತ್ತಿಗೆ ಕಾರ್ಮಿಕರು ನಮ್ಮ ಸಂಘಟನೆಯಲ್ಲಿ ಸೇರುತ್ತಿದ್ದಾರೆ. ಖಾಯಂ ನೌಕರರು ನಮ್ಮ ಸಂಘಟನೆಯ ಭಾಗವಾಗಿರುವ ಕಾರ್ಖಾನೆಗಳಲ್ಲಿ ಗುತ್ತಿಗೆ ಕಾರ್ಮಿಕರನ್ನು ಮಾಡುವುದರಲ್ಲಿ ಹಿಂಜರಿಕೆ ಇದೆ. ಒಂದೇ ಕಾರ್ಖಾನೆಯಲ್ಲಿ ಕೆಲಸ ಮಾಡುವ ಖಾಯಂ ಹಾಗು ಗುತ್ತಿಗೆ ಕಾರ್ಮಿಕರ ನಡುವೆ ಸಮನ್ವಯತೆ ತರಲು ವಿಶೇಷ ಪ್ರಯತ್ನಗಳನ್ನು ಮಾಡುವ ಅಗತ್ಯವಿದೆ.

5. ಪ್ರಜಾಸತ್ತಾತ್ಮಕ ಕಾರ್ಯನಿರ್ವಹಣೆ:

ಪ್ರಜಾಸತ್ತಾತ್ಮಕ ಕಾರ್ಯಶೀಲತೆಯ ಕುರಿತು ಕೋಝಿಕೋಡು ಜನರಲ್ ಕೌನ್ಸಿಲ್ ಸಭೆ ಅಂಗೀಕರಿಸಿದ ಸಂಘಟನಾ ದಸ್ತಾವೇಜಿನ ಮಾರ್ಗದರ್ಶನವನ್ನು ಪಾಲಿಸುವುದು ಅಗತ್ಯವಿದೆ.

"ಸಂಘಟನೆಯಸದಸ್ಯರನ್ನು ಕ್ರಿಯಾಶೀಲಗೊಳಿಸಲು, ನಮ್ಮ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಲು, ವರ್ಗ ಐಕ್ಯತೆ ಹಾಗು ಅದರ ಮೂಲಕ ಸದಸ್ಯರ ಪ್ರಜ್ಞಾ ಮಟ್ಟವನ್ನು ಎತ್ತರಿಸಲು, ತಮ್ಮ ವರ್ಗ ಮಿತ್ರ ಮತ್ತು ಶತೃಗಳನ್ನು ಗುರುತಿಸುವ ಸಾಮರ್ಥ್ಯವನ್ನು ಹೆಚ್ಚು ಮಾಡಲು

ಪುಟ 10 ಕ್ಕೆ

ಸೈದ್ಧಾಂತಿಕ ಕ್ರಾಂತಿಕಾರಿ ಸಂಘಟನೆಯಿಂದ ಮಾತ್ರವೇ ....

ಪುಟ 9 ರಿಂದ

ನಮ್ಮ ಸಂಘಟನೆಗಳು ಪ್ರಜಾಸತ್ತಾತ್ಮಕವಾಗಿ ಕೆಲಸಮಾಡುವುದು ಅತ್ಯಗತ್ಯ. ದುಡಿಯುವ ವರ್ಗದ ಮೇಲಿನ ಶೋಷಣೆಯನ್ನು ನಿರ್ಮೂಲ ಮಾಡಲು ಹಾಗು ಶೋಷಣಾ ಮುಕ್ತ ಸಮಾಜ ಒಂದನ್ನು ನಿರ್ಮಿಸುವ ದುಡಿಯುವ ವರ್ಗದ ಕರ್ತವ್ಯವನ್ನು ನಿರ್ವಹಿಸಲು ಕೇವಲ ಈ ಪ್ರಕ್ರಿಯೆಯಿಂದ ಮಾತ್ರವೇ ಸಾಧ್ಯ"ಎಂದು ನಮ್ಮ ಸಂಘಟನಾ ದಸ್ತಾವೇಜು ಗುರುತಿಸಿದೆ.

ಸಿಐಟಿಯುವಿನ ಸಂವಿಧಾನವು ಎಲ್ಲಾ ಹಂತಗಳಲ್ಲಿಯು ಪ್ರಜಾಸತ್ತಾತ್ಮಕವಾಗಿ ಕೆಲಸ ಮಾಡುವುದಕ್ಕೆ ಒತ್ತು ನೀಡಿದೆ. ಭುವನೇಶ್ವರ ದಸ್ತಾವೇಜಿನಲ್ಲಿ ಅದನ್ನು ಪುನರುಚ್ಚರಿಸಿದ್ದು ಮಾತ್ರವಲ್ಲದೆ ವಿವರವಾಗಿ ಕೇಳಲಾಗಿದೆ. ನಮ್ಮ ಸಂಘಟನೆಯ ಎಲ್ಲಾ ಹಂತಗಳಲ್ಲಿ ಪ್ರಜಾಸತ್ತಾತ್ಮಕ ಕಾರ್ಯನಿರ್ವಹಣೆಯ ತಿಳುವಳಿಕೆ ಮತ್ತು ಜಾರಿಯ ಕುರಿತು ನಿಜವಾದ ಗಂಭೀರತೆಯನ್ನು ಅಳವಡಿಸಿಕೊಳ್ಳಬೇಕಾಗಿದೆ. ವಿವಿಧ ಹಂತಗಳಲ್ಲಿ ಬೆಳವಣಿಗೆ ಕಾಣುತ್ತಿದ್ದರೂ, ಅದು ಸಾಂಪ್ರದಾಯಕದಂತಿದೆ ಮತ್ತು ಯಾಂತ್ರಿಕವಾಗಿದೆ. ಸಿಐಟಿಯುವಿನ ಹಾಗು ಕೆಲವು ಸಂಘಟನೆಗಳ ರಾಜ್ಯ ಮಟ್ಟದಲ್ಲಿನ ಸಭೆಗಳು ನಡೆಯುವುದರಲ್ಲಿ ಒಂದಷ್ಟು ನಿರಂತರತೆ ಇದೆಯಾದರು, ಜಿಲ್ಲಾ ಮಟ್ಟಗಳಲ್ಲಿ, ಕೆಳಹಂತದ ಸ್ಥಳೀಯ ಮಟ್ಟದ ಸಂಘಟನೆಗಳ ಮಟ್ಟದಲ್ಲಿ ದೌರ್ಬಲ್ಯ ಮುಂದುವರಿದಿದೆ.

ಪ್ರಜಾಸತ್ತಾತ್ಮಕ ಕಾರ್ಯ ನಿರ್ವಹಣೆಯೆಂದರೆ ಕೇವಲ ಸಮ್ಮೇಳನಗಳು ಹಾಗು ಸಭೆಗಳನ್ನು ನಡೆಸುವುದು ಮಾತ್ರವಲ್ಲ. ವಿವಿಧ ಪ್ರಶ್ನೆಗಳ ಬಗ್ಗೆ ಸಿಐಟಿಯುವಿನ ಧೋರಣೆ, ಸಮ್ಮೇಳನಗಳು ಹಾಗು ಸಭೆಗಳಲ್ಲಿ ಕೈಗೊಂಡ ತೀರ್ಮಾನಗಳನ್ನು ಸಿಐಟಿಯುವಿನ ಎಲ್ಲಾ ಸದಸ್ಯರಿಗೂ ವಿವರಿಸುವುದನ್ನು ಸಾಧ್ಯ ಮಾಡುವುದು. ಸಿಐಟಿಯು ಧೋರಣೆಗಳನ್ನು ಸದಸ್ಯರು ಅರ್ಥಮಾಡಿಕೊಳ್ಳಬೇಕು ಹಾಗು ಅವುಗಳ ಜಾರಿಯಲ್ಲಿ ಸಕ್ರಿಯವಾಗಿ ತೊಡಗಬೇಕು.

ಕಾರ್ಮಿಕ ಸಂಘಟನೆಗಳ ಪ್ರಜಾಪ್ರಭುತ್ವವು, ಸಂಘಗಳ ದೈನಂದಿನ ಚಟುವಟಿಕೆಗಳಲ್ಲಿ ಅಂದರೆ ತೀರ್ಮಾನ ಕೈಗೊಳ್ಳುವುದರಲ್ಲಿ ಹಾಗು ಅವುಗಳನ್ನು ಜಾರಿ ಮಾಡುವುದರಲ್ಲಿ ಕಾರ್ಯಕರ್ತರ ಸಕ್ರಿಯ ತೊಡಗಿಸುವಿಕೆಯೊಂದಿಗೆ ಸಂಬಂಧ ಹೊಂದಿದೆ.

6. ಸಂಘಟಿತ ವಲಯದಲ್ಲಿ ನಮ್ಮ ಕೆಲಸ:

ಸಾರ್ವಜನಿಕ ಘನಕೈಗಾರಿಕೆಗಳಲ್ಲಿ ಬಿಇಎಲ್ ಕಾರ್ಖಾನೆಯಲ್ಲಿ ಮಾತ್ರ ಸಿಐಟಿಯುವಿಗೆ ಸೇರ್ಪಡೆಯಾಗಿರುವ ಕಾರ್ಮಿಕ ಸಂಘಟನೆ ಇದೆ. ಈ ಸಂಪರ್ಕವನ್ನು ಬಳಸಿಕೊಂಡು ಕೇಂದ್ರ ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕ ಸಂಘಟನೆಗಳ ನಡುವೆ ಸಮನ್ವಯತೆ ಸಾಧಿಸಲು ಪ್ರಯತ್ನ ಮಾಡಲಾಗುತ್ತಿದೆ. ಬಿಇಎಂಎಲ್ ಕಾರ್ಖಾನೆಯ ಕೆಜಿಎಫ್ ಘಟಕದಲ್ಲಿ ನಮ್ಮ ಬೆಂಬಲಿಗ ಕಾರ್ಯಕರ್ತರ ಗುಂಪು ಸಕ್ರಿಯವಾಗಿದೆ. ಉಳಿದ ಸಾರ್ವಜನಿಕ ಉದ್ದಿಮೆಗಳಲ್ಲಿ ಜೆಎಫ್ ವೇದಿಕೆಯ ಮೂಲಕ ಸಂಪರ್ಕವಿಟ್ಟುಕೊಂಡು ಕೆಲಸ ಮಾಡುತ್ತಿದ್ದೇವೆ. ಕಳೆದ ಅವಧಿಯಲ್ಲಿ ಬಿಇಎಂಎಲ್ ಖಾಸಗೀಕರಣದ ವಿರುದ್ಧ 2018ರ ಜನವರಿಯಲ್ಲಿ ನಡೆಸಿದ ಹೋರಾಟ ಹಾಗು ನಿರಂತರ ಪ್ರತಿಭಟನೆಗಳು ಸಿಐಟಿಯುವಿನ ಪ್ರಭಾವವನ್ನು ವಿಸ್ತರಿಸಲು ಅನುಕೂಲವಾದವು. ಐದು ವರ್ಷಗಳ ಕಾಲಾವಧಿಯ ಒಪ್ಪಂದಕ್ಕೆ ಮಾತ್ರ ಒಪ್ಪಬೇಕು ಎಂಬ ನಮ್ಮ ಪ್ರಚಾರ ಕಾರ್ಮಿಕರಿಂದ ಮಾನ್ಯತೆ ಪಡೆಯದೆ ಇದ್ದರು, ವೇತನ ಹೆಚ್ಚಳದ ಮಾತುಕತೆಯಲ್ಲಿ ನಮ್ಮ ಪಾತ್ರದ ಬಗ್ಗೆ ವ್ಯಾಪಕವಾಗಿ ಶ್ಲಾಘನೆ ವ್ಯಕ್ತವಾಗಿದೆ. ಸಾರ್ವಜನಿಕ ಉದ್ದಿಮೆಗಳಲ್ಲಿನ ಸಿಐಟಿಯು ಸಂಗಾತಿಗಳ ನಡುವೆ ಸಮನ್ವಯತೆಯನ್ನು ಮಾಡಲೆಂದೆ ರಚಿಸಲಾದ 'ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕ ಸಂಘಟನೆಗಳ ಸಮನ್ವಯ ಸಮಿತಿ' ಕೇವಲ ಎರಡು ಬಾರಿ ಮಾತ್ರ ಸಭೆ ಸೇರಲು ಸಾಧ್ಯವಾಯಿತು. ಈ ರಂಗದ ಕುರಿತು ಮುಂದಿನ ದಿನಗಳಲ್ಲಿ ವಿಶೇಷ ಗಮನಹರಿಸುವ ಅಗತ್ಯವಿದೆ.

ಖಾಸಗಿ ರಂಗದ ಘನ ಕೈಗಾರಿಕೆಗಳಲ್ಲಿ ಸಿಐಟಿಯುವಿನ ಬಗ್ಗೆ ಅಭಿಮಾನ ಇರುವ ಹಲವು ಕಾರ್ಮಿಕರಿದ್ದರು ಅವರನ್ನು ಸಂಘಟನಾತ್ಮಕವಾಗಿ ಸಕ್ರಿಯಗೊಳಿಸಲು ಸಾಧ್ಯವಾಗುತ್ತಿಲ್ಲ. ಕಾರ್ಮಿಕ ಸಂಘಟನೆಯ ನಾಯಕತ್ವಕ್ಕೆ ಆಯ್ಕೆಯಾಗಲು ಕಾರ್ಮಿಕರ ನಡುವೆ ನಡೆಯುವ ಪೈಪೋಟಿ, ಮುಖಂಡರ ವರ್ತನೆಗಳನ್ನು ಸಿಐಟಿಯು ನಾಯಕರ ನಡುವಿನ ಪೈಪೋಟಿಯಾಗಿ ಬಿಂಬಿಸಲಾಗುತ್ತಿದೆ. ಘನ ಕೈಗಾರಿಕೆಗಳಲ್ಲಿ ಸಿಐಟಿಯು ಬೆಂಬಲಿಗರು ಎಂದು ಹೇಳಿಕೊಳ್ಳುವ ಕಾರ್ಮಿಕರಲ್ಲಿ ಬಹು ಸಂಖ್ಯೆಯ ಕಾರ್ಮಿಕರು ಬಲಪಂಥೀಯ ರಾಜಕೀಯ ಪ್ರಭಾವಕ್ಕೆ ಒಳಗಾಗಿರುವ ಸನ್ನಿವೇಶವನ್ನು ಸಹ ನಾವು ಎದುರಿಸುತ್ತಿದ್ದೇವೆ. ಅವರಿಗೆ ರಾಜಕೀಯ ಸೈದ್ಧಾಂತಿಕ ತಿಳುವಳಿಕೆ ನೀಡಲು ಮಾಡಿದ ಸಂಘಟನಾ ಪ್ರಯತ್ನಗಳು ಫಲಕಾರಿಯಾಗುತ್ತಿಲ್ಲ. ಬಹುರಾಷ್ಟ್ರೀಯ ಹಾಗು ರಾಷ್ಟ್ರೀಯ ಕಾರ್ಪೋರೇಟ್ ಬಂಡವಾಳಗಾರರು ತಮ್ಮ ಕಾರ್ಮಿಕರನ್ನು ಸಕ್ರಿಯ ಸಂಘಟಿತ ಚಳುವಳಿಯಿಂದ ದೂರ ಉಳಿಸಿಕೊಳ್ಳುವುದರಲ್ಲಿ ಯಶಸ್ವಿಯಾಗಿದ್ದಾರೆ ಎಂದು ಹೇಳಬಹುದು. ಈ ಕಾರ್ಮಿಕರ ನಡುವೆ ನಮ್ಮ ಪ್ರಚಾರ ಪ್ರಕ್ರಿಯೆಗಳನ್ನು ಕೊಂಡೊಯ್ಯುವ ಹಾಗು ಅವರನ್ನು ಸಾಮಾನ್ಯ ಕಾರ್ಮಿಕ ಚಳುವಳಿಯ ಭಾಗವನ್ನಾಗಿ ಮಾಡುವ ಪ್ರಯತ್ನಗಳನ್ನು ನಾವು ನಿರಂತರವಾಗಿ ಮಾಡಬೇಕಿದೆ. ಮುಂದಿನ ದಿನಗಳಲ್ಲಿ ಜಿಲ್ಲಾ ಮಟ್ಟದಲ್ಲಿ ಘನ ಕೈಗಾರಿಕೆಗಳಲ್ಲಿನ ಕಾರ್ಮಿಕರ ಸಮನ್ವಯ ಸಮಿತಿಗಳನ್ನು ರಚಿಸಿ ಸಕ್ರಿಯಗೊಳಿಸ ಬೇಕು.

7. ಅಸಂಘಟಿತ ಕಾರ್ಮಿಕರ ನಡುವೆ ನಮ್ಮ ಕೆಲಸ:

ಸಿಐಟಿಯುವಿನ ಸಾಮೂಹಿಕ ಹೋರಾಟದ ಕರೆಗಳ ಯಶಸ್ಸು ಅಸಂಘಟಿತ ಕಾರ್ಮಿಕರ ಭಾಗವಹಿಸುವಿಕೆಯನ್ನು ಅವಲಂಬಿಸಿದೆ. ಯಾವುದೆ ಸಂಘಟನೆಗೆ ಸೇರದೆ ಇದ್ದರು ಕಾರ್ಮಿಕರ ಚಳುವಳಿಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸುತ್ತಿರುವ ಅಸಂಘಟಿತ ಕಾರ್ಮಿಕರನ್ನು ನಮ್ಮ ಸದಸ್ಯರುಗಳನ್ನಾಗಿ ಮಾಡಿಕೊಳ್ಳಲು ನಾವು ಯೋಜನಾ ಬದ್ಧವಾಗಿ ಕೆಲಸ ಮಾಡುತ್ತಿಲ್ಲ.

ಕೇಂದ್ರ ಸರ್ಕಾರದ ಯೋಜನಾ ಕಾರ್ಮಿಕರನ್ನು ಹೊರತು ಪಡಿಸಿದರೆ ಬೀಡಿ, ಕಟ್ಟಡ, ಹಮಾಲಿ, ಆಟೋರಿಕ್ಷಾ ಚಾಲಕರು, ವಿದ್ಯುತ್ ಗುತ್ತಿಗೆ ಕಾರ್ಮಿಕರು, ಬಿಎಸ್‌ಎನ್‌ಎಲ್ ಗುತ್ತಿಗೆ ಕಾರ್ಮಿಕರು, ಗ್ರಾಮ ಪಂಚಾಯಿತಿ, ಮುನಿಸಿಪಲ್ ಮುಂತಾದ ವಿಭಾಗಗಳ ಕಾರ್ಮಿಕರ ನಡುವೆ ನಮ್ಮ ಚಳುವಳಿ ಇದೆ. ರಾಜ್ಯ ಮಟ್ಟದಲ್ಲಿ ನಡೆಸಿದ ಪ್ರಯತ್ನಗಳು ಈ ಚಳುವಳಿಗಳನ್ನು ಕ್ರೋಢೀಕರಿಸುವಲ್ಲಿಸಹಾಯಕವಾಗಿದೆ. ಜಿಲ್ಲಾ ಮಟ್ಟದಲ್ಲಿ ಆಯಾ ಜಿಲ್ಲೆಗಳ ಪರಿಸ್ಥಿತಿಗೆ ಅನುಗುಣವಾಗಿ ಕೆಲವು ಅಸಂಘಟಿತ ವಲಯಗಳನ್ನು ಗುರುತಿಸಿ ನಿರಂತರವಾಗಿ ಕಾರ್ಮಿಕ ಸಂಘಟನೆಯ ಪ್ರಾಥಮಿಕ ತಿಳುವಳಿಕೆಯನ್ನು ನೀಡಲು ಹಾಗು ಸಂಘಟನೆಗಳನ್ನು ರಚಿಸಲು ಯೋಜನಾ ಬದ್ಧವಾಗಿ ಕೆಲಸ ಮಾಡುವ ಅಗತ್ಯವಿದೆ. ಜಿಲ್ಲಾ ಸಮಿತಿಗಳಿಗೆ ರಾಜ್ಯ ಕೇಂದ್ರದಿಂದ ನಿರ್ದಿಷ್ಟ ಮಾರ್ಗದರ್ಶನಗಳನ್ನು ಮುಂದಿನ ದಿನಗಳಲ್ಲಿ ಮಾಡಬೇಕು.

ಈ ಅವಧಿಯಲ್ಲಿ ಬೆಂಗಳೂರು ಹಾಗು ಕೋಲಾರ ಜಿಲ್ಲೆಗಳಲ್ಲಿನ ಕೆಲವು ಬಹುರಾಷ್ಟ್ರೀಯ ಕಾರ್ಖಾನೆಗಳಲ್ಲಿ ಸಂಘದ ಮಾನ್ಯತೆಗಾಗಿ ಕಾರ್ಮಿಕರು ಸಮರಧೀರ ಹೋರಾಟಗಳನ್ನು ನಡೆಸಿದ್ದಾರೆ. ಇದರ ಫಲವತ್ತಾದ ಅನುಭವಗಳನ್ನು ಚಳುವಳಿ ಅರ್ಥಮಾಡಿಕೊಳ್ಳುವ ವಾತಾವರಣ ನಿರ್ಮಾಣ ಮಾಡುವುದರಲ್ಲಿ ಕೊರತೆಗಳಿವೆ. ಆದರು ನಮ್ಮ ಸಂಘಟನಾ ಇತಿಮಿತಿಯೊಳಗೆ ಸೌಹಾರ್ದ ಬೆಂಬಲವನ್ನು ಅಣಿನೆರಸಲು ಸಾಧ್ಯವಾಗಿದೆ.

ದುಡಿಯುವ ಮಹಿಳೆಯರ ನಡುವೆ ನಮ್ಮ ಕೆಲಸ:

13ನೇ ಸಿಐಟಿಯು ರಾಜ್ಯ ಸಮ್ಮೇಳನದ ಸಂದರ್ಭದಲ್ಲಿ ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ 8ನೇ ರಾಜ್ಯ ಸಮಾವೇಶವು ಮೈಸೂರಿನಲ್ಲಿ ಆಗಸ್ಟ್ 20–21,2016 ರಲ್ಲಿ ನಡೆದಿದೆ. ನಂತರ ಗುಂಟೂರಿನಲ್ಲಿ ನಡೆದ ಅಖಿಲ ಭಾರತ ಸಮಾವೇಶದಲ್ಲಿ ರಾಜ್ಯದಿಂದ 17 ಜನರು ಭಾಗವಹಿಸಿದರು. ಅದರ ನಂತರ ಪುರಿಯಲ್ಲಿ ನಡೆದ ಸಿಐಟಿಯು ಅಖಿಲ ಭಾರತ ಸಮ್ಮೇಳನದಲ್ಲಿ ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ ಸ್ವರೂಪವನ್ನು ಬದಲಿಸಲು ತೀರ್ಮಾನಿಸಲಾಯಿತು. ಇದರಂತೆ, ಸಿಐಟಿಯು ಅಖಿಲ ಭಾರತ ಪದಾಧಿಕಾರಿಗಳ ಭಾಗವಾಗಿರುವ ಮಹಿಳಾ ಸದಸ್ಯರು, ಕಾರ್ಯಕಾರಿ ಸಮಿತಿಯ ಭಾಗವಾಗಿರುವ ಮಹಿಳಾ ಸದಸ್ಯರು, ಜನರಲ್ ಕೌನ್ಸಿಲ್ ಭಾಗವಾಗಿರುವ ಮಹಿಳಾ ಸದಸ್ಯರು ಈ ಪ್ರತಿ ಹಂತದ ಸಮಿತಿಗಳ ಸಭೆ ಸೇರುವ ಮುಂಚಿತವಾಗಿ ಸಭೆ ಸೇರಿ ಈ ಸಮಿತಿಯ ಶಿಫಾರಸ್ಸುಗಳನ್ನು ಆಯಾ ಸಮಿತಿಗಳಿಗೆ ನೀಡಬೇಕೆಂಬ ಮೂರು ಹಂತದ ಕಾರ್ಯಾಚರಣೆಯನ್ನು ಅನುಸರಿಸಲು ತೀರ್ಮಾನಿಸಲಾಗಿತು. ಇದರಂತೆ ರಾಜ್ಯದಲ್ಲಿ ಸಿಐಟಿಯು ಪದಾಧಿಕಾರಿಗಳ ಸಭೆಗೆ ಮೊದಲು ಹಾಗು ರಾಜ್ಯ ಸಮಿತಿ ಸಭೆಗಳು ನಡೆಯುವ ಮೊದಲು ಅಯಾ ಹಂತದ ಸಮಿತಿಗಳಲ್ಲಿ ಸದಸ್ಯರುಗಳಾಗಿರುವ ಮಹಿಳಾ ಸದಸ್ಯರ ಸಭೆಯನ್ನು ಪ್ರತ್ಯೇಕವಾಗಿ ಮಾಡಿ ಶಿಫಾರಸ್ಸುಗಳನ್ನು ಸಿಐಟಿಯು ಸಮಿತಿಗಳಿಗೆ ನೀಡಬೇಕಾಗಿತು. ಮಹಿಳೆಯರು ಹಾಗು ಪುರುಷರು ಸದಸ್ಯರಾಗಿರುವ ಪ್ರತಿ ಕಾರ್ಮಿಕ ಸಂಘಟನೆಗಳಲ್ಲಿಯು ದುಡಿಯುವ ಮಹಿಳೆಯರ ಉಪಸಮಿತಿಗಳನ್ನು ರಚಿಸಲು ತೀರ್ಮಾನಿಸಲಾಗಿತು. ಆದರೆ ನಿರ್ದಿಷ್ಟವಾದ ಮಾರ್ಗದರ್ಶನದ ಕೊರತೆಯಿಂದಾಗಿ ರಾಜ್ಯದಲ್ಲಿ ಈ ತೀರ್ಮಾನವನ್ನು ಸಮರ್ಪಕವಾಗಿ ಜಾರಿ ಮಾಡಲು ತೀರ್ಮಾನಿಸಲಾಗಿಲ್ಲ. ಸಿಐಟಿಯು ರಾಜ್ಯ ಸಮಿತಿ ಸಭೆಗಳಿಗೆ ಮೊದಲು 6 ಬಾರಿ ಈ ಅವಧಿಯಲ್ಲಿ ಸಭೆ ಸೇರಿದೆ. ರಾಜ್ಯದ ಸಿಐಟಿಯು ಸದಸ್ಯತ್ವದಲ್ಲಿ 2018ರ ವೇಳೆ 49.8% ರಷ್ಟು ಮಹಿಳಾ ಸದಸ್ಯತ್ವ ಇರುವ ಕಾರಣ ಈ ಬಗ್ಗೆ ವಿಶೇಷ ಗಮನ ಹರಿಸುವ ಅಗತ್ಯವಿದೆ. ಈ ಮಹಿಳೆಯರ ತಿಳುವಳಿಕೆ ಮಟ್ಟವನ್ನು ಎತ್ತರಿಸಿ ಚಳುವಳಿಯ ಮುಂಚೂಣಿಗೆ ತರಬೇಕಾಗುತ್ತದೆ. ಸಿಐಟಿಯು ಜಿಲ್ಲಾ ಸಮಿತಿಗಳು ಈ ನಿಟ್ಟಿನಲ್ಲಿ ಕೆಲಸ ಮಾಡುವ ಅಗತ್ಯವಿದೆ. ಮಾರ್ಚ್ 8ರ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು 2017ರಲ್ಲಿ ಸ್ವತಂತ್ರವಾಗಿ 2018 ಹಾಗು 2019ರಲ್ಲಿ ಜಂಟಿಯಾಗಿ ಆಚರಣೆ ಮಾಡಲಾಗಿದೆ. 2019ರ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ಲೋಕಸಭಾ ಚುನಾವಣೆಗಳು ನಡೆಯುತ್ತಿದ್ದ ಸಂದರ್ಭದಲ್ಲಿ ಮಹಿಳಾ ಪ್ರಣಾಳಿಕೆಯನ್ನು ಬಿಡುಗಡೆ ಮಾಡಲಾಗಿತು. ಈ ಅವಧಿಯಲ್ಲಿ 2017 ಮಾರ್ಚಿನಲ್ಲಿ ಎರಡು ದಿನಗಳ ಕಾರ್ಯಾಗಾರವನ್ನು ನಡೆಸಲಾಗಿದೆ. ಫೆಬ್ರವರಿ 2017ರಲ್ಲಿ ಚೆನ್ನೈನಲ್ಲಿ ನಡೆದ ಕಾರ್ಯಾಗಾರದಲ್ಲಿ ರಾಜ್ಯದಿಂದ ಪ್ರತಿನಿಧಿಗಳು ಭಾಗವಹಿಸಿದರು. ಇತ್ತೀಚೆಗೆ ಹಾಸನದಲ್ಲಿ ನಡೆದ ಅಖಿಲ ಭಾರತ ಜನರಲ್ ಕೌನ್ಸಿಲ್ ಸಭೆಗೆ ಮೊದಲು ಬೆಂಗಳೂರಿನ ಇಎಂಎಸ್ ಭವನದಲ್ಲಿ ನಡೆದ ಅಖಿಲ ಭಾರತ ದುಡಿಯುವ ಮಹಿಳೆಯರ ಸಮನ್ವಯ ಸಮಿತಿ ಸಭೆ ನಡೆಯಿತು. ಈ ಸಭೆಯನ್ನು ಆಯೋಜಿಸಲು ರಾಜ್ಯದ ಸಮನ್ವಯ ಸಮಿತಿ ಯಶಸ್ವಿಯಾಗಿ ತೊಡಗಿಸಿಕೊಂಡಿದೆ. ಮುಂದಿನ ಅವಧಿಯಲ್ಲಿ ದುಡಿಯುವ ಸಮಿತಿಯ ಕಾರ್ಯಾಚರಣೆಯನ್ನು ವಿಸ್ತರಿಸಲು ಹಾಗು ಮತ್ತಷ್ಟು ಸಂಘಟಿತವಾಗಿ ನಡೆಸಲು ಪ್ರಯತ್ನ ಮಾಡಬೇಕು.

ಕಾರ್ಯಕರ್ತರ ಕುರಿತು:

ಕಾರ್ಮಿಕ ವರ್ಗದ ಕ್ರಾಂತಿಕಾರಿ ಚಳುವಳಿಯು ಕಾರ್ಮಿಕ ವರ್ಗದ ಹಿತವನ್ನು ರಕ್ಷಿಸುವ ನಿಷ್ಠೆ, ಸೈದ್ಧಾಂತಿಕ ಬದ್ಧತೆ, ಚಳುವಳಿ ಹಾಗು ಸಂಘಟನೆಯ ಆದರ್ಶಗಳಿಗೆ ಸಂಪೂರ್ಣವಾದ ಅರ್ಪಣಾ ಮನೋಭಾವವಿರುವ ಕಾರ್ಯಕರ್ತರ ತಂಡವಿಲ್ಲದೆ ಮುನ್ನಡೆಯುವುದು ಸಾಧ್ಯವಿಲ್ಲ. ಈ ನಿಟ್ಟಿನಲ್ಲಿ ಸಂಘಟನಾ ಸಾಮರ್ಥ್ಯ ಹಾಗು ಬದ್ಧತೆ ಇರುವ ಕಾರ್ಯಕರ್ತರನ್ನು ಬೆಳೆಸಲು ನಿರಂತರ ಪ್ರಯತ್ನ ಮಾಡಬೇಕು. ಈ ರೀತಿಯಲ್ಲಿ ಬೆಳೆದು ಬರುವ ಕಾರ್ಯಕರ್ತರು ಸ್ವತಂತ್ರ ಕಾರ್ಯಕ್ಷಮತೆ ಉಳ್ಳವರಾಗಿರುತ್ತಾರೆ. ಯಾವುದೇ ವ್ಯಕ್ತಿ/ಮುಖಂಡರುಗಳ ಹಿಂಬಾಲಕರಾಗಿರುವುದು ಸಾಧ್ಯವಿಲ್ಲ. ಸಂಘಟನಾ ಧೋರಣೆಗಳನ್ನು ಸ್ಪಷ್ಟವಾಗಿ ಅರ್ಥಮಾಡಿಕೊಂಡಿರುವ, ಸಂಘಟನೆಯ ಆದರ್ಶ ಸಿದ್ಧಾಂತಗಳನ್ನು ಮೈಗೂಡಿಸಿಕೊಂಡಿರುವ ದೃಢತೆಯನ್ನು ಅವರು ಹೊಂದಿರುತ್ತಾರೆ. ಸಾಮಾನ್ಯ ಜನರ ತಿಳುವಳಿಕೆ ಮಟ್ಟಕ್ಕಿಂತಲು ಎತ್ತರದ ತಿಳುವಳಿಕೆ ಮಟ್ಟವನ್ನು ನಮ್ಮ ಸದಸ್ಯರು, ಕಾರ್ಯಕರ್ತರು ಹೊಂದಿರಬೇಕು. ಈ ರೀತಿಯ ಕಾರ್ಯಕರ್ತರನ್ನು ಪ್ರತಿ ಸಂಘಟನೆಯು ಗುರುತಿಸಿ ಬೆಳೆಸಬೇಕು. ಜಿಲ್ಲಾ ಸಮಿತಿಗಳು ಇದರೆಡೆಗೆ ಗಮನ ನೀಡಬೇಕು. ಯುವ ಹಾಗು ವಿದ್ಯಾವಂತ ಕಾರ್ಮಿಕರನ್ನು, ಮಹಿಳೆಯರನ್ನು ಗುರುತಿಸಿ ನಾಯಕತ್ವದ ಮೌಲ್ಯಗಳನ್ನು ಬೆಳೆಸಬೇಕು.

ಆಳುವ ಬಂಡವಾಳಶಾಹಿ ವರ್ಗಗಳ ನೀಚಪ್ರವೃತ್ತಿಗಳ ಪ್ರಭಾವದಿಂದ ಈ ಕಾರ್ಯಕರ್ತರನ್ನು ರಕ್ಷಿಸಿ ಕ್ರಾಂತಿಕಾರಿ ಕಾರ್ಯವೈಖರಿಯನ್ನು ಬೆಳೆಸಬೇಕು. ಈ ವಿಚಾರಗಳಲ್ಲಿ ನಮ್ಮ ಸಂಘಟನೆಗೆ ನಿರ್ದಿಷ್ಟ ಕೇಡರ್ ಪಾಲಿಸಿ (ಕಾರ್ಯಪಡೆ ನೀತಿ) ಯನ್ನು ರೂಪಿಸಲು ಸಾಧ್ಯವಾಗಬೇಕು.

ಕಾರ್ಯಕರ್ತರೆಂದರೆ ಪೂರ್ಣಾವಧಿ ಕಾರ್ಯಕರ್ತರೆಂದು ಮಾತ್ರ ಭಾವಿಸುವ ಅಗತ್ಯವಿಲ್ಲ. ಅರೆಕಾಲಿಕ, ಉದ್ಯೋಗಿಗಳಾಗಿದ್ದು ಕೂಡಾ ಸಂಘಟನಾ ಕೆಲಸಕ್ಕೆ ಲಭ್ಯವಾಗ ಬಹುದಾದ ಸಂಗಾತಿಗಳನ್ನು ಬೆಳೆಸುವ ಅಗತ್ಯವಿದೆ.

ಸಿಐಟಿಯು ಸಂದೇಶ:

ಸಿಐಟಿಯು ಸಂದೇಶ ನಮ್ಮ ಚಳುವಳಿಯ ಪ್ರಮುಖ ಮುಖವಾಣಿ. ಇದನ್ನು ಬಹು ಸಂಖ್ಯೆಯ ಸದಸ್ಯರಿಗೆ ತಲುಪಿಸಲು ಯೋಜನಾಬದ್ಧ ಪ್ರಯತ್ನ ಆಗಬೇಕು. ಈ ಪತ್ರಿಕೆಯನ್ನು ಉತ್ತಮ ರೀತಿಯಲ್ಲಿ ತರಲು ಪ್ರಯತ್ನ ಮಾಡಲಾಗುತ್ತಿದೆ. ಕೆಲವೆ ಸಂಗಾತಿಗಳ ಶ್ರಮದಿಂದ ಈ ಪತ್ರಿಕೆ ಪ್ರತಿ ತಿಂಗಳು ಹೊರಬರುತ್ತಿದೆ. ಸಂದೇಶದ ಪ್ರಸಾರವನ್ನು ಹೆಚ್ಚು ಮಾಡಲು ಕೆಲವು ಯೋಜನೆಗಳನ್ನು ಮಾಡಲಾಗಿತ್ತು. ಕೆಲವು ಕಾರ್ಮಿಕ ಸಂಘಟನೆಗಳು ಎಲ್ಲಾ ಸದಸ್ಯರಿಗು ಚಂದ ಮಾಡುವ ಹಾಗು ಅದನ್ನು ಕ್ರಮೇಣವಾಗಿ ನವೀಕರಿಸುವ ಪ್ರಯತ್ನವನ್ನು ಮಾಡಿದರು. ಆದರು ಸಂದೇಶದ ಒಟ್ಟು ಪ್ರಸಾರ ಕಡಿಮೆಯಾಗುತ್ತಿದೆ.

ಸಧ್ಯ ಪ್ರತಿ ತಿಂಗಳು ಒಟ್ಟು 4000 ಪ್ರತಿಗಳನ್ನು ಮುದ್ರಿಸಲಾಗುತ್ತಿದೆ. ಪ್ರತಿ ಸಂಘಟನೆಯ ಕಾರ್ಯಕಾರಿ ಸಮಿತಿ ಸದಸ್ಯರುಗಳನ್ನು ಸಂದೇಶದ ಚಂದಾದಾರರನ್ನಾಗಿ ಮಾಡಲು ಪ್ರಯತ್ನಿಸಬೇಕು. 2020 ಮಾರ್ಚ್ ತಿಂಗಳ ಒಳಗೆ ಈ ಗುರಿಯನ್ನು ಮುಟ್ಟಲು ಸಂಘಟನೆಗಳು ಪ್ರಯತ್ನ ಮಾಡ ಬೇಕು. ನಮ್ಮ ಒಟ್ಟು ಸದಸ್ಯತ್ವದ ಶೇ. 10 ರಷ್ಟಾದರು ಸಿಐಟಿಯು ಸಂದೇಶದ ಚಂದಾದಾರರಾಗುವಂತೆ ಪ್ರಯತ್ನ ಮಾಡುವುದು ಅಗತ್ಯವಿದೆ.

8. ಸೈದ್ಧಾಂತಿಕ ಪ್ರಚಾರ ಹಾಗು ಪ್ರಕ್ಷೋಭೆಗಳು:

ನಮ್ಮ ದಿನನಿತ್ಯದ ಸಂಘಟನಾ ಕೆಲಸಗಳಲ್ಲಿ ಆದ್ಯತೆಯನ್ನು ನೀಡಬೇಕಾದ ಕೆಲಸವೆಂದರೆ, ಸದಸ್ಯರ ಹಾಗು ಕಾರ್ಯಕರ್ತರ ಸೈದ್ಧಾಂತಿಕ ತಿಳುಳಿಕೆ ಮಟ್ಟವನ್ನು ಎತ್ತರಿಸಲು ಮಾಡಬೇಕಾದ ತರಬೇತಿಗಳು. ಆರ್ಥಿಕ ಸವಲತ್ತುಗಳು ಹಾಗು ಕೆಲಸದ ಪರಿಸರವನ್ನು ಉತ್ತಮ ಪಡಿಸುವ ಹೋರಾಟಗಳಲ್ಲಿ ಸಿಗುವ ಎಲ್ಲಾ ರೀತಿಯ ಅನುಭವಗಳನ್ನು ಹೊರಗೆ ಹಚ್ಚಿ ನೋಡಲು ಹಾಗು ಬದ್ಧತೆಯನ್ನು ಖಾತ್ರಿಗೊಳಿಸಿಕೊಳ್ಳಲು ಸೈದ್ಧಾಂತಿಕ ತಳಹದಿ ದೃಢವಾಗಿರುವುದು ಅತ್ಯಗತ್ಯ. ಸಾಮಾಜಿಕವಾಗಿ ಪ್ರಬಲವಾಗಿರುವ ಮೌಢ್ಯ, ಕಂದಾಚಾರಗಳಿಂದ ನಮ್ಮ ಸದಸ್ಯರನ್ನು ಹೊರ ತರಲು ನಿರಂತರವಾಗಿ ಶ್ರಮಿಸುವುದು ನಮ್ಮ ಚಳುವಳಿಯದೇ ಕೆಲಸ.

ಸಿಐಟಿಯುವಿನ 50 ವರ್ಷಗಳು ಹಾಗು ಭಾರತದ ಕಾರ್ಮಿಕ ಚಳುವಳಿಯ 100 ವರ್ಷಗಳ ಆಚರಣೆಯ ಭಾಗವಾಗಿ ಪ್ರತಿ ತಿಂಗಳು ಕಾರ್ಯಕರ್ತರಿಗೆ ವಿವಿಧ ಹಂತಗಳಲ್ಲಿ ತರಬೇತಿಗಳನ್ನು ನಡೆಸಲು ತೀರ್ಮಾನಿಸಲಾಗಿತ್ತು. ವರ್ಷಕ್ಕೊಮ್ಮೆ ರಾಜ್ಯ ಮಟ್ಟದ ತರಬೇತಿ ಶಿಬಿರಗಳನ್ನು ಆಯೋಜಿಸಲು ಪ್ರಯತ್ನ ಮಾಡಬೇಕು. ಕನಿಷ್ಠ ಮೂರು ದಿನಗಳಿಂದ ಐದು ದಿನಗಳ ಕಾಲಾವಧಿಯ ಶಾಲೆಗಳಾಗಿ ಇವುಗಳನ್ನು ನಡೆಸಬೇಕು. ರಂಗವಾರು ಹಾಗು ರಾಜ್ಯ ಸಂಘಗಳು ಈ ಪ್ರಯತ್ನಗಳನ್ನು ಮುಂದುವರೆಸಬೇಕು.

ಈ ಅವಧಿಯಲ್ಲಿ ರಾಜ್ಯ ಸಮಿತಿಯಿಂದ ಹೊರ ತಂದ ಕಿರುಪುಸ್ತಕಗಳು:

1. ನವ ಕರ್ನಾಟಕ ನಿರ್ಮಾಣಕ್ಕಾಗಿ ಸಿಐಟಿಯು

➪➪➪

ವಿಜಯಪುರ: ರೈತರ ಜಮೀನುಗಳಿಗೆ ರಸ್ತೆಗಾಗಿ ಆಗ್ರಹ



ರೈತರು ತಮ್ಮ ಜಮೀನಿಗೆ ಹೋಗಿ ಬರುವ ದಾರಿ ಬಂದ್ ಮಾಡಿದ್ದು, ಜಿಲ್ಲೆಯಲ್ಲಿ ಹಾಗೂ ಕರ್ನಾಟಕದಲ್ಲಿ ದಾರಿ ಸಮಸ್ಯೆಯಿಂದ ಹೊಡೆದಾಟ, ಕೊಲೆಗಳು ಸಂಭವಿಸಿವೆ. ಪೊಲೀಸ್ ಸ್ಟೇಶನ್, ಕೋರ್ಟ್, ಕಂದಾಯ ಇಲಾಖೆಗಳ ಮೂಲಕ ಎರಡೂ ಕಡೆ ರೈತರನ್ನು ಕರೆಯಿಸಿ ಬಗೆಹರಿಸಿದರೂ, ಯಾರು ತೋಳ್ಬಲ ಮತ್ತು ಹಣಬಲ ಇದ್ದವರು ವಶೀಲಿ ಒತ್ತಡಗಳಿಂದ ಮೇಲುಗೈ ಸಾಧಿಸುತ್ತಿದ್ದಾರೆ. ಮುಗ್ಧ ರೈತರು ಅನ್ಯಾಯಕ್ಕೆ ಒಳಗಾಗಿದ್ದಾರೆ. ದಿಕ್ಕು ತೋದೆ ಕಂಗಾಲಾಗಿದ್ದಾರೆ ಎಂದು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಉಪಾಧ್ಯಕ್ಷರಾದ ಭೀಮಶಿ ಕಲಾದಗಿ ಹೇಳಿದರು.

ಕಂದಾಯ ಇಲಾಖೆ ಹಾಗೂ ಜಿಲ್ಲಾಧಿಕಾರಿಗಳು ಅಕ್ರಮ ರಸ್ತೆಗಳನ್ನು ತೆರವುಗೊಳಿಸಲಿಕ್ಕೆ ಆದೇಶವಿದ್ದರೂ ರೈತರ ಹಾಗೂ ರೈತ ಸಂಘಟನೆಗಳು ಆದೇಶ ಹಚ್ಚಿ ಮನವಿ ಕೊಟ್ಟರೂ ಹಿಂಬರಹ ಬರೆದುಕೊಡದೆ ಮತ್ತು ಸಮಸ್ಯೆ ಬಗೆಹರಿಸಲು ಜಿಲ್ಲಾಡಳಿತ ವಿಫಲವಾಗಿದೆ. ಸರ್ಕಾರ ತಕ್ಷಣ ಜಿಲ್ಲಾ ಮಟ್ಟದ ಮತ್ತು ತಾಲೂಕಾ ಮಟ್ಟದ ಕಮೀಟಿ ರಚಿಸಿ ದಾರಿ ತಕರಾರು ಬಂದರೆ ತಕ್ಷಣ ಸ್ಥಳಕ್ಕೆ ಹೋಗಿ ಪರಿಶೀಲಿಸಿ ನ್ಯಾಯ ಬಗೆಹರಿಸಬೇಕೆಂದು ವಿನಂತಿಸಿಕೊಂಡರು.

ರಸ್ತೆ ಅತಿಕ್ರಮಣ ತೆರವುಗೊಳಿಸಲಿಕ್ಕೆ ಅನ್ಯಾಯಕ್ಕೆ ಒಳಗಾದ ರೈತರು ಹಾಗೂ ಕನಾಟಕ ಪ್ರಾಂತ ರೈತ ಸಂಘ ಹಾಗೂ ಅಖಂಡ ಕರ್ನಾಟಕ ರೈತ ಸಂಘದಿಂದ ದಾಖಲೆಗಳನ್ನು ಹಚ್ಚಿ ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಹಾಗೂ ಇತರ ಸಂಬಂಧಪಟ್ಟ ಜಿಲ್ಲಾಡಳಿತಕ್ಕೆ ಅರ್ಜಿ ಮತ್ತು ಮನವಿ ಕೊಡಲಾಗಿದ್ದರೂ ಜಿಲ್ಲಾಡಳಿತವು ಹಿಂಬರಹ ಕೊಡದೆ ವಿಫಲವಾಗಿದೆ. ಅಕ್ರಮವಾಗಿ ರಸ್ತೆ ಬಂದ ಮಾಡಿದ್ದು ಕೋರ್ಟಿನ ತಡೆಯಾಜ್ಞೆ ತಂದರೂ ಯಾವುದೇ ಕ್ರಮ ತೆಗೆದುಕೊಳ್ಳಲು ಜಿಲ್ಲಾಡಳಿತ ವಿಫಲವಾಗಿದೆ. ಆಸೆ ಆಮಿಷ, ಒತ್ತಡಕ್ಕೆ ಒಳಗಾಗಿ ಕೆಲವು ಅಧಿಕಾರಿಗಳು ನಕಾಶದಲ್ಲಿ ದಾರಿಯಿಲ್ಲ, ನಾವು ಏನೂ ಮಾಡಲು ಆಗುವುದಿಲ್ಲ ಎಂದು ಸಬೂಬು ಹೇಳುತ್ತಾರೆ.

ಕೆಪಿಆರ್ಎಸ್ ಜಿಲ್ಲಾಧ್ಯಕ್ಷರಾದ ಅಣ್ಣಾರಾಯ ಈಳಗೇರ ಮಾತನಾಡಿ, ರೈತರ ಹೊಲಗಳಿಗೆ ಹೋಗುವ ದಾರಿ ಸುಗಮವಾಗಿದ್ದರೆ ಅವುಗಳೇ ರೈತರ ಎರಡು ಕಣ್ಣುಗಳಿದ್ದಂತೆ. ರೈತನಿಗೆ ರಸ್ತೆಯಿಲ್ಲದಿದ್ದರೆ ರೈತ ಗೋಳಿನಲ್ಲಿಯೇ ತಮ್ಮ ಬದಕನ್ನು ನಡೆಸಬೇಕಾಗುತ್ತದೆ. ಜಿಲ್ಲೆಯಲ್ಲಿ ಬಹಳಷ್ಟು ದಾರಿಗಳ ಕುರಿತು ಅನೇಕ ವ್ಯಾಜ್ಯಗಳಿವೆ. ರೈತರ ದಾರಿ ಸಮಸ್ಯೆಯನ್ನು ಸರ್ಕಾರ ಬಗೆಹರಿಸುತ್ತಿಲ್ಲ. ರೈತರು ನೆಮ್ಮದಿಯಿಂದ ಬಾಳಬೇಕೆನ್ನುವ ಉದ್ದೇಶ ಹೊಂದಿದಿಯೇ ಎಂಬ ಪ್ರಶ್ನೆ ಸಾರ್ವಜನಿಕರನ್ನು ಮೂಡುತ್ತಿದ್ದೆ. ಕೂಡಲೆ ವ್ಯಾಜ್ಯಗಳನ್ನು ಪರಿಹರಿಸಬೇಕೆಂದು ಒತ್ತಾಯಿಸಿದರು. ಸಮಸ್ಯೆಯನ್ನು ಬಗೆ ಹರಿಸದಿದ್ದಲ್ಲಿ ಮುಂದಿನ ದಿನಗಳಲ್ಲಿ ತೀವ್ರವಾದ ಹೋರಾಟವನ್ನು ಹಮ್ಮಿಕೊಳ್ಳಬೇಕಾಗುತ್ತದೆ ಎಂದರು.

ನೀರಿಗಾಗಿ ಒತ್ತಾಯಿಸಿ ಕರ್ನಾಟಕ ಪ್ರಾಂತ ರೈತ ಸಂಘದ ವತಿಯಿಂದ ಆಲಮಟ್ಟಿಯಲ್ಲಿ ಧರಣಿ

8 ದಿವಸ ಬಂದ್ 15 ದಿನ ನೀರು ಬಿಡುವುದು ಈ ರೀತಿ ವಾರಾ ಬಂದ ಮಾಡುವುದರ ಮೂಲಕ ಮಾರ್ಚ್ 31 ರವರೆಗೆ ರೈತರ ಜಮೀನುಗಳಿಗೆ ನೀರು ಬಿಡಬೇಕು ಹಾಗೂ ಮಳೆ ನಿಂತ ನಂತರ ನೀರಿನ ಒಳ ಹರವು ಕಡಿಮೆಯಾದ ನಂತರ ಜಿಂದಾಲ ಕಂಪನಿಗೆ ನೀರು ಕೊಡುವುದನ್ನು ಬಂದ ಮಾಡಬೇಕು. ಜಿಲ್ಲೆಯ ಎಲ್ಲ ಕೆರೆಗಳಿಗೆ ನೀರು ತುಂಬಿಸುವ ಯೋಜನೆಯನ್ನು ಮಾರ್ಚ್ ಮೊದಲವಾರದೊಳಗೆ ಪೂರ್ಣಗೊಳಿಸಬೇಕೆಂದು ಎಂದು ಒತ್ತಾಯಿಸಿ ರಾಜ್ಯ ಉಪ ಮುಖ್ಯಮಂತ್ರಿ ಹಾಗೂ ನೀರಾವರಿ ಸಲಹಾ ಸಮಿತಿ ಅಧ್ಯಕ್ಷರಾದ ಗೋವಿಂದ ಕಾರಜೋಳ ಅವರಿಗೆ ಮನವಿ ಸಲ್ಲಿಸಿದರು.

ಮನವಿ ಸ್ವೀಕರಿಸಿದ ಅವರು, ಮಾರ್ಚ್ 20 ರ ವರೆಗೆ ರೈತರ ಜಮೀನುಗಳಿಗೆ ನೀರು ಹರಿಸುವುದಾಗಿ ಭರವಸೆ ನೀಡಿದರು.

ಧರಣಿ ಸತ್ಯಾಗ್ರಹದಲ್ಲಿ ವಿಜಯಪುರ,ಯಾದಗಿರಿ, ಕಲ್ಬುರ್ಗಿ ರೈತರು ಅಪಾರ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ರಾಜ್ಯ ಉಪಾಧ್ಯಕ್ಷರಾದ ಭೀಮಶಿ ಕಲಾದಗಿ, ವಿಜಯಪುರ ಜಿಲ್ಲಾಧ್ಯಕ್ಷರಾದ ಅಣ್ಣಾರಾಯ ಈಳಗೇರ, ಕಾರ್ಯದರ್ಶೀ ಭೀಮರಾಯ ಪೂಜಾರಿ, ಯಾದಗಿರಿ ಜಿಲ್ಲೆಯ ರೈತ ಸಂಘದ ಮುಖಂಡರಾದ ಸಾಗರ, ಚೆನ್ನಪ್ಪ ಆನೆಗುಂದಿ ಸೇರಿದಂತೆ ಮುಂತಾದವರು ಧರಣಿ ನಾಯಕತ್ವ ವಹಿಸಿದ್ದರು.

ಅಣ್ಣಾರಾಯ ಈಳಗೇರ



⇨⇨⇨

ಪ್ರಣಾಳಿಕೆ. –20,000 ಪುಸ್ತಕಗಳು

2. ಭುವನೇಶ್ವರ ದಸ್ತವೇಜು –5000 ಪುಸ್ತಕಗಳು
3. ಜನ ವಿರೋಧಿ ಮತ್ತು ದೇಶವಿರೋಧಿ ಆಡಳಿತವನ್ನು ವಿರೋಧಿಸಿ ಡಾ.ಹೇಮಲತ ರವರು ಬರೆದಿರುವ ಸೆಪ್ಟಂಬರ್ 5, 2018ರ ಮುಷ್ಕರಕ್ಕೆ –10,000 ಪುಸ್ತಕಗಳು.
4. ಕಾರ್ಲ್ ಮಾರ್ಕ್ಸ್‌ರವರ ನೆನಪಿಗಾಗಿ –1.000 ಕ್ಯಾಲೆಂಡರ್‌ಗಳು
5. ಸಂವಿಧಾನ ಓದು ಪುಸ್ತಕ –700 ಮಾರಾಟ ಮಾಡಿದ್ದೇವೆ.
6. ಕಾರ್ಮಿಕ ಸನ್ನದು–25,000 ಪ್ರತಿಗಳು
7. ಪ್ರಸನ್ನ ರವರ ನೆನಪಿನ ಪುಸ್ತಕ –2,000
8. ನಿರುದ್ಯೋಗದ ಬಗ್ಗೆ – 5,000 ಪುಸ್ತಕಗಳು

9. ರೈತ ಕೂಲಿಕಾರರ ಜತೆ ಐಕ್ಯ ಚಳುವಳಿ ಕಟ್ಟುವುದು: ಸರ್ಕಾರವು ಅನುಸರಿಸುತ್ತಿರುವ ಆಕ್ರಮಣಕಾರಿ ನವ ಉದಾರೀಕರಣದ ನೀತಿಗಳಿಂದ ತೊಂದರೆಗೊಳಗಾಗಿರುವ ರೈತ–ಕೃಷಿ ಕೂಲಿಗಾರರ ಸಂಘಟನೆಗಳೊಂದಿಗೆ ಸೇರಿ ನೀತಿಗಳು ಹಾಗು ಅದರ ಹಿಂದಿರುವ ರಾಜಕೀಯದ ವಿರುದ್ಧ ಪರ್ಯಾಯ ನೀತಿಗಳ ಜಾರಿಗಾಗಿ ನಿರಂತರವಾಗಿ ಜಂಟಿ ಚಳುವಳಿಗಳನ್ನು ಎಲ್ಲಾ ಹಂತದಲ್ಲಿಯು ಕಟ್ಟುವ ಪ್ರಯತ್ನವನ್ನು ಮಾಡಬೇಕೆಂದು ಸಿಐಟಿಯು ತೀರ್ಮಾನಿಸಿದೆ.

ಕೃಷಿಕೂಲಿಗಾರರ ಸಂಘಟನೆಗೆ ವಂತಿಗೆ:

ಗ್ರಾಮೀಣ ಪ್ರದೇಶಗಳಲ್ಲಿರುವ ದುಡಿಯುವ ವರ್ಗವಾದ ಕೃಷಿಕೂಲಿಗಾರರನ್ನು ಸಂಘಟನೆ ಮಾಡಲು ಸಹಕರಿಸುವುದು ಕಾರ್ಮಿಕ ವರ್ಗದ ಪ್ರಮುಖ ಕರ್ತವ್ಯಗಳಲ್ಲಿ ಒಂದು ಎಂಬ ತಿಳುವಳಿಕೆಯೊಂದಿಗೆ ಸಿಐಟಿಯುವಿನ ಪ್ರತಿ ಸದಸ್ಯನು, ಕರ್ನಾಟಕ ಪ್ರಾಂತ ಕೃಷಿಕೂಲಿಗಾರರ ಸಂಘಟನೆಗೆ ಪ್ರತಿ ವರ್ಷವು ಒಂದು ರೂಪಾಯಿ ವಂತಿಗೆ ನೀಡಬೇಕೆಂದು ತೀರ್ಮಾನಿಸಲಾಗಿತ್ತು. ಈ ವಂತಿಗೆಯನ್ನು ಸಿಐಟಿಯುವಿಗೆ ಅಫಿಲಿಯೇಶನ್ ಶುಲ್ಕ ನೀಡುವಾಗ ಪ್ರತಿವರ್ಷವು ನೀಡಲು ತೀರ್ಮಾನಿಸಲಾಗಿತು. ಆದರೆ ಹಲವು ಸಂಘಟನೆಗಳು ಈ ಮೊತ್ತವನ್ನು ನೀಡುತ್ತಿಲ್ಲ. 2019ರ ಸದಸ್ಯತ್ವದೊಂದಿಗೆ ಸಿಐಟಿಯುಗೆ ಸೇರ್ಪಡೆಯಾಗಿರುವ ಪ್ರತಿ ಕಾರ್ಮಿಕರ ಸಂಘಟನೆಯು ತನ್ನ ಪ್ರತಿಸದಸ್ಯನಿಗೆ ಒಂದು ರೂಪಾಯಿ ದರದಲ್ಲಿ ಕೃಷಿಕೂಲಿಗಾರ ಸಂಘಟನೆಗೆ ವಂತಿಗೆನೀಡಬೇಕೆಂಬ ತೀರ್ಮಾನಕ್ಕೆ ಈ ಸಮ್ಮೇಳನ ಬಂದಿದೆ.

ಸಾಮಾಜಿಕ ಜಾಲತಾಣದ ಬಳಿಕೆಯ ಕುರಿತು:

ಸಿಐಟಿಯು ರಾಜ್ಯ ಸಮಿತಿಗೆ ಪ್ರತ್ಯೇಕವಾದ ಒಂದು ವೆಬ್ ಸೈಟನ್ನು ಪ್ರಾರಂಭಿಸಲು ಪ್ರಯತ್ನ ಮಾಡಬೇಕು. ನಮ್ಮ ಚಟುವಟಿಕೆಗಳು ಹಾಗು ರಾಜ್ಯ ಕಾರ್ಮಿಕರಿಗೆ ಉಪಯುಕ್ತವಾದ ಮಾಹಿತಿಗಳು ಈ ವೆಬ್ ಸೈಟಲ್ಲಿ ಲಭ್ಯವಾಗುವಂತೆ ಮಾಡುವುದು ಒಳ್ಳೇಯದು.

ಇದಲ್ಲದೆ ನಮ್ಮ ಎಲ್ಲ ಸಂಗಾತಿಗಳು ಫೇಸ್ ಬುಕ್, ಟ್ವಿಟರ್ ಮುಂತಾದ ಸಾಮೂಹಿಕ ಜಾಲತಾಣಗಳಲ್ಲಿ ಸಕ್ರಿಯವಾಗಿದ್ದರೂ ರಾಜ್ಯಸಮಿತಿಗೆ ಪ್ರತ್ಯೇಕ ಮುಖಪುಟ ಕ್ರಮಬದ್ಧವಾಗಿಲ್ಲ ಅಂತಹದೊಂದು ಅಕೌಂಟನ್ನು ಮಾಡಬೇಕು ಹಾಗು ಅದನ್ನು ನಿರಂತರವಾಗಿ ನಡೆಸುವ ಒಂದು ಸಕ್ರೀಯ ತಂಡವನ್ನು ರಚಿಸ ಬೇಕು. ಸಾಮಾಜಿಕ ಜಾಲತಾಣಗಳನ್ನು ಸಕಾರಾತ್ಮವಾಗಿ ಬಳಸಲು ನಮ್ಮ ಹೋರಾಟಗಳು ಹಾಗು ದೋರಣೆಗಳನ್ನು ಸಮರ್ಥವಾಗಿ ಜನರ ನಡುವೆ ಪ್ರಸಾರ ಮಾಡುವ ಪ್ರಯತ್ನವನ್ನು ಮಾಡುವ ಅಗತ್ಯವಿದೆ. ●

ಸಮ್ಮೇಳನ ಅಂಗೀಕರಿಸಿದ ಸಂಘಟನಾ ಗುರಿಗಳು:

1. ಜನವರಿ 8,2020 ಅಖಿಲ ಭಾರತ ಮುಷ್ಕರವನ್ನು ಕರ್ನಾಟಕ ಬಂದ್ ಸ್ವರೂಪದಲ್ಲಿ ನಡೆಸಲು ಪ್ರಯತ್ನಿಸುವುದು.
2. 2020–21ರ ರಾಜ್ಯದ ಬಜೆಟ್ ಮಂಡಿಸುವ ವೇಳೆ ಅಂದರೆ ಫೆಬ್ರವರಿ ಅಥವಾ ಮಾರ್ಚ್ ತಿಂಗಳಲ್ಲಿ ರಾಜ್ಯ ಮಟ್ಟದ ಹೋರಾಟವನ್ನು ರೂಪಿಸುವುದು.
3. ಪ್ರತಿ ವರ್ಷವು ನಮ್ಮ ಸಂಘಟನೆಯ ಸದಸ್ಯತ್ವವನ್ನು ಕನಿಷ್ಟ ಒಂದು ಲಕ್ಷದಂತೆ ಹೆಚ್ಚು ಮಾಡಲು ಯೋಜನೆಗಳನ್ನು ರೂಪಿಸುವುದು. ಮುಂದಿನ ಸಮ್ಮೇಳನದ ವೇಳೆಗೆ 5 ಲಕ್ಷಕ್ಕಿಂತಲು ಹೆಚ್ಚು ಸದಸ್ಯತ್ವವನ್ನು ಮುಟ್ಟಲು ಪ್ರಯತ್ನಿಸುವುದು.
4. ಜಿಲ್ಲಾ ಸಮಿತಿ ಒಳಗೊಂಡು ಎಲ್ಲಾ ಹಂತದ ಸಮಿತಿಗಳ ಕಾರ್ಯಾಚರಣೆಯನ್ನು ಉತ್ತಮಗೊಳಿಸಲು ರಾಜ್ಯ ಕೇಂದ್ರದಿಂದ ವಿಶೇಷ ಗಮನ ನೀಡುವುದು. ರಾಜ್ಯದಲ್ಲಿ ಸಾಮೂಹಿಕ ಕಾರ್ಯಾಚರಣೆಗೆ ಆಧ್ಯತೆ ನೀಡುವುದು.
5. ಎಲ್ಲಾ ಹಂತದ ಸಮಿತಿಗಳಲ್ಲಿ ಹಾಗು ಸಂಘಟನೆಗಳಲ್ಲಿ ಹಣಕಾಸು ಶಿಸ್ತನ್ನು ಉತ್ತಮಪಡಿಸುವುದು. ಶಿಸ್ತುಬದ್ಧ ಹಣಕಾಸು ನಿರ್ವಹಣೆ ಹಾಗು ನಿಧಿನಿರ್ವಹಣೆಯಲ್ಲಿ ಪಾರದರ್ಶಕತೆಯನ್ನು ಖಾತ್ರಿಗೊಳಿಸಲು ಪ್ರಯತ್ನಿಸುವುದು.
6. ಸಂಘಟನಾ ನಿಯಮದಂತೆ ಸಂಘಟನಾ ಸಮಿತಿಗಳಿರುವ ಜಿಲ್ಲೆಗಳಲ್ಲಿ ಸದಸ್ಯತ್ವವನ್ನು ಹೆಚ್ಚು ಮಾಡುವ ಮೂಲಕ ಮುಂದಿನ ಸಮ್ಮೇಳನದ ಒಳಗೆ ಎಲ್ಲಾ ಜಿಲ್ಲೆಗಳಲ್ಲಿಯು ಜಿಲ್ಲಾ ಸಮಿತಿಗಳನ್ನು ರಚಿಸುವ ಪರಿಸರ ನಿರ್ಮಿಸುವುದು.
7. ಈ ಗುರಿ ಸಾಧಿಸಲು ರಾಜ್ಯ ಸಂಘಟನೆಗಳು ಹಾಗು ಜಿಲ್ಲಾ ಸಮಿತಿಗಳ ನಡುವೆ ಉತ್ತಮ ಸಮನ್ವಯತೆಯನ್ನು ರೂಪಿಸಲು ಪ್ರಯತ್ನಿಸುವುದು.
8. ಘನ ಮತ್ತು ಮಧ್ಯಮ ಕಾರ್ಖಾನೆಗಳಲ್ಲಿನ ಕಾರ್ಮಿಕ ಸಂಘಟನೆಗಳಲ್ಲಿ ಕೈಗಾರಿಕಾವಾರು ಸಮನ್ವಯತೆಯನ್ನು ತರುವ ಮೂಲಕ ರಾಜ್ಯ ಕೈಗಾರಿಕಾ ಕೇಂದ್ರಗಳಲ್ಲಿ ಸಂಘಟನೆಗಳನ್ನು ಸ್ಥಾಪಿಸಲು ಪ್ರಯತ್ನ ಮಾಡುವುದು.
9. ಅಸಂಘಟಿತ ಕಾರ್ಮಿಕರ ನಡುವೆ ನಾವು ತಲುಪದಿರುವ ಕ್ಷೇತ್ರಗಳನ್ನು ತಲುಪಲು ಪ್ರಯತ್ನ ಮಾಡುವುದು. ಅದರಲ್ಲಿಯು ಸಿದ್ಧ ಉಡುಪು ಕೈಗಾರಿಕೆ, ಟೆಕ್ಸಟೈಲ್ಸ್, ಅಂಗಡಿ ಹಾಗು ವಾಣಿಜ್ಯ ಸಂಸ್ಥೆಗಳಲ್ಲಿ, ಹೋಟೆಲ್ ಉದ್ದಿಮೆಯಲ್ಲಿನ ಕಾರ್ಮಿಕರು, ಸರ್ಕಾರಿ ಅರೆಸರ್ಕಾರಿ ಇಲಾಖೆಗಳಲ್ಲಿನ ತಾತ್ಕಾಲಿಕ ಹಾಗು ಗುತ್ತಿಗೆ ಕಾಮಿಕರನ್ನು ಸಂಘಟನೆ ಮಾಡಲು ಯೋಜನೆಗಳನ್ನು ರೂಪಿಸುವುದು.
10. ಸಾರಿಗೆ ರಂಗದಲ್ಲಿ ವಿಶೇಷ ಪ್ರಯತ್ನಗಳನ್ನು ಮಾಡುವುದರ ಮೂಲಕ ಸಾರ್ವಜನಿಕ, ಖಾಸಗಿ ರಂಗದಲ್ಲಿ ಪ್ರಯಾಣಿಕರ ಹಾಗು ಸರಕು ಸಾಗಾಣಿಕೆಯ ಕ್ಷೇತ್ರಗಳಲ್ಲಿ ಸಂಘಟನೆಯನ್ನು ಬಲ ಪಡಿಸುವುದು. ಆಟೋರಿಕ್ಷಾ ಚಾಲಕರ ಸಂಘಟನೆಯನ್ನು ರಾಜ್ಯವ್ಯಾಪಿ ಕ್ರೂಢೀಕರಿಸುವುದು.
11. ಯೋಜನಾ ಕಾರ್ಮಿರಾದ ಅಂಗನವಾಡಿ, ಬಿಸಿಯೂಟ ಸಂಘಟನೆಗಳನ್ನು ಬಲಪಡಿಸುವುದು, ಆಶಾ ಹಾಗು ಇತರೆ ಸರ್ಕಾರಿ ಯೋಜನೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರನ್ನು ಸಂಘಟನೆ ಮಾಡುವುದು.
12. ಆನ್ ಲೈನ್ ಸೇವಾ ಕ್ಷೇತ್ರದಲ್ಲಿ ಕೆಲಸ ಮಾಡುವ ಯುವಕರನ್ನು ಸಂಘಟಿಸಲು ಅಗತ್ಯವಾದ ಸಂಪರ್ಕಗಳನ್ನು ಸಾಧಿಸುವುದು.
13. ರಾಜ್ಯ ಮಟ್ಟದಲ್ಲಿ ಅಗತ್ಯಾನುಸಾರ ಕೇಡರ್ ಪಾಲಿಸಿಯನ್ನು ರೂಪಿಸುವುದು. ಒಬ್ಬರೆ ಮುಖಂಡರು ಹಲವು ಸಂಘಗಳಿಗೆ ನಾಯಕತ್ವ ನೀಡುವ ಈಗಿನ ಪರಿಸ್ಥಿತಿಯನ್ನು ಬದಲಿಸಿ ಎರಡನೇ ಹಂತದ ನಾಯಕತ್ವವನ್ನು ಬೆಳಿಸುವುದು.
14. ಐಟಿ ರಂಗದಲ್ಲಿ ಸಂಘಟನೆಯನ್ನು ವಿಸ್ತಾರಗೊಳಿಸಲು ಅಲ್ಲಿನ ಕಾರ್ಮಿಕ ಸಂಘಟನೆಯ ಜೊತೆಗೆ ಸಮನ್ವಯತೆಯನ್ನು ಉತ್ತಮಪಡಿಸಲು ಪ್ರಯತ್ನಿಸುವುದು.
15. ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯನ್ನು ಸಕ್ರೀಯಗೊಳಿಸುವುದು. ಮಹಿಳೆಯರು ಹಾಗು ಪುರಷರು ಸದಸ್ಯರಾಗಿರುವ ಎಲ್ಲಾ ಸಂಘಟನೆಗಳಲ್ಲಿಯು ಮಹಿಳಾ ಉಪ ಸಮಿತಿಗಳನ್ನು ರಚಿಸುವುದು.

ಚುನಾವಣಾ ಬಾಂಡುಗಳು: ಪ್ರಜಾಪ್ರಭುತ್ವಕ್ಕೆ ಅಪಾಯಕಾರಿ

ಪುಟ 7 ರಿಂದ

ಹಿತದೃಷ್ಟಿಯಿಂದ ಜಾರಿಗೊಳಿಸಲು ನಿಯಮಗಳನ್ನು ಬದಿಗೊತ್ತುವುದನ್ನು ಮತ್ತು ಕಾನೂನುಬಾಹಿರ ವಿಧಾನಗಳನ್ನು ಬಳಸುವುದನ್ನು ಮುಂದುವರೆಸಿತು. ಹಫ್ಪಿಂಗ್ಟನ್ ಪೋಸ್ಟ್ ಬಯಲಿಗೆಳೆದಿರುವ ಸಂಗತಿ, ಜನವರಿ 2, 2018ರಂದು ಚುನಾವಣಾ ಬಾಂಡುಗಳಿಗೆ ಅಧಿಸೂಚಿಸಿದ್ದ ನಿಯಮಗಳನ್ನು ಹೇಗೆ ಪ್ರಧಾನ ಮಂತ್ರಿಗಳ ಕಚೇರಿಯಿಂದ ಬಂದ ನಿರ್ದೇಶನಗಳ ಅಡಿಯಲ್ಲಿ ಉಲ್ಲಂಘಿಸಲಾಯಿತು ಎಂಬುದನ್ನು ತೋರಿಸುತ್ತದೆ. ಚುನಾವಣಾ ಬಾಂಡುಗಳನ್ನು ಒಂದು ವರ್ಷದಲ್ಲಿ ಹತ್ತು ದಿನಗಳ ಅವಧಿಯ ನಾಲ್ಕು ಕಂತುಗಳಲ್ಲಿ ನೀಡಬಹುದು ಎಂದು ನಿಯಮಗಳು ಹೇಳುತ್ತವೆ. ಅಂದರೆ ಜನವರಿ, ಎಪ್ರಿಲ್, ಜುಲೈ ಮತ್ತು ಅಕ್ಟೋಬರಿನಲ್ಲಿ. ಒಂದು ಸಾರ್ವತ್ರಿಕ ಚುನಾವಣೆಗಳು ನಡೆಯುವ ವರ್ಷದಲ್ಲಿ ಒಂದು ಹೆಚ್ಚಿನ 30ದಿನಗಳ ಅವಧಿಯನ್ನು ಒದಗಿಸಬಹುದು. ಆದರೆ, ವಿಧಾನಸಭಾ ಚುನಾವಣೆಗಳಿಗೆ ಹಣ ಎತ್ತಲು ಮಾರ್ಚ್ ಮತ್ತು ಮೇ 2018ರಲ್ಲಿ ಚುನಾವಣಾ ಬಾಂಡುಗಳನ್ನು ನೀಡುವಂತೆ ಆದೇಶಿಸಲಾಯಿತು. ಬಹುಶಃ ಕರ್ನಾಟಕ ವಿಧಾನಸಭೆ ಚುನಾವಣೆಗಳಿಗಾಗಿ ಇದನ್ನು ಮಾಡಿರಬಹುದು.

ಫೆಬ್ರುವರಿ 2018ರಲ್ಲಿ ಚುನಾವಣಾ ಬಾಂಡುಗಳ ಯೋಜನೆ ಕಾರ್ಯನಿರ್ವಹಿಸಲಾರಂಭಿಸಿ ಅಕ್ಟೋಬರ್ 2019ರ ವರೆಗೆ ಒಟ್ಟು 6018 ಕೋಟಿ ರೂ.ಗಳ ಮೌಲ್ಯದ ಚುನಾವಣಾ ಬಾಂಡುಗಳನ್ನು ನೀಡಲಾಗಿದೆ. ರಾಜಕೀಯ ಪಕ್ಷಗಳು ತಮ್ಮ ಹಣಕಾಸು ಹೇಳಿಕೆಗಳನ್ನು ಸಲ್ಲಿಸಿರುವ ಚುನಾವಣಾ ಬಾಂಡುಗಳ ಮೊದಲ ಕಂತಿನಲ್ಲಿ 95% ದಷ್ಟು ಮೊತ್ತ ಬಿಜೆಪಿಗೆ ಹೋಗಿದೆ ಎಂದು ತಿಳಿದು ಬಂತು. ಬಾಂಡುಗಳ ಮೂಲಕ ಬರುವ ಹಣದಲ್ಲಿ 90ಶೇ.ದಷ್ಟು ಬಿಜೆಪಿ ಪಕ್ಷವೇ ಪಡೆಯುವುದು ಮುಂದುವರೆದಂತೆ ಕಾಣುತ್ತದೆ. ಮೋದಿ ಸರಕಾರ ಮೋಸದಲ್ಲಿ ನಿಧಿ ನೀಡಿಕೆ ಮತ್ತು ಕಪ್ಪು ಹಣವನ್ನು ಬಿಳಿ ಮಾಡುವುದಕ್ಕೆ ಅನುಕೂಲ ಕಲ್ಪಿಸಿಕೊಡುವ ಬದಲಾವಣೆಗಳನ್ನು ಕಾನೂನಿನಲ್ಲಿ ಮಾಡುವ ಮೂಲಕ ಹೇಗಾದರೂ ಮುಂದೊತ್ತುವ ದೃಢ ನಿರ್ಧಾರ ಮಾಡಿದ್ದೇಕೆ ಎಂಬುದಕ್ಕೆ ಇದು


SBI
भारतीय स्टेट बैंक STATE BANK OF INDIA
इलेक्टोरल बॉन्ड / ELECTORAL BOND

ವಿವರಣೆ ಕೊಡುತ್ತದೆ.

ಈ ಯೋಜನೆಯ ವಿರುದ್ಧ ಸುಪ್ರಿಂ ಕೋರ್ಟಿನಲ್ಲಿ ಹಲವಾರು ಅರ್ಜಿಗಳನ್ನು ಸಲ್ಲಿಸಲಾಗಿದೆ, ಸಿಪಿಐ(ಎಂ)ನ ಅರ್ಜಿಯೂ ಇದೆ. ಲೋಕಸಭಾ ಚುನಾವಣೆಗಳ ಮೊದಲು ಸುಪ್ರಿಂ ಕೋರ್ಟಿನ ಮುಖ್ಯ ನ್ಯಾಯಾಧೀಶ ಗೊಗೋಯ್ ನೇತೃತ್ವದ ಪೀಠ ಈ ಅರ್ಜಿಗಳ ಮೇಲಿನ ತರ್ಕಗಳನ್ನು ಆಲಿಸಿತು. ಆಳುವ ಪಕ್ಷ ಅನಾಮಧೇಯವಾಗಿ ಹಣ ಸಂಗ್ರಹಿಸಲು ಮತ್ತು ಒಂದು ಸಲ್ಲದ ಪ್ರಯೋಜನವನ್ನು ಪಡೆಯಲು ಚುನಾವಣಾ ಬಾಂಡುಗಳನ್ನು ಬಳಸುವ ಪ್ರಶ್ನೆ ಒಂದು ತುರ್ತಿನ ವಿಷಯ. ಆದರೆ ತರ್ಕಗಳನ್ನು ಆಲಿಸಿದ ನಂತರ ನ್ಯಾಯಾಲಯ ಮೇ 30ರ ಒಳಗೆ, ಅಂದರೆ ಚುನಾವಣೆಗಳು ಮುಗಿದ ನಂತರ ಒಂದು ಸೀಲಾದ ಲಕೋಟೆಯಲ್ಲಿ ರಾಜಕೀಯ ಪಕ್ಷಗಳು ಬಾಂಡುಗಳ ಮೂಲಕ ಪಡೆದ ಹಣದ ವಿವರಗಳನ್ನು ಚುನಾವಣಾ ಆಯೋಗಕ್ಕೆ ಸಲ್ಲಿಸಬೇಕು ಎನ್ನಲಾಯಿತು. ಅಮೇಲೆ ಈ ವಿಷಯದಲ್ಲಿ ಏನೂ ನಡೆದಿಲ್ಲ.

ಇಂತಹ "ನ್ಯಾಯಾಂಗ ನುಣಿಚಿಕೆ" ಒಂದು ತಪ್ಪು ಮತ್ತು ಹಾನಿಕಾರಕ ಯೋಜನೆಯನ್ನು ಬಳಸಿಕೊಂಡು ಪಾರಾಗಲು ಬಿಟ್ಟಿತು. ಚುನಾವಣಾ ಬಾಂಡು ಯೋಜನೆ ಭಾರತದಲ್ಲಿ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಗೆ ಒಂದು ಅತ್ಯಂತ ಅಪಾಯಕಾರಿ ಕ್ರಮ ಎಂದು ಖಂಡಿತಾ ವಾದಿಸಬಹುದು. ಅದನ್ನು ಎಷ್ಟು ಬೇಗ ರದ್ದು ಮಾಡಲಾಗುತ್ತೋ ಭಾರತದಲ್ಲಿ ಪ್ರಜಾಪ್ರಭುತ್ವಕ್ಕೆ ಅಷ್ಟು ಒಳ್ಳೆಯದು.

ಸುಪ್ರಿಂ ಕೋರ್ಟ್ ವಿಫಲತೆಗಳು..

ಪುಟ 7 ರಿಂದ

ಒಂದು ತಪ್ಪು ಕ್ರಮ ಅಥವ ಧೋರಣೆ ವಹಿಸಿಯೂ ಪಾರಾಗಲು ಬಿಡುತ್ತದೆ. ಚುನಾವಣಾ ಬಾಂಡ್‌ಗಳ ವಿರುದ್ಧ ಪ್ರಕರಣ ಈ ನ್ಯಾಯಾಂಗ ನುಣಿಚಿಕೆಗೆ ಒಂದು ಉದಾಹರಣೆ. ಇಲ್ಲಿಯೂ, ಮುಖ್ಯ ನ್ಯಾಯಮೂರ್ತಿ ಗೊಗೊಯ್ ನೇತೃತ್ವದ ಪೀಠ ಚುನಾವಣೆಗಳ ಮೊದಲು ವಿಚಾರಣೆ ನಡೆಸಿತು. ಆಳುವ ಪಕ್ಷ ಅನಾಮಧೇಯವಾಗಿ ನಿಧಿ ಸಂಗ್ರಹಕ್ಕೆ ಈ ಚುನಾವಣಾ ಬಾಂಡುಗಳನ್ನು ಬಳಸಿಕೊಳ್ಳುತ್ತಿದ್ದುದು ಮತ್ತು ಸಲ್ಲದ ಪ್ರಯೋಜನ ಪಡೆಯುತ್ತಿದ್ದದ್ದು ಒಂದು ತುರ್ತು ವಿಷಯವೇ ಆಗಿತ್ತು. ಆದರೆ ವಾದ-ಪ್ರತಿವಾದಗಳನ್ನು ಕೇಳಿದ ಮೇಲೆ ಅದು ರಾಜಕೀಯ ಪಕ್ಷಗಳು ಮೇ 30ರ ಒಳಗೆ, ಅಂದರೆ ಚುನಾವಣೆಗಳು ಮುಗಿದ ಮೇಲೆ, ಸೀಲಾದ ಕವರಿನಲ್ಲಿ ನಿಧಿ ಸಂಗ್ರಹದ ವಿವರಗಳನ್ನು ಸಲ್ಲಿಸಬೇಕು ಎಂದು ಹೇಳಿತು. ಆನಂತರ ಈ ಕೇಸಿನಲ್ಲಿ ಏನೂ ಆಗಿಲ್ಲ. ಇದುವರೆಗೆ 6000 ಕೋಟಿ ರೂ.ಗಳಿಗಿಂತಲೂ ಹೆಚ್ಚಿನ ಮೌಲ್ಯದ ಚುನಾವಣಾ ಬಾಂಡುಗಳನ್ನು ನೀಡಲಾಗಿದೆ.

ಕಾರ್ಯಾಂಗಕ್ಕೆ ತಲೆಬಾಗುವುದು ಮತ್ತು ಅದಕ್ಕೆ ಎದುರಾಗಿ ನಿಲ್ಲಲು ನಿರಾಕರಿಸುವುದು ಮುಂಬರುವ ದಿನಗಳಲ್ಲಿ ನ್ಯಾಯಾಂಗಕ್ಕೆ ಅನಿಷ್ಟಕಾರಿಯಾಗಿದೆ.

ಸುಪ್ರಿಂ ಕೋರ್ಟಿನ ಐವರು ನ್ಯಾಯಾಧೀಶರ ಪೀಠದ ಅಯೋಧ್ಯಾ ತೀರ್ಪು ಸಂವಿಧಾನದಲ್ಲಿ ಪ್ರತಿಷ್ಠಾಪಿಸಿರುವ ಜಾತ್ಯತೀತ ನೀತಿಯ ಪರವಾಗಿ ನಿಲ್ಲುವಲ್ಲಿನ ವಿಫಲತೆಯನ್ನು ಪ್ರಕಟಗೊಳಿಸಿದೆ. ಒಂದು ಆಸ್ತಿ ವಿವಾದದ ನ್ಯಾಯನಿರ್ಣಯ ಮಾಡುವಲ್ಲಿ ಸಂವಿಧಾನಿಕ ಮೌಲ್ಯಗಳನ್ನು ಹಾಗೂ ಜಾತ್ಯತೀತ ಆಧಾರವನ್ನು ಎತ್ತಿ ಹಿಡಿಯುವ ಬದ್ಧತೆಯನ್ನು ಸಾರುತ್ತಲೇ, ಈ ತೀರ್ಪಿನ ಒಟ್ಟು ಫಲಿತಾಂಶವೆಂದರೆ, ಒಂದು ಪಕ್ಷದ ನಂಬಿಕೆ ಮತ್ತು ವಿಶ್ವಾಸಕ್ಕೆ ಅಗ್ರಸ್ಥಾನವನ್ನು ಕೊಟ್ಟಿರುವುದು. ಬಹುಸಂಖ್ಯಾತವಾದದೊಂದಿಗೆ ಈ ರಾಜಿ ಗಂಭೀರ ಪರಿಣಾಮಗಳನ್ನು ಬೀರಲಿದೆ, ಪ್ರಭುತ್ವದ ಜಾತ್ಯತೀತ ಆಧಾರಕ್ಕೆ ಇನ್ನಷ್ಟು ಸವಾಲೊಡ್ಡಲು ಹಿಂದುತ್ವ ಶಕ್ತಿಗಳಿಗೆ ಇದು ಧೈರ್ಯ ತುಂಬುತ್ತದೆ.

ಐವರು ಸದಸ್ಯರ ಸಂವಿಧಾನ ಪೀಠದ ಶಬರಿಮಲೆ ತೀರ್ಪಿನ ಮರು ಪರಾಮರ್ಶೆಯ ವಿಷಯದಲ್ಲೂ ಇಂತಹುದೇ ಹಿಂಜರಿಕೆ ಕಾಣಬಂದಿದೆ. ಪರಾಮರ್ಶೆ ಅರ್ಜಿಗಳ ವಿಚಾರಣೆಯಲ್ಲಿ ಸಾಮಾನ್ಯವಾಗಿ ಅನುಸರಿಸುವ ವಿಧಿವಿಧಾನಗಳಿಂದ ಹೊರತಾಗಿ, ಬಹುಮತದ ತೀರ್ಪು ಇತರ ಪೀಠಗಳು ವಿಚಾರಣೆ ನಡೆಸುತ್ತಿರುವ ವಿಷಯಗಳಿಗೆ ಸಂಬಂಧಪಟ್ಟ ಸಾಮಾನ್ಯ ಪ್ರಶ್ನೆಗಳನ್ನೆಲ್ಲ ಸೇರಿಸಿ ಅವನ್ನು ಒಂದು ವಿಸ್ತರಿತ ಏಳು ಸದಸ್ಯರ ಪೀಠಕ್ಕೆ ಒಪ್ಪಿಸಿದೆ ಮತ್ತು ಮರು ಪರಾಮರ್ಶೆ ಅರ್ಜಿಗಳನ್ನು ಇತ್ಯರ್ಥಮಾಡದೆ ಇಟ್ಟಿದೆ. ಈ ಪೀಠ ಈ ತೀರ್ಪಿಗೆ ಸಂಬಂಧಪಟ್ಟಂತೆ ಹೊಸದೇನಾದರೂ ಮತ್ತು ಮಹತ್ವದ ಸಾಕ್ಷ್ಯವನ್ನು ಕಂಡು ಹಿಡಿಯಲಾಗಿದೆಯೇ, ಅಥವ ತೀರ್ಪಿನಲ್ಲಿ ಯಾವುದಾದರೂ ತಪ್ಪಿನ ದಾಖಲೆ ಇದೆಯೇ ಎಂದಷ್ಟೇ ಪರಿಶೀಲಿಸಬೇಕಾಗಿತ್ತು. ಹಾಗೆ ಮಾಡುವ ಬದಲು, ಮೂವರು ನ್ಯಾಯಾಧೀಶರ ಬಹುಮತ ಸುತ್ತುಬಳಸಿನ ದಾರಿಯಲ್ಲಿ ಐವರು ಸದಸ್ಯರ ಸಂವಿಧಾನ ಪೀಠ ಶಬರಿಮಲೆಯಲ್ಲಿ ಮಹಿಳೆಯರ ಪ್ರವೇಶವನ್ನು ಕುರಿತಂತೆ ನೀಡಿದ ಚಾರಿತ್ರಿಕ ತೀರ್ಪನ್ನು ಮತ್ತೆ ತೆರೆಯಲು ಪ್ರಯತ್ನಿಸಿದೆ. ಇಲ್ಲಿಯೂ ಕೂಡ, ಈ ಅಸಾಮಾನ್ಯ ವಿಧಾನದ ಉದ್ದೇಶ ಮಹಿಳೆಯರ ಹಕ್ಕುಗಳಿಗಿಂತ ನಂಬಿಕೆಗೆ ಆದ್ಯತೆ ನೀಡುವುದೇ ಆಗಿದೆ.

ಸುಪ್ರಿಂ ಕೋರ್ಟಿನ ಈ ಪ್ರಸಕ್ತ ವಿಫಲತೆಗಳು ಒಬ್ಬ ಮುಖ್ಯ ನ್ಯಾಯಾಧೀಶರ, ಅಥವ ಒಂದಿಷ್ಟು ನ್ಯಾಯಾಧೀಶರುಗಳ ದಾರಿಗೆಟ್ಟ ವರ್ತನೆಯ ಫಲಿತಾಂಶಗಳಲ್ಲ. ಇದು ಸರಕಾರದ ಸತತ ಪ್ರಯತ್ನಗಳ ಒಂದು ಫಲ. ಕಳೆದ ಆರು ವರ್ಷಗಳಲ್ಲಿ ಮೋದಿ ಸರಕಾರ ನ್ಯಾಯಾಧೀಶರುಗಳ ನೇಮಕಗಳು ಮತ್ತು ವಿವಿಧ ಹೈಕೋರ್ಟ್‌ಗಳ ಮುಖ್ಯ ನ್ಯಾಯಾಧೀಶರುಗಳ ಹುದ್ದೆಗೆ ಬಡ್ತಿಯ ವಿಷಯಗಳಲ್ಲಿ ಹಸ್ತಕ್ಷೇಪ ಮಾಡುತ್ತಲೇ ಬಂದಿದೆ. ಇದರಲ್ಲಿ ಇತ್ತೀಚಿನದೆಂದರೆ ನ್ಯಾಯಮೂರ್ತಿ ಅಕಿಲ್ ಖುರೇಶಿಯವರು ಮಧ್ಯಪ್ರದೇಶ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾಗಿ ನೇಮಕಗೊಳ್ಳದಂತೆ ತಡೆದು, ಬದಲಾಗಿ ಅವರನ್ನು ತ್ರಿಪುರಾ ಹೈಕೋರ್ಟಿಗೆ ಕಳಿಸಿರುವುದು.

ಒಂದು ವಿಸ್ತೃತ ಮಟ್ಟದಲ್ಲಿ, ಪ್ರಭುತ್ವದ ಎಲ್ಲ ಸಂಸ್ಥೆಗಳಲ್ಲಿ ಹಿಂದುತ್ವದ ನುಸುಳಿಕೆ ನಡೆಯುತ್ತಿದೆ. ಬೇಸರದ ಸಂಗತಿಯೆಂದರೆ, ನ್ಯಾಯಾಂಗವೂ ಇದರಿಂದ ಹೊರತಾಗಿಲ್ಲ.

ಸಿಪಿಐ(ಎಂ) ಪೊಲಿಟ್‌ಬ್ಯುರೊ ಕರೆ

ಪುಟ 6 ರಿಂದ

ವ್ಯವಸ್ಥೆಯನ್ನು ಸುಧಾರಿಸುವುದು ಹೇಗೆ ಎಂಬುದಕ್ಕೆ ಉತ್ತರ ಜನಗಳ ಕೊಳ್ಳುವ ಸಾಮರ್ಥ್ಯವನ್ನು ಹೆಚ್ಚಿಸುವುದರಲ್ಲಿ ಅಡಗಿದೆ. ಈ ಮೂಲಕ ಆಂತರಿಕ ಬೇಡಿಕೆಗಳ ಮಟ್ಟ ಏರುತ್ತದೆ, ಅದು ಮುಚ್ಚಿದ ಕಾರ್ಖಾನೆಗಳ ಪುನರುಜ್ಜೀವನಕ್ಕೆ ಹಾದಿ ಮಾಡಿಕೊಡುತ್ತದೆ. ಮೋದಿ ಸರಕಾರ ಕಾರ್ಪೊರೇಟ್‌ಗಳಿಗೆ ಎರಡು ಕಂತುಗಳಲ್ಲಿ 2.15 ಲಕ್ಷ ಕೋಟಿ ರೂ. ಗಳಷ್ಟು ತೆರಿಗೆ ಕಡಿತಗಳನ್ನು ಮತ್ತು ಇತರ ಪ್ರಯೋಜನಗಳನ್ನು ಪ್ರಕಟಿಸಿದೆ. ಆ ಮೂಲಕ ಅವರು ತಮ್ಮ ಹೂಡಿಕೆಗಳನ್ನು ಹೆಚ್ಚಿಸುತ್ತಾರೆ ಎಂಬ ನಿರೀಕ್ಷೆ ಇಟ್ಟುಕೊಂಡಿದೆ. ಆದರೆ ಹೆಚ್ಚಿನ ಹೂಡಿಕೆಯಿಂದಲೇ ಅರ್ಥವ್ಯವಸ್ಥೆ ಪುನರುಜ್ಜೀವನ ಸಾಧ್ಯವಿಲ್ಲ, ಇಂತಹ ಹೊಸ ಹೂಡಿಕೆಗಳು ಉತ್ಪಾದಿಸಿದುದನ್ನು ಕೊಳ್ಳುವ ಸಾಮರ್ಥ್ಯ ಜನಗಳಲ್ಲಿ ಹೆಚ್ಚದೆ ಅದು ಸಾಧ್ಯವಿಲ್ಲ. ಈ ಖರೀದಿ ಸಾಮರ್ಥ್ಯವೇ ಸರಕಾರದ "ಪರಿಹಾರಗಳು" ಎಂಬುದರಿಂದಾಗಿ ಮತ್ತಷ್ಟು ಹದಗೆಡುತ್ತವೆ.

ಇದರ ಬದಲು, ಈ 2.15ಲಕ್ಷ ಕೋಟಿ ರೂ.ಗಳನ್ನು ನಮ್ಮ ಬಹು ಅಗತ್ಯವಿರುವ ಸಾಮಾಜಿಕ, ಆರ್ಥಿಕ ಮೂಲರಚನೆಗಳನ್ನು ಕಟ್ಟುವ ಸಾರ್ವಜನಿಕ ಹೂಡಿಕೆಗಳನ್ನು ವಿಸ್ತರಿಸಲು ಬಳಸಿದ್ದರೆ, ಇದು ನಮ್ಮ ಲಕ್ಷಾಂತರ ಹತಾಶ ಯುವಜನರಿಗೆ ಹೊಸ ಉದ್ಯೋಗಗಳನ್ನು ನಿರ್ಮಿಸುತ್ತಿತ್ತು. ಅವರು ತಮ್ಮ ಆದಾಯಗಳನ್ನು ಖರ್ಚು ಮಾಡಲಾರಂಭಿಸಿದರೆಂದರೆ, ಆಂತರಿಕ ಬೇಡಿಕೆಗಳು ಏರುತ್ತಿದ್ದವು, ಇವು, ಅರ್ಥವ್ಯವಸ್ಥೆ ಸುಧಾರಿಸಿಕೊಳ್ಳುವ ಪ್ರಕ್ರಿಯೆಗೆ ಒತ್ತು ಕೊಡುತ್ತಿತ್ತು. ಕ್ರೂರ ಸಂಗತಿಯೆಂದರೆ, ಸರಕಾರ ಮನರೇಗದ ಅಡಿಯಲ್ಲಿ ಕೆಲಸಕ್ಕೆ ಅರ್ಜಿ ಹಾಕಿದ 13 ಕೋಟಿ ಜನಗಳಲ್ಲಿ ಎರಡು ಲಕ್ಷ ಜನಗಳನ್ನು ಕೆಲಸ ಕೊಡದೆ ಹಿಂದಕ್ಕೆ ಕಳಿಸಿದೆ.

ಆದರೆ ಈ ಮೋದಿ ಸರಕಾರ ವಿದೇಶಿ ಮತ್ತು ದೇಶೀ ಕಾರ್ಪೊರೇಟ್‌ಗಳಿಗೆ ಅವರ ಲಾಭಗಳನ್ನು ಗರಿಷ್ಟ ಮಟ್ಟಗಳಿಗೆ ಏರಿಸಿಕೊಳ್ಳಲು ಹೆಚ್ಚಿನ ದಾರಿಗಳನ್ನು ಕಲ್ಪಿಸಿಕೊಡುವ ಆಕಾಂಕ್ಷೆಯಿಂದ ಅವರಿಗೆ ರಿಯಾಯ್ತಿಗಳನ್ನು ಒದಗಿಸುತ್ತಿದ್ದರೆ, ನಮ್ಮ ಬಹುಪಾಲು ಜನಗಳನ್ನು ಇನ್ನಷ್ಟು ಕುಗ್ಗಿಸಿ ಬಿಡುವ ದುರ್ದೆಸೆಯತ್ತ ತಳ್ಳುತ್ತಿದೆ.

ರಾಜ್ಯ ವಿಧಾನಸಭಾ ಚುನಾವಣೆಗಳು- ಬಿಜೆಪಿ ಅಬ್ಬರದ ಪ್ರಭಾವ ಕುಂದುತ್ತಿರುವದನ್ನು ತೋರಿಸಿದೆ

ಮಹಾರಾಷ್ಟ್ರ ಮತ್ತು ಹರ್ಯಾಣಾ ವಿಧಾನಸಭಾ ಚುನಾವಣೆಗಳು ಮತ್ತು ಗುಜರಾತ, ಉತ್ತರಪ್ರದೇಶ, ಬಿಹಾರ, ರಾಜಸ್ತಾನ, ಕೇರಳ ಮತ್ತು ಅಸ್ಸಾಂನ ಂತಹ ವಿವಿಧ ರಾಜ್ಯಗಳಲ್ಲಿ ಉಪಚುನಾವಣೆಗಳ ಫಲಿತಾಂಶಗಳು ಬಿಜೆಪಿ ತಿದಿಯೂದುತ್ತಿರುವ ಕೋಮುವಾದಿ ರಾಷ್ಟ್ರೀಯವಾದಿ ಅಬ್ಬರದ ಭಾವನಾತ್ಮಕ ಅಪಪ್ರಚಾರದ ಪ್ರಭಾವ ಕುಂದುತ್ತಿದೆ ಎಂಬುದನ್ನು ತೋರಿಸಿದೆ.

ಜನಗಳ ಜೀವನಾಧಾರಗಳ ಮೇಲೆ ಆರ್ಥಿಕ ಹಿಂಜರಿತದಿಂದಾಗಿ ಹೆಚ್ಚುತ್ತಿರುವ ಹೊರೆಗಳ ಗಂಭೀರ ವಾಸ್ತವತೆ ಮುನ್ನೆಲೆಗೆ ಬರುತ್ತಿದೆ. ಇದು ಜನಗಳ ಹೆಚ್ಚುತ್ತಿರುವ ಆರ್ಥಿಕ ದುರ್ದೆಸೆಗಳ ವಿರುದ್ಧ ಜನಗಳ ಐಕ್ಯ ಹೋರಾಟಗಳನ್ನು ತೀವ್ರಗೊಳಿಸಬೇಕಾದ ಅಗತ್ಯವನ್ನು ಎತ್ತಿ ತೋರಿಸುತ್ತದೆ.

ಝಾರ್ಖಂಡ್: ಝಾರ್ಖಂಡ್‌ನಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಗಳಲ್ಲಿ ಸಿಪಿಐ(ಎಂ) ಹತ್ತು ಸ್ಥಾನಗಳಲ್ಲಿ ಸ್ಪರ್ಧಿಸುತ್ತಿದೆ. ಜನಗಳ ಕಲ್ಯಾಣವನ್ನು ಉತ್ತಮಪಡಿಸುವುದಕ್ಕಾಗಿ ರಾಜ್ಯದಲ್ಲಿನ ಎಡಪಕ್ಷಗಳ ನಡುವೆ ತಿಳುವಳಿಕೆ ಬೆಸೆಯಲು ಒಂದುಗೂಡಬೇಕು ಎಂದು ಎಲ್ಲ ಎಡಪಕ್ಷಗಳಿಗೆ ಸಿಪಿಐ(ಎಂ) ಮನವಿ ಮಾಡಿದೆ.

ಹೊಸ ಶಿಕ್ಷಣ ಧೋರಣೆ

ಈ ಮೋದಿ ಸರಕಾರ ನಮ್ಮ ದೇಶದ ಶಿಕ್ಷಣ ಧೋರಣೆಯ ವಿವಿಧ ಅಂಶಗಳಲ್ಲಿ ಪ್ರಸ್ತಾವಿಸಿರುವ ತೀವ್ರ ಬದಲಾವಣೆಗಳಿಗೆ ಸಿಪಿಐ(ಎಂ)ನ ವಿರೋಧವಿದೆ. ಈಗಾಗಲೇ ಈ ಕುರಿತಂತೆ ತನ್ನ ತರ್ಕಬದ್ಧ ಅಭಿಪ್ರಾಯವನ್ನು ಸಾರ್ವಜನಿಕರ ಮುಂದೆ ಇಡಲಾಗಿದೆ. ಈ ಹೊಸ ಧೋರಣೆ ಭಾರತದ ಭವಿಷ್ಯಕ್ಕೆ ಮಾರಕವಾದ ಮತ್ತು ಶಿಕ್ಷಣವನ್ನು ಜನಗಳ, ಅದರಲ್ಲೂ ನಮ್ಮ ಮಕ್ಕಳ ಒಂದು ಹಕ್ಕು ಆಗಿಸುವ ಬದಲು ಕೆಲವರ ಒಂದು ವಿಶೇಷ ಸೌಲಭ್ಯವಾಗಿಸುವ ಪ್ರಸ್ತಾವಗಳನ್ನು ಹೊಂದಿದೆ.

ಇದು ನಮ್ಮ ದೇಶದ ಹಿತಗಳಿಗೆ ಮತ್ತು ನಮ್ಮ ಜನಗಳ ಭವಿಷ್ಯಕ್ಕೆ ಸಂಪೂರ್ಣವಾಗಿ ವಿರುದ್ಧವಾದ ಧೋರಣೆ ಎಂದಿರುವ ಪೊಲಿಟ್‌ಬ್ಯುರೊ ಈ ಶಿಕ್ಷಣ ಧೋರಣೆಗೆ ವಿರುದ್ಧವಾಗಿರುವ ಎಲ್ಲ ಪ್ರಜಾಪ್ರಭುತ್ವವಾದಿ ಜನವಿಭಾಗಗಳನ್ನು ಒಂದು ರಾಷ್ಟ್ರೀಯ ಪ್ರಚಾರಾಂದೋಲನದಲ್ಲಿ ಮತ್ತು ಸರಕಾರ ಈ ಧೋರಣೆಯನ್ನು ಹಿಂತೆಗೆದುಕೊಳ್ಳುವಂತೆ ಬಲವಂತಕ್ಕೊಳಪಡಿಸುವ ಒಂದು ಪ್ರತಿಭಟನಾ ಚಳುವಳಿಯಲ್ಲಿ ಒಟ್ಟುಗೂಡಿಸಲು ಸರ್ವ ಪ್ರಯತ್ನಗಳನ್ನು ಮಾಡಲಾಗುವುದು ಎಂದಿದೆ.

ಬೊಲಿವಿಯಾದಲ್ಲಿ ಬಲಪಂಥೀಯ ಕ್ಷಿಪ್ರಕ್ರಾಂತಿ

ಬೊಲಿವಿಯಾದಲ್ಲಿ ಪ್ರಜಾಸತ್ತಾತ್ಮಕವಾಗಿ ಚುನಾಯಿತವಾದ ಆ ದೇಶದ ಮೊದಲ ಮೂಲನಿವಾಸಿ ಅಧ್ಯಕ್ಷ ಇವೊ ಮೊರಲೆಸ್ ಸರಕಾರವನ್ನು ಪದಚ್ಯುತಗೊಳಿಸಿರುವ ಬಲಪಂಥೀಯ ಕ್ಷಿಪ್ರಕ್ರಾಂತಿಯನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡಿಸಿದೆ.

ಹಲವು ಲ್ಯಾಟಿನ್ ಅಮೆರಿಕಾ ದೇಶಗಳ ಆಂತರಿಕ ವ್ಯವಹಾರಗಳಲ್ಲಿ ಅಮೆರಿಕನ್ ಸಾಮ್ರಾಜ್ಯಶಾಹಿಯ ನೇರ ಮತ್ತು ಭಂಡ ಹಸ್ತಕ್ಷೇಪ ವಿವಿಧ ದೇಶಗಳಲ್ಲಿ ಜನಗಳಿಂದ ಪ್ರಜಾಸತ್ತಾತ್ಮಕವಾಗಿ ಚುನಾಯಿತವಾದ ಎಡ ಒಲವಿನ ಸರಕಾರಗಳನ್ನು ಉರುಳಿಸಲು ಬಲಪಂಥೀಯ ಶಕ್ತಿಗಳಲ್ಲಿ ಧೈರ್ಯ ತುಂಬಿದೆ. ಬ್ರೆಝಿಲ್‌ನಲ್ಲಿ ಸ್ವಯಂ ಘೋಷಿತ ಫ್ಯಾಸಿಸ್ಟ್ ಬೊಲ್ಸನಾರೊ ತುಸು ಎಡಪಂಥದತ್ತ ವಾಲಿದ್ದ ಸರಕಾರವನ್ನು ಬಲಪಂಥೀಯ ಪ್ರತಿಗಾಮಿ ಅಸ್ಥಿರತೆ ಉಂಟು ಮಾಡಿ ಮತ್ತು ಮಾಜಿ ಅಧ್ಯಕ್ಷರಾದ ಲೂಲ ಮತ್ತು ದಿಲ್ಮಾ ರೌಸೆಫ್‌ರನ್ನು ಬಂಧಿಸಿದ ನಂತರ ಚುನಾಯಿತರಾದರು. ಮೋದಿ ಸರಕಾರ ಈತನನ್ನು ಭಾರತದ 2020ರ ಗಣರಾಜ್ಯ ದಿನದ ಪರೇಡಿಗೆ ಮುಖ್ಯ ಅತಿಥಿಯಾಗಿ ಆಹ್ವಾನಿಸಿರುವುದು ನಿರೀಕ್ಷಿತವೇ ಆಗಿದೆ.

ಅಮೆರಿಕಾ ಸಾಮ್ರಾಜ್ಯಶಾಹಿ ವೆನೆಝುವೆಲಾದಲ್ಲಿ ಭಂಡತನದಿಂದ ಹಸ್ತಕ್ಷೇಪ ಮಾಡುವುದನ್ನು ಮುಂದುವರೆಸಿದೆ. ಅದು ಮದುರೊ ಸರಕಾರದ ಮೇಲೆ ಗುರಿಯಿಟ್ಟಿದೆ, ಮದುರೊ ಸರಕಾರವನ್ನು ಅಸ್ಥಿರಗೊಳಿಸಲು ನೇರವಾಗಿ ನೆರವಾಗುತ್ತಿದೆ ಮತ್ತು ಹಣಕಾಸನ್ನೂ ಒದಗಿಸುತ್ತಿದೆ.

ಆದರೆ ಇಂತಹ ಬಲಪಂಥೀಯ ದಾಳಿಗಳಿಗೆ ಪ್ರತಿರೋಧವೂ ಅರ್ಜೆಂಟಿನಾ, ಚಿಲಿ ಮುಂತಾದ ದೇಶಗಳಲ್ಲಿ ಕಾಣ ಬರುತ್ತಿದೆ.

ಈ ಖಂಡದಲ್ಲಿ ರಾಜಕೀಯ ಬಲಪಂಥ ಮತ್ತು ರಾಜಕೀಯ ಎಡಪಂಥದ ನಡುವಿನ ಹೋರಾಟ ರಾಜಕಾರಣದ ಭವಿಷ್ಯದ ದಾರಿಯನ್ನು ರೂಪಿಸಲಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಅಭಿಪ್ರಾಯಪಟ್ಟಿದೆ.

“ಸ್ಪರ್ಧಾತ್ಮಕ ಬೆಲೆ”ಗಳು ಎಂಬ ದಾರಿ ತಪ್ಪಿಸುವ ತರ್ಕ

ಸ್ಥಳೀಯ ದುಬಾರಿ ಉತ್ಪಾದಕರನ್ನು ಸಹಿಸಿಕೊಳ್ಳುವ ಸಲುವಾಗಿ ಅಗ್ಗದ ಆಮದು ವಸ್ತುಗಳನ್ನು ತಡೆಗಟ್ಟುವುದರಿಂದಾಗಿ ಬಳಕೆದಾರರು ದುಬಾರಿ ಬೆಲೆ ತೆರುವಂತೆ ಮಾಡುವುದು ಸರಿಯೇ ಎಂಬ ಪ್ರಶ್ನೆಯನ್ನು ಆರ್.ಸಿ.ಇ.ಪಿ. ಒಪ್ಪಂದಕ್ಕೆ ಮೋದಿ ಸರಕಾರ ಸಹಿ ಹಾಕದಂತೆ ಮಾಡಿರುವ ಹಿನ್ನೆಲೆಯಲ್ಲಿ ಎತ್ತಲಾಗಿದೆ. ನಿಜವಾಗಿ ಈ ಸ್ಪರ್ಧಾತ್ಮಕ ಬೆಲೆಗಳು ಎಂದರೇನು? ನಿರುದ್ಯೋಗಕ್ಕೆ ಇದರ ಕೊಡುಗೆ ಇಲ್ಲವೇ? ನಿರುದ್ಯೋಗ ಉಂಟಾಗಲು ಒಂದು ದೊಡ್ಡ ಕಾರಣವೆಂದರೆ, ಕೆಲವರು ತಮ್ಮ ಗುಂಪಿನ ಇತರರು ಏನನ್ನು ಉತ್ಪಾದಿಸುತ್ತಾರೊ ಅದನ್ನು ಕೊಳ್ಳಲು ಇಷ್ಟಪಡದೆ, ತಮ್ಮ ಗುಂಪಿನ ಹೊರಗಿನವರು ಉತ್ಪಾದಿಸುವುದನ್ನು ಕೊಳ್ಳಲು, ಅವರು ತಮ್ಮ ಗುಂಪಿನ ಯಾವ ಉತ್ಪಾದನೆಯನ್ನು ಕೊಳ್ಳದಿದ್ದರೂ ಸಹ, ಬಯಸುತ್ತಾರೆ. ಇಂತಹ ನಿರುದ್ಯೋಗದ ಸೃಷ್ಟಿಯನ್ನು ತಡೆಗಟ್ಟಲೇ ಬೇಕು ಎನ್ನುತ್ತಾರೆ ಅರ್ಥಶಾಸ್ತ್ರಜ್ಞ ಪ್ರೊ. ಪ್ರಭಾತ್ ಪಟ್ನಾಯಕ್



ಅನು: ಕೆ.ಎಂ.ನಾಗರಾಜ್

ಏಷ್ಯಾ–ಶಾಂತ ಸಾಗರದ ಹದಿನಾರು ದೇಶಗಳ ನಡುವಿನ ಆರ್.ಸಿ.ಇ.ಪಿ. ಮುಕ್ತ ವ್ಯಾಪಾರ ಒಪ್ಪಂದಕ್ಕೆ ಭಾರತವು ನವೆಂಬರ್ ನಾಲ್ಕರಂದು ಬ್ಯಾಂಕಾಕ್‌ನಲ್ಲಿ ಸಹಿ ಹಾಕುವ ಕಾರ್ಯಕ್ರಮವಿತ್ತು. ಈ ಒಪ್ಪಂದಕ್ಕೆ ವಿರೋಧ ವ್ಯಾಪಕವಾಗಿ ವ್ಯಕ್ತವಾಗಿತ್ತು. ಸಾರ್ವಜನಿಕ ಒತ್ತಾಯಕ್ಕೆ ಮಣಿದ ಮೋದಿ ಸರ್ಕಾರವು ಪ್ರಾದೇಶಿಕ ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದದಿಂದ ಹಿಂದೆ ಸರಿಯಿತು. ನಂತರ, ಒಂದು ವಾದ ವಿವಾದ ಎದ್ದಿದೆ: ಭಾರತ ಉತ್ಪಾದಿಸುವ ವಸ್ತುಗಳು ಬೇರೆ ದೇಶಗಳಿಗಿಂತ ದುಬಾರಿಯಾಗಿರುವ ಕಾರಣದಿಂದ, ನಮ್ಮ ದೇಶದ ಉತ್ಪಾದಕರು ಪ್ರಾದೇಶಿಕ ಸಮಗ್ರ ಆರ್ಥಿಕ ಒಪ್ಪಂದವನ್ನು ವಿರೋಧಿಸಿದರು. ಹಾಗಾದರೆ, ಈ ದುಬಾರಿ ವಸ್ತುಗಳನ್ನು ಭಾರತವು ಯಾಕೆ ಉತ್ಪಾದಿಸಬೇಕು ಎಂಬ ಪ್ರಶ್ನೆಯನ್ನು ಕೆಲವರು ಎತ್ತಿದ್ದಾರೆ. ಅವರು ಇನ್ನೊಂದು ಪ್ರಶ್ನೆಯೊಂದಿಗೆ ತಮ್ಮ ವಾದವನ್ನು ಹೀಗೆ ಪುಷ್ಟೀಕರಿಸುತ್ತಾರೆ: ದೇಶವು ಇಂತಹ ಸ್ಪರ್ಧಾತ್ಮಕವಲ್ಲದ ಉತ್ಪಾದಕರನ್ನು ರಕ್ಷಿಸುವ ಮೂಲಕ, ಬಳಕೆದಾರರಿಗೆ ಅಗ್ಗದ ಆಮದು ವಸ್ತುಗಳು ದೊರಕದಂತೆ ಮಾಡಿ ಅವರನ್ನು ದಂಡಿಸುತ್ತಿದೆ, ಇದು ಅನ್ಯಾಯವಲ್ಲವೆ?

ಮೊದಲನೆಯ ಪ್ರಶ್ನೆಗೆ ತಕ್ಷಣದ ಮತ್ತು ಸಹಜ ಉತ್ತರವೆಂದರೆ, ಯಾವುದೇ ಒಂದು ವಸ್ತುವಿನ ಬೆಲೆಯು ಸ್ಪರ್ಧಾತ್ಮಕವಾಗಿ, ಅಗ್ಗವಾಗಿ ಕಾಣುವುದು, ಸಾಮಾನ್ಯವಾಗಿ, ವಿದೇಶಿ ಮಾರುಕಟ್ಟೆಗಳನ್ನು ತಮ್ಮ ಹಿಡಿತಕ್ಕೆ ಪಡೆಯುವ ಉದ್ದೇಶದಿಂದ ತಮ್ಮ ಕರೆನ್ಸಿಯನ್ನು ಅಪಮೌಲ್ಯಕ್ಕೊಳಪಡಿಸುವ ಮೂಲಕ ಅಥವಾ ಸರ್ಕಾರೀ ಸಬ್ಸಿಡಿಯೊಂದಿಗೆ ಒಂದು ಮುನ್ನುಗ್ಗುವ ವ್ಯಾಪಾರೀ ಮನೋಭಾವದ ಕ್ರಮವನ್ನು ಅಳವಡಿಸಿಕೊಂಡಿರುವದನ್ನು ಬಿಂಬಿಸುತ್ತದೆ. ಉದಾಹರಣೆಗೆ, ಅಮೇರಿಕಾ ಮತ್ತು ಯೂರೋಪಿನ ದೇಶಗಳು ರೈತರಿಗೆ ಅಪಾರ ಸಬ್ಸಿಡಿ ಒದಗಿಸುವುದರಿಂದ, ಆ ದೇಶಗಳ ಕೃಷಿ ಉತ್ಪಾದನೆಗಳು ಅಗ್ಗವಾಗಿ ಕಾಣುತ್ತವೆ. ಅದೇ ರೀತಿಯಲ್ಲಿ, ತಯಾರಿಕಾ ವಲಯದ ಉತ್ಪನ್ನಗಳಿಗೂ ಸಹ ಅನೇಕ ಪೂರ್ವ ಏಷ್ಯಾದ ದೇಶಗಳು (ವಿಶೇಷವಾಗಿ, ಆರ್.ಸಿ.ಇ.ಪಿ. ಸದಸ್ಯ ದೇಶಗಳು) ಸಬ್ಸಿಡಿ ಒದಗಿಸುತ್ತವೆ. ಹಾಗಾಗಿ, ಸ್ಪರ್ಧಾತ್ಮಕ ಬೆಲೆ ಎಂಬ ಪರಿಕಲ್ಪನೆಯು ನಮ್ಮನ್ನು ದಾರಿ ತಪ್ಪಿಸುತ್ತದೆ, ಏಕೆಂದರೆ. ಸ್ಪರ್ಧಾತ್ಮಕ ಬೆಲೆಯಲ್ಲಿ ಹಣಕಾಸಿನ ನೆರವು, ಸಬ್ಸಿಡಿ ಮತ್ತು ವಿದೇಶಿ ವಿನಿಮಯ ದರ ನೀತಿಗಳು ಧಾರಾಳವಾಗಿ ಅಡಗಿಕೊಂಡಿವೆ. ಹಾಗಾಗಿ, ಮಾರುಕಟ್ಟೆಯಲ್ಲಿ ಆಮದು ವಸ್ತುಗಳು ಅಗ್ಗದ ಬೆಲೆಯಲ್ಲಿ ಸಿಗುತ್ತವೆ. ಇಂತಹ ಪರಿಸ್ಥಿತಿಯಲ್ಲಿ, ವಿದೇಶಿ ಉತ್ಪಾದಕರೊಂದಿಗೆ ಭಾರತದ ಉತ್ಪಾದಕರನ್ನು ಪೈಪೋಟಿಗೆ ಇಳಿಸಿದರೆ ನಮ್ಮ ಉತ್ಪಾದಕರಿಗೆ ಅಸಮಾಧಾನ ಉಂಟಾಗುವುದು ಸಹಜವೇ.

ಅದರ ಜೊತೆಗೆ, ಈ ವಿಷಯದಲ್ಲಿ ಒಂದು ತಾತ್ವಿಕ ಅಂಶವೂ ಅಡಕವಾಗಿದೆ ಮತ್ತು ಅದು ಮುಕ್ತ ವ್ಯಾಪಾರವಾದಕ್ಕೆ ಸಂಬಂಧಿಸುತ್ತದೆ. ಈ ಅಂಶದ ಬಗ್ಗೆ ಚರ್ಚೆಯಾಗುವುದೇ ಇಲ್ಲ. ಈ ಮುಕ್ತ ವ್ಯಾಪಾರವಾದವು ಒಂದು ಮೋಸದ ಮೇಲೆ ನಿಂತಿದೆ: ಈ ವಾದವು, ಮುಕ್ತ ವ್ಯಾಪಾರಕ್ಕೆ ತೆರೆದುಕೊಂಡ ಎಲ್ಲ ಅರ್ಥವ್ಯವಸ್ಥೆಗಳೂ ಪೂರ್ಣ ಉದ್ಯೋಗ ಸಮಸ್ಥಿತಿಯಲ್ಲಿರುತ್ತವೆ (ಶ್ರಮಶಕ್ತಿಯೂ ಸೇರಿದಂತೆ ಅದರ ಎಲ್ಲ ಸಂಪನ್ಮೂಲಗಳೂ ಪೂರ್ಣವಾಗಿ ಬಳಕೆಯಾಗಿವೆ) ಎಂದು ಊಹಿಸಿಕೊಳ್ಳುತ್ತದೆ. ಅಂದರೆ, ತನ್ನಿಂದಾಗಿ ನಿರುದ್ಯೋಗ ಸೃಷ್ಟಿಯಾಗುವ ಸಾಧ್ಯತೆಯೇ ಇಲ್ಲ ಎಂಬುದಾಗಿ ಮುಕ್ತ ವ್ಯಾಪಾರ ವ್ಯವಸ್ಥೆ ಊಹಿಸಿಕೊಳ್ಳುತ್ತದೆ. ಇದೊಂದು ಅಸಂಬದ್ಧ ಊಹೆ ಎಂಬುದನ್ನು ವಸಾಹತುಕಾಲದ ನಮ್ಮ ಅನುಭವವೇ ತಿಳಿಸುತ್ತದೆ. ವಸಾಹತುಕಾಲದಲ್ಲಿ ಇಂಗ್ಲೆಂಡಿನೊಂದಿಗಿನ ಮುಕ್ತ ವ್ಯಾಪಾರದಿಂದಾಗಿಯೇ ನಮ್ಮ ದೇಶದ ಕೈಗಾರಿಕೆಗಳು ನಾಶಗೊಂಡವು. ಕೈಗಾರಿಕೆಗಳನ್ನು ನಾಶಪಡಿಸುವ ಈ ಪ್ರಕ್ರಿಯೆಯನ್ನೇ ನಮ್ಮ ದೇಶದ ಆಧುನಿಕ ಕಾಲದ ಬೃಹತ್ ಬಡತನದ ಆದಿ ಪ್ರವರ್ತಕ ಎಂದು ಗುರುತಿಸಲಾಗಿದೆ.

ವಿಶ್ವದಲ್ಲೇ ಒಟ್ಟಾರೆಯಾಗಿ, ಎಲ್ಲ ದೇಶಗಳಲ್ಲಿರುವ ಎಲ್ಲಾ ಸಂಪನ್ಮೂಲಗಳೂ ಸಂಪೂರ್ಣವಾಗಿ ಬಳಕೆಯಾಗುವ ಮಟ್ಟಕ್ಕೆ ವಿಶ್ವದ ಒಟ್ಟಾರೆ ಬೇಡಿಕೆಯನ್ನು ಎತ್ತರಿಸುತ್ತಾ ಹೋಗುವಂತೆ ನೋಡಿಕೊಳ್ಳುವಂತಹ ಒಂದು ವ್ಯವಸ್ಥೆ ಇದ್ದಾಗ ನಿರುದ್ಯೋಗ ಇರುವುದಿಲ್ಲ. ಆದರೆ, ಬೇಡಿಕೆಯಲ್ಲಿ ಕೊರತೆ ಬೀಳದಂತೆ ನೋಡಿಕೊಳ್ಳುವಂತಹ ಯಾವ ವ್ಯವಸ್ಥೆಯೂ ಅಸ್ತಿತ್ವದಲ್ಲಿಲ್ಲ. ಹಾಗಾಗಿ, ಒಂದು ಮಟ್ಟದ ನಿರುದ್ಯೋಗ ಯಾವಾಗಲೂ ಇದ್ದೇ ಇರುತ್ತದೆ. ಆದರೂ, ಒಂದು ಮುಕ್ತ ವ್ಯಾಪಾರ ಒಪ್ಪಂದದ ಪರಿಣಾಮ ಏನಾಗುತ್ತದೆ ಎಂದರೆ, ಈ ನಿರುದ್ಯೋಗವನ್ನು ಯಾವುದೊ ಒಂದು ದೇಶದಿಂದ ಮತ್ತಾವುದೊ ಒಂದು ದೇಶಕ್ಕೆ ವರ್ಗಾಯಿಸಲಾಗುತ್ತದೆ.

ದೇಶ ದೇಶಗಳ ಶ್ರಮಿಕರ ಉತ್ಪಾದಕತೆಯ ನಡುವಿನ ವ್ಯತ್ಯಾಸಗಳು; ಅವರ ಕೂಲಿಯ ವ್ಯತ್ಯಾಸಗಳು ಮತ್ತು ವಿದೇಶಿ ವಿನಿಮಯ ದರದ ಹಾಲಿ ವ್ಯತ್ಯಾಸಗಳ ಕಾರಣಗಳಿಂದಾಗಿ, ಅಂದರೆ, ಸರಕುಗಳನ್ನು ತಂದು ಸುರಿಯುವುದು ಅಥವಾ ಸಬ್ಸಿಡಿಗಳಿಂದಾಗಿ ಸರಕು ಸಾಮಗ್ರಿಗಳ ಬೆಲೆಗಳು ಸ್ಪರ್ಧಾತ್ಮಕವಾಗಿರುತ್ತವೆ ಎಂದುಕೊಂಡರೂ ಸಹ, ಮುಕ್ತ ವ್ಯಾಪಾರವು ಉತ್ಪಾದಕತೆ ಕಡಿಮೆ ಮಟ್ಟದಲ್ಲಿರುವ ದೇಶಗಳ ಕೆಲಸಗಾರರನ್ನು ಅವರ ಕೆಲಸದಿಂದ ಹೊರಹಾಕುತ್ತದೆ.

ಇಲ್ಲಿ ಎರಡು ಪ್ರಶ್ನೆಗಳು ತಕ್ಷಣ ಏಳುತ್ತವೆ: ಮೊದಲನೆಯದು, ಕಡಿಮೆ ಉತ್ಪಾದಕತೆ ಇರುವ ದೇಶಗಳು ತಮ್ಮ ಸರಕು ಸಾಮಗ್ರಿಗಳ ಬೆಲೆಗಳು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧಾತ್ಮಕ ಆಗುವವರೆಗೂ ತಮ್ಮ ವಿದೇಶಿ ವಿನಿಮಯ ದರದ ಅಪಮೌಲ್ಯ ಮಾಡಿಕೊಂಡು ನಿರುದ್ಯೋಗ ನಿವಾರಿಸಬಹುದಲ್ಲವೇ? ಈ ಪ್ರಶ್ನೆಯಲ್ಲಿ ಇಂಗಿತವಾಗಿರುವ ಅಂಶವೇನೆಂದರೆ, ವಿದೇಶಿ ವಿನಿಮಯ ದರದ ಅಪಮೌಲ್ಯ ಮಾಡಿದಾಗ ಅದರ ಅಗತ್ಯ ಭಾಗವಾಗಿಯೇ ನಿಜ ಕೂಲಿ ದರ ಇಳಿಯುವುದರಿಂದ, ಕಡಿಮೆ ಉತ್ಪಾದಕತೆ ಇರುವ ದೇಶಗಳು ತಮ್ಮ ಕೆಲಸಗಾರರ ನಿಜ ಕೂಲಿ ದರವನ್ನು ತಕ್ಕಷ್ಟು ಇಳಿಕೆಯಾಗುವಂತೆ ನೋಡಿಕೊಂಡರೆ ಅವರ ಸರಕು ಸಾಮಗ್ರಿಗಳ ಬೆಲೆಗಳು ಸ್ಪರ್ಧಾತ್ಮಕವಾಗುತ್ತವೆ. ಹಾಗಾಗಿ, ನಿರುದ್ಯೋಗದ ಹೊರೆ ಇಳಿಯುತ್ತದೆ ಎಂಬುದು.

ಆದರೆ, ಇದೊಂದು ತಪ್ಪು ಕಲ್ಪನೆ. ಏಕೆಂದರೆ, ಯಾವುದೊ ಒಂದು ದೇಶದಲ್ಲಿ ನಿಜ ಕೂಲಿ ದರ ಇಳಿಸುವುದರಿಂದಾಗಿಯೇ ಉಳಿದ ಎಲ್ಲ ದೇಶಗಳಲ್ಲಿ ಒಟ್ಟಾರೆ ಬೇಡಿಕೆ ವೃದ್ಧಿಯಾಗುವುದಿಲ್ಲ. ಆದ್ದರಿಂದ, ವಿದೇಶಿ ವಿನಿಮಯ ದರ ಅಪಮೌಲ್ಯಮಾಡಿಕೊಳ್ಳುವ ದೇಶದೊಳಗೆ ನಿರುದ್ಯೋಗದ ಪ್ರಮಾಣ ಇಳಿಯಬಹುದಾದರೂ, ಅದು ಬೇರೆ ದೇಶಗಳಲ್ಲಿ ನಿರುದ್ಯೋಗವನ್ನು ಹೆಚ್ಚಿಸುವ ಮೂಲಕವೇ. ಅಂದರೆ, ರಫ್ತನ್ನು ಹೆಚ್ಚಿಸಿಕೊಳ್ಳುವ ದೇಶವು ನಿರುದ್ಯೋಗವನ್ನು ರಫ್ತು ಮಾಡುತ್ತದೆ. ಇಂತಹ ರಫ್ತುಗಳು ಅವಶ್ಯವಾಗಿ ಬೇರೆ ದೇಶಗಳ ಪ್ರತೀಕಾರವನ್ನು ಆಹ್ವಾನಿಸುತ್ತವೆ. ಹಾಗಾಗಿ, ಎಲ್ಲ ದೇಶಗಳೂ ಕರೆನ್ಸಿ ವಿನಿಮಯ ದರಯುದ್ಧಕ್ಕೆ ಇಳಿಯುತ್ತವೆ. ಪರಿಣಾಮವಾಗಿ, ನಿಜ ಕೂಲಿಗಳನ್ನು ಪಾತಾಳಕ್ಕಿಳಿಸುವ ಸ್ಪರ್ಧೆಯಲ್ಲಿ ಸಿಕ್ಕಿ ಬೀಳುತ್ತವೆ. ಹಾಗಾಗಿ, ಮುಕ್ತ ವ್ಯಾಪಾರವು ಯಾವುದೇ ದೇಶದಲ್ಲಿ ಸೃಷ್ಟಿಸಿದ ನಿರುದ್ಯೋಗ ಸಮಸ್ಯೆಗೆ ಇಂತಹ ಕ್ರಮಗಳು ಪರಿಹಾರವಾಗುವುದಿಲ್ಲ.

ಅಷ್ಟೇ ಅಲ್ಲದೆ, ಇಂದಿನ ಜಗತ್ತಿನ ವಿದ್ಯಮಾನವಾಗಿರುವ ಹಣಕಾಸು ಬಂಡವಾಳದ ಆಧಿಪತ್ಯದಲ್ಲಿ, ವಿನಿಮಯ ದರದ ಯಾವುದೇ ಅಪಮೌಲ್ಯವು, ಅಥವಾ ಅಪಮೌಲ್ಯವಾಗುವ ನಿರೀಕ್ಷೆಯೂ ಸಹ (ಈ ಕ್ರಮವನ್ನು ಮುಕ್ತ ವ್ಯಾಪಾರವು ಸೃಷ್ಟಿಸಿದ ನಿರುದ್ಯೋಗ ಸಮಸ್ಯೆಯಿಂದ ಬಾಧಿತವಾದ ಯಾವುದೇ ಸರ್ಕಾರವು ಕೈಗೊಳ್ಳುತ್ತದೆ) ಬಂಡವಾಳದ ಹೊರಗೆ ಹರಿದು ಹೋಗುವಂತೆ ಮಾಡುತ್ತದೆ. ಅದರಿಂದ ದೊಡ್ಡ ಮಟ್ಟದ ಅಸ್ಥಿರತೆ ಉಂಟಾಗಬಹುದು. ಹಾಗಾಗಿ, ಮುಕ್ತ ವ್ಯಾಪಾರವು ಸೃಷ್ಟಿಸಿದ ನಿರುದ್ಯೋಗ ಸಮಸ್ಯೆಗೆ ವಿನಿಮಯ ದರದ ಅಪಮೌಲ್ಯವು ಒಂದು ಪರಿಹಾರವೇ ಅಲ್ಲ.

ಈ ಹಂತದಲ್ಲಿ ಎರಡನೆಯ ಪ್ರಶ್ನೆ ಕಾಣಿಸಿಕೊಳ್ಳುತ್ತದೆ: ಮುಕ್ತ ವ್ಯಾಪಾರದ ಮೂಲಕ ದುಬಾರಿ ಉತ್ಪಾದಕರನ್ನು ನೆಲೆದಪ್ಪಿಸುವುದರಲ್ಲಿ ತಪ್ಪೇನಿದೆ? ಹೇಗಿದ್ದರೂ ಅವರ ಉತ್ಪಾದನಾ ವೆಚ್ಚ ದುಬಾರಿ ಇರುವುದರಿಂದ ಅವರ ಉತ್ಪಾದನೆಯನ್ನು ಕೊನೆಗೊಳಿಸುವುದೇ ಒಳಿತು. ಇದಕ್ಕೆ ಉತ್ತರ ಸರಳವಾಗಿದೆ: ತಮ್ಮ ಉತ್ಪಾದನಾ ಚಟುವಟಿಕೆಗಳಿಂದ ನೆಲೆದಪ್ಪಿಸಿದವರನ್ನು ಬೇರೆ ಯಾವುದೇ ಚಟುವಟಿಕೆಯಲ್ಲಿ ತೊಡಗಿಸುವುದಾದರೆ, ಆತಂಕವಿಲ್ಲ. ಆದರೆ, ಇದು ವಾಸ್ತವಿಕವಾಗಿ ಅಸಂಭವ. ಈ ಕಾರಣದಿಂದಾಗಿ, ನಿರುದ್ಯೋಗ ಸೃಷ್ಟಿಸುವ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕುವುದು ಖಂಡಿತವಾಗಿಯೂ ಸಮರ್ಥನೀಯವಲ್ಲ. ಈ ಅಂಶವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ಒಂದು ದೇಶವು ಉದ್ಯೋಗದ ದೃಷ್ಟಿಯಿಂದ ಅಗತ್ಯವಾದ ವ್ಯಾಪಾರ ನಿರ್ಬಂಧ ಕ್ರಮಗಳನ್ನು ಹೇರಬೇಕು ಮತ್ತು ಅಂತಹ ಕ್ರಮಗಳನ್ನು ಜಾರಿಗೊಳಿಸಬೇಕು ಎಂದು ಕೇಳುವ ಉತ್ಪಾದಕರ ಮಾತುಗಳು ಸಂಪೂರ್ಣವಾಗಿ ಸಮರ್ಥನೀಯವಾಗಿವೆ.

ಇಂತಹ ಅಭಿಪ್ರಾಯವು ಮೇಲ್ನೋಟದಲ್ಲಿ “ದಕ್ಷತೆ”ಯ ವಿರುದ್ಧವಾಗಿ ಕಾಣುತ್ತದೆ, ಏಕೆಂದರೆ, ದಕ್ಷತೆಯಿಂದ ಕೂಡಿದ್ದಾಗ ಮಾತ್ರ ಉತ್ಪಾದನೆ ಫಲಕಾರಿಯಾಗುತ್ತದೆ. ಆದರೆ, ಮುಕ್ತ ವ್ಯಾಪಾರದ ಸನ್ನಿವೇಶದಲ್ಲಿ ಎಲ್ಲ ಸಂಪನ್ಮೂಲಗಳೂ ಸಂಪೂರ್ಣವಾಗಿ ಬಳಕೆಯಾಗಿವೆ ಎಂಬುದಾಗಿ ಮೊದಲೇ ಭಾವಿಸಿಕೊಂಡು ದಕ್ಷತೆಯ ವಾದವನ್ನು ಮುಂದಿಡಲಾಗುತ್ತಿದೆ. ಅಂತಹ ಮಾದರಿ ಪರಿಸ್ಥಿತಿ ವಾಸ್ತವವಾಗಿ ಇಲ್ಲದಿರುವಾಗ, ದೇಶದಲ್ಲಿ ಉತ್ಪಾದನೆಯಾಗುತ್ತಿರುವ ಒಂದು ಹರವಿನ ಉತ್ಪಾದನಾ ಚಟುವಟಿಕೆಗಳನ್ನು ದಕ್ಷತೆಯ ಹೆಸರಿನಲ್ಲಿ ನೆಲೆದಪ್ಪಿಸುವುದು ಅವಿವೇಕದ ಕೆಲಸವಾಗುತ್ತದೆ.

ಇಲ್ಲಿ ಏಳುವ ಪ್ರಶ್ನೆ ಎಂದರೆ: ಸ್ಥಳೀಯ ದುಬಾರಿ ಉತ್ಪಾದಕರನ್ನು ಸಹಿಸಿಕೊಳ್ಳುವ ಸಲುವಾಗಿ ಅಗ್ಗದ ಆಮದು ವಸ್ತುಗಳನ್ನು ತಡೆಗಟ್ಟುವುದರಿಂದಾಗಿ ಬಳಕೆದಾರರು ದುಬಾರಿ ಬೆಲೆ ತೆರಬೇಕೇ? ಈ ವಾದದಲ್ಲಿ ಸ್ವಲ್ಪ ಔಚಿತ್ಯವಿರುವುದು ಮೇಲ್ನೋಟದಲ್ಲಿ ಕಾಣುತ್ತದೆ. ಆದರೆ, ಈ ವಾದವು ಉತ್ಪಾದಕರು ಮತ್ತು ಬಳಕೆದಾರರ ನಡುವೆ ಮಾಡುವ ಒಂದು ಅಕ್ರಮ ಬೇಧ ಭಾವದ ಮೇಲೆ ನಿಂತಿದೆ.

ಈ ವಾದವು, ಅಗ್ಗದ ಆಮದುಗಳಿಂದಾಗಿ ಶ್ರಮಿಕರು ಮತ್ತು ರೈತರನ್ನೊಳಗೊಂಡ ಉತ್ಪಾದಕ ಸಮುದಾಯವು ತಮ್ಮ ವರಮಾನವನ್ನು ಕಳೆದುಕೊಂಡಾಗ, ಇನ್ನೊಂದು ಗುಂಪಿನ ವ್ಯಕ್ತಿಗಳು, ಅಂದರೆ, ಬಳಕೆದಾರರ ಸ್ಥಿತಿ–ಗತಿ ಉತ್ತಮವಾಗಿರುತ್ತದೆ ಎಂದು ಭಾವಿಸುತ್ತದೆ. ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಮುಕ್ತ ವ್ಯಾಪಾರದಿಂದಾಗಿ ಉತ್ಪಾದಕ ಸಮುದಾಯದ ವರಮಾನವು ಇಳಿದರೂ ಸಹ ಅದು ಬಳಕೆದಾರರ ವರಮಾನವನ್ನು ತಟ್ಟುವುದಿಲ್ಲ ಎಂಬುದು ಈ ವಾದದ ಭಾವನೆ.

ಈ ವಾದವು ದೋಷಯುತವಾಗಿದೆ. ಏಕೆಂದರೆ, ಉತ್ಪಾದಕ ಸಮುದಾಯದ ವರಮಾನ ಇಳಿದಾಗ ಬಳಕೆದಾರರ ವರಮಾನವೂ ಇಳಿಯುತ್ತದೆ. ಉತ್ಪಾದಕರನ್ನು ನೆಲೆದಪ್ಪಿಸಿದ ಪರಿಣಾಮಗಳು ಇಡೀ ಅರ್ಥವ್ಯವಸ್ಥೆಯನ್ನೇ ತಟ್ಟುವ ಕಾರಣದಿಂದ ಅದರ ಪರಿಣಾಮಗಳಿಂದ ಬಳಕೆದಾರರು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂಬುದನ್ನು ವಸಾಹತು ಭಾರತದ ಉದಾಹರಣೆ ಸ್ಪಷ್ಟಪಡಿಸುತ್ತದೆ.

ಇಂಗ್ಲೆಂಡಿನ ಯಂತ್ರ ತಯಾರಿತ ಅಗ್ಗದ ವಸ್ತುಗಳನ್ನು ಆಮದು ಮಾಡಿಕೊಂಡ ಪರಿಣಾಮವಾಗಿ ಭಾರತದ ಕೈಕಸುಬುಗಾರಿಕೆ ನಾಶಗೊಂಡಿತು. ಪರಿಣಾಮವಾಗಿ, ಅಗಾಧ ಪ್ರಮಾಣದ ನಿರುದ್ಯೋಗ ಮತ್ತು ಬಡತನಗಳು ಉಂಟಾದವು. ಆರಂಭದಲ್ಲಿ, ಅಗ್ಗದ ಆಮದು ವಸ್ತುಗಳಿಂದ ರೈತರಿಗೆ ಅನುಕೂಲವೇ ಆಗಿತ್ತು ಎನ್ನಬಹುದು ಮತ್ತು ಕೈಕಸುಬುಗಳ ನಾಶವು ಅವರನ್ನು ತಟ್ಟಲಿಲ್ಲ. ಆದರೆ, ಕ್ರಮೇಣ, ನೆಲೆದಪ್ಪಿದ ಕೈಕಸುಬುದಾರರು ಜೀವನೋಪಾಯಕ್ಕಾಗಿ ಗ್ರಾಮೀಣ ಪ್ರದೇಶಗಳಿಗೆ ನುಗ್ಗಿದ ಪರಿಣಾಮವಾಗಿ ಕೃಷಿ ಕೂಲಿಗಾರರ ಕೂಲಿ ಇಳಿಯಿತು ಮತ್ತು ಭೂಮಿಯ ಮೇಲಿನ ಗೇಣಿಯೂ ಏರಿತು. ಈ ಎಲ್ಲ ವಿದ್ಯಮಾನಗಳಿಂದಾಗಿ, ಅಗ್ಗದ ಆಮದು ವಸ್ತುಗಳಿಂದ ಆರಂಭದಲ್ಲಿ ಅನುಕೂಲ ಪಡೆದವರೆಂದು ಭಾವಿಸಲಾಗಿದ್ದ ರೈತರ ವರಮಾನಗಳೂ ಇಳಿದವು. ಹಾಗಾಗಿ, ವಸಾಹತುಶಾಹಿ ಕಾಲದ ಕೈಗಾರಿಕೆಗಳ ವಿನಾಶವು, ಅಲೆಗಳು ಅಪ್ಪಳಿಸುವ ರೀತಿಯಲ್ಲಿ ಎಲ್ಲ ದುಡಿಮೆಗಾರರ ವರಮಾನಗಳನ್ನೂ ತಟ್ಟಿತು. ವಸಾಹತುಶಾಹಿಗಳು ತಮ್ಮ ವಸಾಹತುವಾದಿ ಆಳ್ವಿಕೆಯ ರಕ್ಷಣೆಗಾಗಿ ಸಾಕಿಕೊಂಡಿದ್ದ ಕೆಲವು ಮಂದಿ ಭೂ ಮಾಲೀಕರು ಮಾತ್ರ ಕೈಗಾರಿಕೆಗಳ ವಿನಾಶದ ಲಾಭ ಪಡೆದರು.

ಆದ್ದರಿಂದ, ನಿರುದ್ಯೋಗ ಸೃಷ್ಟಿಸುವ ಅಥವಾ ರೈತರ ವರಮಾನಗಳನ್ನು ಇಳಿಸುವ ಮುಕ್ತ ವ್ಯಾಪಾರ ಒಪ್ಪಂದವನ್ನು ಯಾವುದೇ ಸಂದರ್ಭದಲ್ಲೂ ಸಮರ್ಥಿಸುವಂತಿಲ್ಲ. ಹಾಗಾಗಿ, ಮೋದಿ ಸರ್ಕಾರವು ಪ್ರಾದೇಶಿಕ ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದದಿಂದ ಹಿಂದೆ ಸರಿಯುವಂತೆ ಜನತೆ ಹೇರಿದ ಒತ್ತಾಯವು ಸರಿಯಾಗಿಯೇ ಇದೆ.

ದೇಶದ ಹಾಲಿ ಬೌದ್ಧಿಕ ಕಥನವನ್ನು ಬಂಡವಾಳಶಾಹಿಯು ತನ್ನ ಅಧೀನತೆಗೆ ಅದೆಷ್ಟು ಮಟ್ಟಿಗೆ ಒಳಪಡಿಸಿಕೊಂಡಿದೆ ಎಂದರೆ, ಪೂರ್ಣ ಉದ್ಯೋಗದ ಕಲ್ಪನೆಯನ್ನೂ ಮಾಡಿಕೊಳ್ಳುವಂತಿಲ್ಲ ಎನ್ನುವ ಮಟ್ಟಕ್ಕೆ ಅದು ಇಳಿದಿದೆ. ಸೋವಿಯತ್ ಒಕ್ಕೂಟ ಮತ್ತು ಪೂರ್ವ ಯೂರೋಪಿನ ಸಮಾಜವಾದಿ ದೇಶಗಳು ಪೂರ್ಣ ಉದ್ಯೋಗ ಗುರಿ ಸಾಧಿಸಿದ್ದವು ಮಾತ್ರವಲ್ಲ, ವಾಸ್ತವವಾಗಿ ಕೆಲಸಗಾರರ ಅಭಾವವೂ ಅಲ್ಲಿತ್ತು ಎಂಬುದನ್ನು ಅವರು ಮರೆತರೇ?

ಈ ಎಲ್ಲವನ್ನೂ ಒಂದು ವಾಸ್ತವಾಂಶವಾಗಿ ಹೇಳುವುದಾದರೆ, ವ್ಯಕ್ತಿಗಳ ಒಂದು ಗುಂಪು ತಾವೇ ಏನನ್ನು ಉತ್ಪಾದಿಸುತ್ತಾರೊ ಮತ್ತು ಅದನ್ನು ಸುಮ್ಮನೇ ತಾವೇ ಬಳಸಿ ಉಳಿದದ್ದನ್ನು ಹೂಡಿಕೆ ಮಾಡಿದರೆ, ಅಲ್ಲಿ ನಿರುದ್ಯೋಗವೇ ಇರುವುದಿಲ್ಲ. ನಿರುದ್ಯೋಗ ಉಂಟು ಮಾಡುವ ಒಂದು ದೊಡ್ಡ ಕಾರಣ ಯಾವುದು ಎಂದರೆ, ಕೆಲವರು ತಮ್ಮ ಗುಂಪಿನ ಇತರರು ಏನನ್ನು ಉತ್ಪಾದಿಸುತ್ತಾರೊ ಅದನ್ನು ಕೊಳ್ಳಲು ಇಷ್ಟಪಡುವುದಿಲ್ಲ. ಬದಲಿಗೆ, ತಮ್ಮ ಗುಂಪಿನ ಹೊರಗಿನವರು ಉತ್ಪಾದಿಸುವುದನ್ನು ಕೊಳ್ಳಲು ಬಯಸುತ್ತಾರೆ, ಹೊರಗಿನವರು ಈ ಗುಂಪಿನ ಯಾವ ಉತ್ಪಾದನೆಯನ್ನು ಕೊಳ್ಳದಿದ್ದರೂ ಸಹ. ಅಂತಹ ನಿರುದ್ಯೋಗವನ್ನು ಸೃಷ್ಟಿಸುವ ಪ್ರಾದೇಶಿಕ ಸಮಗ್ರ ಆರ್ಥಿಕ ಪಾಲುದಾರಿಕೆ (ಆರ್.ಸಿ.ಇ.ಪಿ.) ಒಪ್ಪಂದವನ್ನು ತಡೆಗಟ್ಟಲೇಬೇಕು.

ಮೂರು ವರ್ಷ – ಮೂರು ಸರ್ಕಾರ, ಕಾರ್ಮಿಕರಿಗಿಲ್ಲ ಪರಿಹಾರ....

ಪುಟ 16 ರಿಂದ

ಕೋಷ್ಟಕ-1: ರಾಜ್ಯ ಮತ್ತು ರಾಷ್ಟ್ರ ಒಟ್ಟಾರೆ ಆಂತರೀಕ ಉತ್ಪನ್ನ (2011–12ರ ಸ್ಥಿರ ಬೆಲೆ ಆಧಾರಿತ)

ವರ್ಷ	GSDP ಕೋಟಿಗಳಲ್ಲಿ	ಬೆಳವಣಿಗೆ ದರ ಶೇ.	GDP ಕೋಟಿಗಳಲ್ಲಿ	ಬೆಳವಣಿಗೆ ದರ.ಶೇ.
2012–13	641212	6.2	9215125	5.5
2013–14	708623	10.5	9817820	6.5
2014–15	760282	7.3	10522689	7.2
2015–16	815545	7.3	11357529	7.9
2016–17	874935	6.9	12165481	7.1
2017–18	949111	7.20	13180000	6.5

ಆಧಾರ : ಕರ್ನಾಟಕ ಆರ್ಥಿಕ ಸಮೀಕ್ಷೆ : 2017–18

ಕೋಷ್ಟಕ-2: ಹಿಡುವಳಿದಾರರು – (000) ವಿಸ್ತೀರ್ಣ (000 ಹೆಕ್ಟೇರುಗಳಲ್ಲಿ)

ವರ್ಷ	ಅತಿಸಣ್ಣ		ಸಣ್ಣ		ಅರೆಮಧ್ಯಮ		ಮಧ್ಯಮ		ದೊಡ್ಡ	
	ಹಿಡುವಳಿ ದಾರರು	ವಿಸ್ತೀರ್ಣ	ಹಿಡುವಳಿ ದಾರರು	ವಿಸ್ತೀರ್ಣ	ಹಿಡುವಳಿ ದಾರರು	ವಿಸ್ತೀರ್ಣ	ಹಿಡುವಳಿ ದಾರರು	ವಿಸ್ತೀರ್ಣ	ಹಿಡುವಳಿ ದಾರರು	ವಿಸ್ತೀರ್ಣ
1995–96	2610	1248	1707	2480	1204	3298	594	3490	106	1593
2000–01	3252	1492	1909	2742	1259	3429	569	3317	90	1327
2005–06	3655	1651	2014	2876	1278	3468	555	3206	79	1184
2010–11	3849	1851	2138	3020	1267	3393	511	2904	68	994

ಆಧಾರ : ಕರ್ನಾಟಕ ಆರ್ಥಿಕ ಸಮೀಕ್ಷೆ : 2017–18

ಕೋಷ್ಟಕ-3 : ಪರಿಹಾರವಾದ – ವಿಫಲಗೊಂಡ–ಹಿಂಪಡೆದ ಕೈಗಾರಿಕಾ ವಿವಾದಗಳು :

ವರ್ಷ	2016	2017	2018
ಬಾಕಿಯಿದ್ದ ವಿವಾದಗಳು (ಜನವರಿ 1ರಂದು)	478	398	532
ವರ್ಷದಲ್ಲಿ ನೂತನವಾಗಿ ದಾಖಲಾದ ವಿವಾದಗಳು	1307	1365	119
ಒಟ್ಟು	1785	1763	1725
ಎ) ಪರಿಹಾರವಾದ	85	77	37
ಬಿ) ವಿಫಲಗೊಂಡ	1125	1063	751
ಸಿ) ಹಿಂಪಡೆದ	117	91	173
ವಿಲೇವಾರಿಯಾದ ವಿವಾದಗಳು	1387	1231	961
ಡಿಸೆಂಬರ್ 31, ರಂದು ಬಾಕಿಯಿದ್ದ ವಿವಾದ	398	532	764

ಆಧಾರ : ರಾಜ್ಯ ಕಾರ್ಮಿಕ ಇಲಾಖೆಯ ವಾರ್ಷಿಕ ವರದಿಗಳು.

ಕೋಷ್ಟಕ-4 : ನ್ಯಾಯಾಲಯಗಳ ಅವಾರ್ಡ್ ಜಾರಿ ಮಾಡದಿರುವ ಅಂಕಿ ಸಂಖ್ಯೆ :

ವರ್ಷ	2016	2017	2018
ಆರಂಭದಲ್ಲಿನ ಪ್ರಕರಣಗಳು	223	159	159
ವರ್ಷದಲ್ಲಿನ ಸ್ವೀಕೃತ ಪ್ರಕರಣಗಳು	80	109	187
ಒಟ್ಟು	303	268	346
ಪ್ರಕಟಿತ ಅವಾರ್ಡ್‌ಗಳು	1812	2161	2078

ಆಧಾರ : ರಾಜ್ಯ ಕಾರ್ಮಿಕ ಇಲಾಖೆಯ ವಾರ್ಷಿಕ ವರದಿಗಳು.

ಕೋಷ್ಟಕ-5 : ವಿವಿಧ ಕಾರ್ಮಿಕ ಕಾನೂನುಗಳ ಅಡಿ ಒಟ್ಟು ತಪಾಸಣೆ, ಹೂಡಲಾದ ಮೊಕದ್ದಮೆಗಳ ಸಂಖ್ಯೆ, ಶಿಕ್ಷಿಸಲ್ಪಟ್ಟ ಪ್ರಕರಣ ದಂಡ ಮೊತ್ತ

	2016	2017	2018
ತಪಾಸಣೆ	134597	63954	78233
ಹೂಡಲಾದ ಮೊಕದಮೆಗಳ ಸಂಖ್ಯೆ	5709	2607	3158
ಶಿಕ್ಷಿಸಲ್ಪಟ್ಟ ಪ್ರಕರಣ	3428	2651	2075
ದಂಡ ರೂ.ಗಳಲ್ಲಿ	7264099	6935021	8057575

ಆಧಾರ : ರಾಜ್ಯ ಕಾರ್ಮಿಕ ಇಲಾಖೆಯ ವಾರ್ಷಿಕ ವರದಿಗಳು.

ಇದೇ ವೇಳೆ ಕಾರ್ಮಿಕರ ಸಂಘ ಕಟ್ಟಿಕೊಳ್ಳುತ್ತಿರುವ ಪ್ರಮಾಣವು ಅಲ್ಪಪ್ರಮಾಣದಲ್ಲಿ ಹೆಚ್ಚುತ್ತಿವೆ. ಸಂಘ ಕಟ್ಟಿಕೊಂಡಿರುವ ಕಡೆ ಅಲ್ಪಸ್ವಲ್ಪ ಮಾಲೀಕರ ವಿರುದ್ಧ ಸೆಣಸಿ, ಮೇಲಿನ ಸಂದರ್ಭಗಳಲ್ಲಿ ಕಾರ್ಮಿಕರ ರಕ್ಷಣೆಗೆ ಯತ್ನಿಸಲಾಗಿದೆ. ಉಳಿದೆಡೆ ಅದು ಸಾಧ್ಯವಾಗಿಲ್ಲ.

ಹೆಚ್ಚಿದ ಕನಿಷ್ಟ ವೇತನ : ಹೆಚ್ಚಿದ ಮಿಗುತಾಯ ಮೌಲ್ಯ :

2008ರಿಂದ ಸಿಐಟಿಯು ನಡೆಸಿದ ಸಮಾನ ಕನಿಷ್ಟ ವೇತನಕ್ಕಾಗಿ ಹೋರಾಟದ ಪರಿಣಾಮ 30.12.2017 ರಿಂದ ಜಾರಿಗೆ ಬರುವಂತೆ ಪರಿಷ್ಕರಿಸಿದ ಕನಿಷ್ಟ ವೇತನ ಕುರಿತು ಮಾಲೀಕರು ನಿರಂತರವಾಗಿ ನಿರ್ಮಿಸಿದ ಕೋರ್ಟ್ ವಿವಾದಗಳಿಂದಾಗಿ ಅಂತಿಮವಾಗಿ ಮಾರ್ಚ್ 2019ರಲ್ಲಿ ಹೈಕೋರ್ಟ್ ಎತ್ತಿ ಹಿಡಿದ ಕಾರಣ, ಸಂಘ ಇರುವ ಕಡೆ ಬಾಕಿ ವೇತನ ಪಡೆಯಲು ಸಾಧ್ಯವಾಗಿದೆ. ಆದರೆ ಸರ್ಕಾರ ವೇತನ ಪರಿಷ್ಕರಣೆ ಮಾಡುವಾಗ 3 ವಲಯಗಳ ಬದಲು 4 ವಲಯಗಳನ್ನು ನಿರ್ಮಿಸಿ, ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಡಿಮೆ ವೇತನ ನಿಗದಿ ಮಾಡಿ, ವಲಯ 1 ರಿಂದ 4ರ ನಡುವೆ ರೂ.2,000/– ಮಾಸಿಕ ಅಂತರ ಇರಿಸಿದೆ. ಬಹುತೇಕ ಕಾರ್ಖಾನೆಗಳು ಮಹಾನಗರ ಪಾಲಿಕೆಯಿಂದ ಹೊರಹೊಲಯಕ್ಕೆ ಸ್ಥಳಾಂತರವಾಗಿ ವಲಯ 4 ರಲ್ಲಿ ಸ್ಥಾಪನೆಯಾಗುತ್ತಿರುವ ಕಾರಣ ಮಾಲೀಕರಿಗೆ ದೊಡ್ಡ ಪ್ರಮಾಣದ ಸಾಪೇಕ್ಷ ಮಿಗುತಾಯ ಮೌಲ್ಯ ಲಭಿಸಲು ಅನುವುಗೊಳಿಸಿದೆ. ಆ ಮೂಲಕ ಕಾರ್ಮಿಕರನ್ನು ರಾಜ್ಯ ಸರ್ಕಾರ ವಂಚಿಸಿದೆ. ಇನ್ನೊಂದೆಡೆ ಕೇಂದ್ರ ಸರ್ಕಾರವು ನೆಲಮಟ್ಟದ ಕನಿಷ್ಟ ವೇತನವಾಗಿ ದಿನಕ್ಕೆ 176 ರೂಗಳನ್ನು ನಿಗದಿ ಮಾಡಿ ಪ್ರಕಟಿಸಿ ಮಾಲೀಕರಿಗೆ ಸಹಕಾರಿಯಾಗಿ ನಿಂತಿದೆ.

ಸ್ಕೀಂ ನೌಕರರ ಮೇಲೆ ತೂಗುಗತ್ತಿ:

ಸ್ಕೀಂ ನೌಕರರು ಕೇಂದ್ರ ಸರ್ಕಾರದ ಅನುದಾನ ಕಡಿತ, ರಾಜ್ಯ ಸರ್ಕಾರದ ಖಾಸಗೀಕರಣ ಮತ್ತು ಸರ್ಕಾರಿ ಶಾಲೆಗಳಲ್ಲಿ ಕೆಜಿ ತರಗತಿಗಳ ಸ್ಥಾಪನೆ ಮತ್ತು ಇಂಗ್ಲೀಷ್ ಮಾಧ್ಯಮ ತರಗತಿಗಳ ಪ್ರಾರಂಭ, ಸೆಂಟ್ರಲೈಸ್ಡ್ ಅಡುಗೆ ಮನೆಗಳಿಂದ ತಮ್ಮ ನೌಕರಿಯಿಂದ ವಂಚಿತರಾಗಲಿದ್ದಾರೆ. ಅದರ ವಿರುದ್ಧ ಹೋರಾಟಗಳು ತೀವ್ರಗೊಳ್ಳುತ್ತಿವೆ. ಪಂಚಾಯಿತಿ ನೌಕರರಿಗೆ ವರ್ಷಗಟ್ಟಲೆ ವೇತನವಿಲ್ಲದ, ಗ್ರಾಮೀಣ ಉದ್ಯೋಗಖಾತ್ರಿ, ಕಾರ್ಮಿಕರಿಗೆ ಕೆಲಸ ನೀಡದ, ಮಾಡಿದ ಕೆಲಸಕ್ಕೆ ವೇತನ ನೀಡದ ಬೆಳವಣಿಗೆಗಳು ತೀವ್ರವಾಗುತ್ತಿವೆ. ಪ್ರತಿರೋಧವು ಹೆಚ್ಚುತ್ತಿವೆ.

ಅಸಂಘಟಿತರಿಗಿಲ್ಲ ಸಾಮಾಜಿಕ ಭದ್ರತೆ :

ಅಸಂಘಟಿತ ಕಾರ್ಮಿಕ ಭದ್ರತಾ ಮಂಡಳಿಗೆ ಅಗತ್ಯ ಬಜೆಟ್ ಅನುದಾನ ನೀಡದ ಹಾಗೂ ಭವಿಷ್ಯನಿಧಿ ಮತ್ತು ಪಿಂಚಣಿಗೆ ಶಾಸನ ರೂಪಿಸಿ ಜಾಗೊಳಿಸದ ಕಾರಣ ಕಲ್ಯಾಣ ಯೋಜನೆಗಳಿಲ್ಲದೆ ವಂಚಿತರಾಗುತ್ತಿದ್ದಾರೆ. ಕೇವಲ ಅಂಬೇಡ್ಕರ್ ಸಹಾಯಹಸ್ತ ಕಾರ್ಡ್ ನೀಡಿಕೆಗೆ ಮಾತ್ರ ಕಲ್ಯಾಣ ಮಂಡಳಿ ಸೀಮಿತವಾಗಿ ಇದುವರೆಗೆ ಅವರಿಗೆ ಲಭ್ಯವಿದ್ದ ರಾಷ್ಟ್ರೀಯ ಸ್ವಾಸ್ಥ್ಯ ಭೀಮಾ ಯೋಜನೆ (RSBY) ಆಮ್ ಆದ್ಮಿ ಭೀಮಾ ಯೋಜನೆ (AABY) ಕೇಂದ್ರದ ಪ್ರಧಾನಮಂತ್ರಿ ಜೀವನ್ ಭೀಮಾ ಯೋಜನೆ ಮತ್ತು ಪ್ರಧಾನಮಂತ್ರಿ ಜೀವನ ಸುರಕ್ಷಾ ಯೋಜನೆಗಳ ಕಾರಣ ಇಲ್ಲವಾಗಿವೆ. ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಹಾಳುಗೆಡವಿ, 'ಆಯುಷ್ಯಮಾನ ಭಾರತ' ಆರೋಗ್ಯ ಯೋಜನೆ ಹೆಸರಿನಲ್ಲಿ ಆರೋಗ್ಯ ವಿಮಾ ಕಂಪನಿಗಳಿಗೆ ಮತ್ತು ಖಾಸಗಿ ಆಸ್ಪತ್ರೆಗಳಿಗೆ ಜನತೆಯ, ಅಸಂಘಟಿತರ ಆರೋಗ್ಯ ಬಲಿಕೊಡಲು ಮುಂದಾಗಿದೆ. ರಾಜ್ಯ ಸರ್ಕಾರವು ಆರೋಗ್ಯ ಕರ್ನಾಟಕ ಯೋಜನೆಯನ್ನು ಅದರಲ್ಲಿ ವಿಲೀನಗೊಳಿಸಿ ಸಹಕರಿಸುತ್ತಿದೆ.

ಇರುವ ಭದ್ರತೆಗೂ ಕುತ್ತು:

ಅಲ್ಪಸ್ವಲ್ಪ ಸಾಮಾಜಿಕ ಭದ್ರತಾ ಯೋಜನೆ ಪಡೆಯುತ್ತಿರುವ ಕಟ್ಟಡ ಮತ್ತು ಇತರೆ ಕಾರ್ಮಿಕರ ಕಲ್ಯಾಣ ಮಂಡಳಿಯ ಯೋಜನೆಯ ಫಲಾನುಭವಿಗಳು ಪಡೆದ ಮತ್ತು ಪಡೆದುಕೊಂಡ ಸೌಲಭ್ಯದ ಮೊತ್ತ ವರ್ಷದಿಂದ ವರ್ಷಕ್ಕೆ ಸರ್ಕಾರದ ಆನ್‌ಲೈನ್ ನೊಂದಾವಣಿ ಮುಂತಾದ ಕ್ರಮಗಳಿಂದ ಕಡಿಮೆಯಾಗುತ್ತಾ ಬರುತ್ತಿವೆ. ಕೇಂದ್ರ ಸರ್ಕಾರವು ತರಲು ಹೊರಟಿರುವ ಸಾಮಾಜಿಕ ಭದ್ರತಾ ಸಂಹಿತೆಯು ರಾಜ್ಯ ಮಂಡಳಿಗಳನ್ನು ಬಲಪಡಿಸಲಿದೆ. ಕಾರ್ಮಿಕ ಚಳುವಳಿಯ ಬೇಡಿಕೆಗಳನ್ನು ಮುಖ್ಯವಾಹಿನಿಯ ಬೇಡಿಕೆಯನ್ನಾಗಿಸಲು ರಾಷ್ಟ್ರೀಯ ಕಾರ್ಮಿಕ ಸಮ್ಮೇಳನದ ರೀತಿಯಲ್ಲಿ ಕರ್ನಾಟಕ ರಾಜ್ಯ ಕಾರ್ಮಿಕ ಸಮ್ಮೇಳನ ನಡೆಸಲು ಸಮ್ಮೇಳನವು ಸರ್ಕಾರವನ್ನು ಒತ್ತಾಯಿಸಿದೆ.

ವಿದೇಶಿ ಬಂಡವಾಳದ ನೆಚ್ಚಿನ ತಾಣ :

ಇಂತಹ ಪರಿಸ್ಥಿತಿಯಲ್ಲಿ ರಾಷ್ಟ್ರಕ್ಕೆ ಬರುತ್ತಿರುವ ವಿದೇಶಿ ನೇರ ಬಂಡವಾಳದ 44 ಶೇಕಡ ವಿದೇಶಿ ನೇರ ಬಂಡವಾಳದ ಆಕರ್ಷಣೆಯ ಕೇಂದ್ರವಾಗಿ ರಾಜ್ಯ ರೂಪಿತವಾಗಿದೆ. ಅದಕ್ಕೆ ಪೂರಕವಾಗಿ ಜಾಗತೀಕ ಹೂಡಿಕೆದಾರರ ಸಮಾವೇಶ, ಇನ್‌ವೆಸ್ಟ್ ಕರ್ನಾಟಕ ಸಮಾವೇಶಗಳನ್ನು ರಾಜ್ಯ ಸರ್ಕಾರ ನಡೆಸಿ, ನವ ಕರ್ನಾಟಕ 2020 ಯೋಜನೆಯನ್ನು ರೂಪಿಸಿ ಅನುವುಗೊಳಿಸುತ್ತಿದೆ. ಅದಕ್ಕಾಗಿ ಹಲವಾರು ಕೈಗಾರಿಕೆಗಳಿಗೆ ಕಾರ್ಮಿಕ ಕಾನೂನುಗಳಿಂದ ವಿನಾಯಿತಿ ನೀಡಲು ಮುಂದಾಗುತ್ತಿದೆ.

ಗಿಗ್ ಆರ್ಥಿಕತೆಯ ಕಾರ್ಮಿಕರು – ಕಾನೂನು:

ಅದೇ ವೇಳೆ ರಾಜ್ಯವು ಮಾಹಿತಿ ತಂತ್ರಜ್ಞಾನ, ಬೈಯೋಟೆಕ್, ಏರೋಸ್ಪೇಸ್ ಇಂಡಸ್ಟ್ರಿಗಳ ಕೇಂದ್ರವಾಗಿ ರೂಪಿತವಾಗಿದೆ. ನವೋದ್ಯಮ ರಾಜಧಾನಿಯಾಗಿ ಹೊರಹೊಮ್ಮಿದೆ. ಅಲ್ಪ ಸಮಯದ ನಿಗದಿತ ಕೆಲಸಕ್ಕೆ ಬೇಡಿಕೆಯಾಧಾರಿತವಾಗಿ ಆಪ್‌ಗಳ ಬಳಸಿ ಕೆಲಸ ಮಾಡುವ ಗಿಗ್ ಆರ್ಥಿಕತೆಯು ರಾಜ್ಯದಲ್ಲಿ ಹೆಚ್ಚುತ್ತಿದೆ. ಅಂತಹ ಕಾರ್ಮಿಕರು ತಮ್ಮ ಮಾಲೀಕರು ಯಾರು ಎಂಬುದನ್ನು ಅರಿಯದೆ ಯಾವುದೇ ಸೇವಾ ಸೌಲಭ್ಯಗಳಿಲ್ಲದೆ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಸೇವಾ ಸೌಲಭ್ಯಗಳ ಶಾಸನ ರೂಪಿಸಿ ಜಾರಿಗೊಳಿಸಲು ಸಮ್ಮೇಳನ ಒತ್ತಾಯಿಸಿದೆ.

ಸೌಹಾರ್ದತೆಗೆ ಕುತ್ತು ತರುತ್ತಿರುವ ಪರಕೀಯ ಪ್ರಜ್ಞೆ :

ಇಂತಹ ಸಂದರ್ಭದಲ್ಲಿ ಕಾರ್ಮಿಕರನ್ನು ಜಾತಿ, ಧರ್ಮ, ಭಾಷೆ, ಪ್ರದೇಶ ಆಧಾರಿತವಾಗಿ ವಿಭಜಿಸುವ ಶಕ್ತಿಗಳು ತಮ್ಮ ಯತ್ನಗಳನ್ನು ನಡೆಸಿವೆ. ಪರಿಣಾಮವಾಗಿ ಕಾರ್ಮಿಕರಲ್ಲಿ ಪರಕೀಯ ಪ್ರಜ್ಞೆಗಳು ಹೆಚ್ಚುತ್ತಿವೆ. ಜಾತಿವಾದಿ, ಕೋಮುವಾದಿ, ಹುಸಿ ರಾಷ್ಟ್ರವಾದಿ ಪ್ರಚಾರಕ್ಕೆ ಬಲಿಯಾಗಿ ಕೋಮುವಾದಕ್ಕೆ ಸಹಕಾರಿಯಾಗುವ ಪ್ರವೃತ್ತಿಯನ್ನು ಕಾರ್ಮಿಕರ ನಡುವೆ ಕಾಣಲಾಗುತ್ತಿದೆ.

ದುಡಿಯುವ ಜನತೆಯ ಕರ್ನಾಟಕಕ್ಕಾಗಿ: ನೈಜ ಶತ್ರುಗಳ ಅರಿವಿನೆಡೆಗೆ:

ಕಳೆದ 3 ವರ್ಷಗಳಲ್ಲಿ ಏರುಗತಿಯಲ್ಲಿರುವ ಕಾರ್ಮಿಕರ ಜಂಟಿ ಚಳುವಳಿಯನ್ನು ಮತ್ತೊಂದು ಮಜಲಿಗೆ ಕೊಂಡೊಯ್ದು ಕಾರ್ಮಿಕರ ಸಮಸ್ಯೆಗಳಿಗೂ ಮತ್ತು ಸರ್ಕಾರಗಳ ನೀತಿಗಳಿಗೂ ಹಾಗೂ ಅದರ ಹಿಂದಿನ ಬಂಡವಾಳದ ಪರ ರಾಜಕೀಯಕ್ಕೂ ಇರುವ ಸಂಬಂಧವನ್ನು ಕಾರ್ಮಿಕರಿಗೆ ಮನವರಿಕೆ ಮಾಡಿಕೊಟ್ಟು, ತಮ್ಮ ನೈಜ ಶತೃಗಳನ್ನು ಗುರುತಿಸುವಂತೆ ಮಾಡಲು ಸಮ್ಮೇಳನವು ನಿರ್ಣಯಿಸಿದೆ.

ಇಂತಹ ಪರಿಸ್ಥಿತಿಯನ್ನು ಪರಿಶೀಲಿಸಿದ ಸಿಐಟಿಯು 14ನೇ ರಾಜ್ಯ ಸಮ್ಮೇಳನವು ಕಳೆದ ಮೂರು ವರ್ಷಗಳಲ್ಲಿನ ಮೂರು ಸರ್ಕಾರಗಳು ಕಾರ್ಮಿಕರಿಗೆ ಪರಿಹಾರ ನೀಡದಿರುವಾಗ, ಕರ್ನಾಟಕವನ್ನು ದುಡಿಯುವ ಜನತೆಯ ಕರ್ನಾಟಕವಾಗಿ ರೂಪಿಸಲು ರೈತ–ಕಾರ್ಮಿಕರ ಸಖ್ಯತೆಯ ಪ್ರಬಲ ಚಳುವಳಿ ಆಧಾರಿತವಾಗಿ ಸಮಗ್ರ–ಸಮೃದ್ಧ–ಸೌಹಾರ್ದ ಕರ್ನಾಟಕವಾಗಿ ರೂಪಿಸಲು, ತನ್ನ ಹೋರಾಟಗಳನ್ನು ಅಕ್ರಮಣಕಾರಿಯಾಗಿ ರೂಪಿಸಲು, ಆ ಮೂಲಕ ಕಾರ್ಮಿಕ ಹಕ್ಕುಗಳನ್ನು ಬಲಪಡಿಸಲು ಕಾರ್ಮಿಕ ಹಕ್ಕುಗಳ ಉಳಿಸುವ ಚಳುವಳಿ ತೀವ್ರಗೊಳಿಸಲು ಸಂಕಲ್ಪ ಮಾಡಿದೆ.

ಕೋಷ್ಟಕ-6 : ಕನಿಷ್ಟ ವೇತನ ಕಾಯ್ದೆ–1948' ರಡಿ ಕ್ಲೇಮ್ ಅರ್ಜಿಗಳು

	2016	2017	2018
ಒಟ್ಟು ಅರ್ಜಿಗಳು ಜನವರಿ 1ರಂದು	5314	1143	6910
ಹೊಸ ಅರ್ಜಿಗಳು	652	6965	1151
ಒಟ್ಟು	5966	8108	8061
ವಿಲೇವಾರಿ ಆದ ಅರ್ಜಿಗಳು	336	1198	1535
ಬಾಕಿಯಿರುವ ಒಟ್ಟು ಅರ್ಜಿಗಳು ಡಿಸೆಂಬರ್ 31	5630	6910	6526
ಕಾರ್ಮಿಕರಿಗೆ ನೀಡಲಾದ ಒಟ್ಟು ಪರಿಹಾರ ಮೊತ್ತ	2102606	18062503	21558973

ಆಧಾರ : ರಾಜ್ಯ ಕಾರ್ಮಿಕ ಇಲಾಖೆಯ ವಾರ್ಷಿಕ ವರದಿಗಳು.

ಕೋಷ್ಟಕ – 7 : ಉಪಧನ ಪಾವತಿ ಕಾಯ್ದೆ–1972 ರಡಿ ಕ್ಲೇಮ್ ಅರ್ಜಿಗಳು

	2016	2017	2018
ಒಟ್ಟು ಅರ್ಜಿಗಳು ಜನವರಿ 1ರಂದು	5174	2367	6903
ಹೊಸ ಅರ್ಜಿಗಳು	2057	5432	1840
ಒಟ್ಟು	7231	7799	8743
ವಿಲೇವಾರಿ ಆದ ಅರ್ಜಿಗಳು	1299	896	1038
ಬಾಕಿಯಿರುವ ಒಟ್ಟು ಅರ್ಜಿಗಳು ಡಿಸೆಂಬರ್ 31	5932	6903	7705
ಕಾರ್ಮಿಕರಿಗೆ ನೀಡಲಾದ ಒಟ್ಟು ಪರಿಹಾರ ಮೊತ್ತ	51947749	40918805	55160485

ಆಧಾರ : ರಾಜ್ಯ ಕಾರ್ಮಿಕ ಇಲಾಖೆಯ ವಾರ್ಷಿಕ ವರದಿಗಳು.

ಕೋಷ್ಟಕ-8 : ಗುತ್ತಿಗೆ ಕಾರ್ಮಿಕ (ನಿಯಂತ್ರಣ ಮತ್ತು ರದ್ಧತಿ) ಕಾಯ್ದೆ– 1970 ರಡಿ ನೊಂದಾವಣೆ ಮತ್ತು ಪರವಾನಗಿ

	2016	2017	2018
ಜನವರಿ 1 ನೊಂದಾವಣೆಯಾದ ಪ್ರಧಾನ ಮಾಲೀಕರು	8377	11081	12075
ವರ್ಷದಲ್ಲಿ ನೊಂದಾಯಿತ ಪ್ರಧಾನ ಮಾಲೀಕರು	824	994	998
ಒಟ್ಟು	9201	12075	13073
ಡಿಸೆಂಬರ್ 31, ರವರೆಗೆ ನೀಡಿದ್ದ ಪರವಾನಗಿ ಗುತ್ತಿಗೆದಾರರು	16193	14762	17247
ವರ್ಷದಲ್ಲಿ ನೀಡಲಾದ ಪರವಾನಗಿ	1957	2485	1957
ಒಟ್ಟು	18150	17247	19204

ಆಧಾರ : ರಾಜ್ಯ ಕಾರ್ಮಿಕ ಇಲಾಖೆಯ ವಾರ್ಷಿಕ ವರದಿಗಳು.

ಕೋಷ್ಟಕ-9 : ರಾಷ್ಟ್ರೀಯ ಕೈಗಾರಿಕೆಗಳ ವಾರ್ಷಿಕ ಸರ್ವೇಕ್ಷಣೆ ವರದಿಯ (ಕಾರ್ಖಾನೆ ವಿಭಾಗ) ಪ್ರಧಾನ ಫಲಿತಾಂಶಗಳು

ನಂ. ಅಂಶಗಳು	ಪ್ರಮಾಣ	2012–13	2013–14	2014–15	2015–16	2016–17
1. ಕಾರ್ಯಚರಿಸುತ್ತಿರುವ ಕಾರ್ಖಾನೆ	ಸಂಖ್ಯೆ	179102	185690	189468	191062	194380
2. ಸ್ಥಿರ ಬಂಡವಾಳ	ಕೋಟಿ	2180260.22	2373719.03	2474454.61	2809647.22	3190386.49
3. ಹೂಡಿದ ಬಂಡವಾಳ	ಕೋಟಿ	3144112.15	3384555.35	3513964.31	3853099.84	4296254.90
4. ಕಾರ್ಮಿಕರು	ಸಂಖ್ಯೆ	10051626	10444404	10755288	11136133	11662947
5. ಒಟ್ಟು ನೇಮಕಗೊಂಡ ಉದ್ಯೋಗಿಗಳು	ಸಂಖ್ಯೆ	12950025	13538114	13881386	14299710	14911189
6. ಕಾರ್ಮಿಕರ ವೇತನ	ಕೋಟಿ	110896.20	126496.44	140484.88	156001.16	173537.16
7. ಒಟ್ಟು ಭತ್ಯೆ	ಕೋಟಿ	238057.27	272415.03	307413.06	339750.74	375163.85
8. ಒಟ್ಟು ಮೌಲ್ಯವರ್ಧನೆ	ಕೋಟಿ	1007279.50	1065111.63	1164702.49	1273279.68	1368050.49
9. ನಿವ್ವಳ ಮೌಲ್ಯವರ್ಧನೆ	ಕೋಟಿ	851948.69	895341.87	975161.72	1072485.09	1145919.11
10. ಸ್ಥಿರ ಆಸ್ತಿ ಮೇಲಿನ ಬಾಡಿಗೆ	ಕೋಟಿ	16421.64	15272.72	17093.61	17747.60	19643.21
11. ಪಾವತಿಸಿದ ಬಡ್ಡಿ	ಕೋಟಿ	138073.27	154850.61	172860.08	182137.36	189401.73
12. ಲಾಭ	ಕೋಟಿ	444262.92	439565.52	460282.99	513193.38	539352.85

ಆಧಾರ : ಕೈಗಾರಿಕೆಗಳ ವಾರ್ಷಿಕ ಸರ್ವೇಕ್ಷಣೆ, ಭಾರತ ಸರ್ಕಾರ (ಕಾರ್ಖಾನೆ ವಲಯ) (2016–17)

ಕೋಷ್ಟಕ-10 : ರಾಷ್ಟ್ರದ ಕಾರ್ಖಾನೆಗಳಲ್ಲಿ ನಿವ್ವಳ ಮೌಲ್ಯವರ್ಧನೆಯಲ್ಲಿ ವೇತನ ಹಾಗೂ ಲಾಭದ ಪಾಲು

ನಂ. ಅಂಶಗಳು	ಪ್ರಮಾಣ	2012–13	2013–14	2014–15	2015–16	2016–17
1. ನಿವ್ವಳ ಮೌಲ್ಯವರ್ಧನೆ	ಕೋಟಿ ರೂ	851948.69	895341.87	975161.72	1072485.09	1145919.11
2. ಲಾಭ	ಕೋಟಿ ರೂ	444262.92	439565.52	460282.99	513193.38	539352.85
	ಶೇಕಡವಾರು	(52.15)	(49.29)	(47.62)	(47.85)	(47.06)
3. ಕಾರ್ಮಿಕರ ವೇತನ	ಕೋಟಿ ರೂ	110896.20	126496.44	140484.88	156001.16	173537.16
	ಶೇಕಡವಾರು	(13.01)	(14.12)	(14.40)	(14.54)	(15.14)

ಆಧಾರ : ಕೈಗಾರಿಕೆಗಳ ವಾರ್ಷಿಕ ಸರ್ವೇಕ್ಷಣೆ, ಭಾರತ ಸರ್ಕಾರ (ಕಾರ್ಖಾನೆ ವಲಯ) (2016–17)

⇨⇨⇨

ಜೆಎನ್‌ಯು ವಿದ್ಯಾರ್ಥಿಗಳ ಮೇಲೆ ಅಮಾನುಷ ಪೋಲೀಸ್ ದಾಳಿ : ಎಸ್‌ಎಫ್‌ಐ ಖಂಡನೆ

ದಿಲ್ಲಿಯಲ್ಲಿ ಜವಹರ್‌ಲಾಲ್ ನೆಹರೂ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಮೇಲೆ ಪೋಲೀಸರ ಅಮಾನುಷ ಕಾರ್ಯಾಚರಣೆಯನ್ನು ಎಸ್‌ಎಫ್‌ಐ ನ ಕೇಂದ್ರೀಯ ಕಾರ್ಯಕಾರೀ ಸಮಿತಿ ಬಲವಾಗಿ ಖಂಡಿಸಿದೆ. ವಿದ್ಯಾರ್ಥಿಗಳು ಹಾಸ್ಟೆಲ್ ಶುಲ್ಕ ಹೆಚ್ಚಳದ ವಿರುದ್ಧ ಸಂಸತ್ತಿನತ್ತ ಶಾಂತಿಯುತವಾಗಿ ಸಾಗಿದ್ದರು. ಮತ್ತೆ-ಮತ್ತೆ ಪ್ರತಿಭಟಿಸಿದರೂ ವಿಶ್ವವಿದ್ಯಾಲಯ ಅವರ ಬೇಡಿಕೆಗಳನ್ನು ಈಡೇರಿಸಿರದ್ದರಿಂದ ಅವರು ಈ ಸಂಸತ್ ಚಲೋ ಪ್ರತಿಭಟನೆಯನ್ನು ಕೈಗೊಂಡಿದ್ದರು.

ಪೋಲೀಸರು ಜೆಎನ್‌ಯು ವಿದ್ಯಾರ್ಥಿ ಸಂಘದ ಅಧ್ಯಕ್ಷರಾದ ಆಯಿಷೇ ಘೋಷ್ ಮತ್ತಿತರ ಪದಾಧಿಕಾರಿಗಳನ್ನು ಬಂಧನದಲ್ಲಿಟ್ಟಿದ್ದಾರೆ, ಎಸ್‌ಎಫ್‌ಐನ ಕೇಂದ್ರೀಯ ಕಾರ್ಯದರ್ಶಿಮಂಡಳಿಯ ಸದಸ್ಯ ನಿತೀಶ್ ನಾರಾಯಣನ್ ರನ್ನೂ ಬಂಧಿಸಿಟ್ಟಿದ್ದಾರೆ. ಎಸ್‌ಎಫ್‌ಐನ ದಿಲ್ಲಿ ರಾಜ್ಯ ಉಪಾಧ್ಯಕ್ಷ ಘೊಗ್ ಅಹ್ಮದ್‌ಗೆ ತೀವ್ರ ಗಾಯಗಳಾಗಿವೆ. ಜೋರ್‌ಬಾಗ್ ಮೆಟ್ರೋ ನಿಲ್ದಾಣದ ಬಳಿ ಪೋಲೀಸರು ವಿದ್ಯಾರ್ಥಿಗಳ ಮೇಲೆ ಅಮಾನುಷ ಲಾಠೀ ಪ್ರಹಾರದಲ್ಲಿ ಹಲವಾರು ವಿದ್ಯಾರ್ಥಿಗಳಿಗೆ ತೀವ್ರ ಗಾಯಗಳಾಗಿವೆ ಎಂದಿರುವ ಎಸ್‌ಎಫ್‌ಐ ಜೆಎನ್‌ಯು ವಿದ್ಯಾರ್ಥಿಗಳ ಹೋರಾಟಕ್ಕೆ ಸಂಪೂರ್ಣ ಬೆಂಬಲ ಮತ್ತು ಸೌಹಾರ್ದವನ್ನು ವ್ಯಕ್ತಪಡಿಸಿದೆ.

ಜೆಎನ್‌ಯು ವಿದ್ಯಾರ್ಥಿಗಳ ಈ ಹೋರಾಟ ಈಗ ಎಲ್ಲರ ಕೈಗೆಟಕುವ ಉನ್ನತ ಶಿಕ್ಷಣವನ್ನು ಪ್ರತಿನಿಧಿಸುವ ಜೆಎನ್‌ಯು ಮಾದರಿಯ ಪರವಾದ ಹೋರಾಟವಾಗುತ್ತಿದೆ. ದೇಶಾದ್ಯಂತ ಮತ್ತು ವಿದೇಶಗಳಿಂದಲೂ ಇದಕ್ಕೆ ಬೆಂಬಲ, ಸೌಹಾರ್ದ ವ್ಯಕ್ತವಾಗುತ್ತಿರುವುದು ಇಂತಹ ಮಾದರಿಯನ್ನು ಕೊನೆಗೊಳಿಸ ಬಯಸುವ ಹಿಂದುತ್ವ ಶಕ್ತಿಗಳ ಪ್ರಯತ್ನಕ್ಕೆ ಸವಾಲು ಹಾಕುತ್ತಿವೆ ●



ಜೆ.ಎನ್.ಯು ನಲ್ಲಿ ಹೆಚ್ಚಿಸಿರುವ ಶುಲ್ಕವನ್ನು ವಾಪಸ್ಸ ಪಡೆಯುವಂತೆ ಆಗ್ರಹಿಸಿ ಪ್ರತಿಭಟನಾ ನಿರತ ವಿದ್ಯಾರ್ಥಿಗಳ ಮೇಲೆ ಕೇಂದ್ರ ಸರಕಾರದ ದೌರ್ಜನ್ಯ ಖಂಡಿಸಿ ಪ್ರತಿಭಟನೆ

ದೆಹಲಿಯ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯವು ದೇಶದ ಹಳೆಯದಾದ ಹಾಗೂ ಹೆಸರುವಾಸಿಯಾದ ವಿಶ್ವವಿದ್ಯಾಲಯವಾಗಿದೆ. ಎಲ್ಲಾ ಸಮುದಾಯದ ವಿದ್ಯಾರ್ಥಿಗಳು ಕಡಿಮೆ ದರದಲ್ಲಿ ಓದಬಹುದಾದ ಏಕೈಕ ವಿಶ್ವವಿದ್ಯಾಲಯ ಇದಾಗಿದೆ. ಆದರೆ ಕಳೆದ ಐದು ವರ್ಷಗಳಿಂದ ಕೇಂದ್ರ ಸರಕಾರದ ಹಸ್ತಕ್ಷೇಪ ಹೆಚ್ಚಾದ ಕಾರಣ ಇಲ್ಲಿಯ ಕಲಿಕೆಯ ವಾತಾವರಣವನ್ನೆ ಹದಗೆಡಿಸಲು ಹುನ್ನಾರ ನಡೆಸುತ್ತಲೇ ಬಂದಿದೆ. ಇತ್ತಿಚೆಗೆ ಕೇಂದ್ರ ಸರಕಾರದ ಶಿಕ್ಷಣದ ವ್ಯಾಪಾರೀಕರಣದ ಭಾಗವಾಗಿ ಜೆಎನ್‌ಯು ಆಡಳಿತ ಮಂಡಳಿ ಏಕಾ ಏಕಿ ಶುಲ್ಕವನ್ನು ಹೆಚ್ಚಳ ಮಾಡಲು ಮುಂದಾಗಿದ್ದನ್ನು ವಿರೋಧಿಸಿ ಅಲ್ಲಿನ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸುತ್ತಿದ್ದಾಗ, ಕೇಂದ್ರ ಸರಕಾರ ಪೊಲೀಸ್ ಬಲವನ್ನು ಬಳಸಿ ವಿದ್ಯಾರ್ಥಿಗಳ ಮೇಲೆ ಜಲ ಫಿರಂಗಿ, ಲಾಠಿಚಾರ್ಜ ಸೇರಿದಂತೆ ನೂರಾರು ಮುಖಂಡರನ್ನು ಬಂಧಿಸಿ ಹೋರಾಟವನ್ನು ಹತ್ತಿಕ್ಕಲು ಪ್ರಯತ್ನಿಸುತ್ತಿದೆ. ಕೇಂದ್ರ ಸರಕಾರದ ಈ ನಡೆಯನ್ನು **SFI , AIDSO, AISF, KVS** ಕರ್ನಾಟಕ ರಾಜ್ಯ ಸಮಿತಿಗಳು ತೀವ್ರವಾಗಿ ಖಂಡಿಸಿದವು.

ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಅಪಾಯಗಳ ಕುರಿತು ಶಿಕ್ಷಣ ತಜ್ಞರು, ಪ್ರಗತಿಪರ ವಿದ್ಯಾರ್ಥಿ ಸಂಘಟನೆಗಳು ಹೇಳುತ್ತಲೇ ಬಂದಿವೆಯಾದರೂ, ಕೇಂದ್ರ ಸರಕಾರ ಕೇಳುವ ಸೌಜನ್ಯ ತೋರಿಸಲೇ ಅಲ್ಲ. ಜೆ.ಎನ್.ಯು ನಲ್ಲಿ ದಿನಂಪ್ರತಿ ದೇಶದ ಆಗು ಹೋಗುಗಳ ಬಗ್ಗೆ ಚರ್ಚೆ ನಡೆಸಲಾಗುತ್ತಿದೆ. ಸರಕಾರದ ಶಿಕ್ಷಣ ವಿರೋಧಿ ನೀತಿಗಳ ವಿರುದ್ಧ ಇಲ್ಲಿಯ ವಿದ್ಯಾರ್ಥಿಗಳು ವ್ಯಾಪಕವಾಗಿ ಪ್ರತಿಭಟನೆ ನಡೆಸುತ್ತಾರೆ. ಇದನ್ನೆ ಗುರಿಯಾಗಿಸಿ ಕೇಂದ್ರ ಸರಕಾರ ಜೆ, ಎನ್,ಯು ಮೇಲೆ ನಿರಂತರ ದಾಳಿ ನಡೆಸುತ್ತಿದೆ. ಕಡಿಮೆ ದರದಲ್ಲಿ ಸಿಗುತ್ತಿದ್ದ ಹಾಸ್ಟೇಲ್ ಊಟದ ದರವನ್ನು ಹೆಚಿಸಲಾಗಿದೆ. ವಿಶೇಷ ಶುಲ್ಕವಾಗಿ 1700, ರೂಮ್ ಬಾಡಿಗೆಗಾಗಿ 600 ಹೆಚ್ಚಳ ಮಾಡಲಾಗಿದೆ. ಈ ಮುಂಚೆ ಮಾಸಿಕವಾಗಿ 2646 ರೂ ಗೆ ಸಿಗುತ್ತಿದ್ದ ಹಾಸ್ಟೇಲ್ ಸೌಲಭ್ಯವನ್ನು 6600 ಗೆ ಹೆಚ್ಚಿಸಲಾಗಿದೆ. ಅಲ್ಲಿರುವ ವಿದ್ಯಾರ್ಥಿಗಳಿಗೆ ಸಿಗುತ್ತಿರುವ ಸಹಾಯದನ ಎಂಸಿ.ಎ 2000, ಎಂಫಿಲ್ 5000, ಸಂಶೋಧನಾ ವಿದ್ಯಾರ್ಥಿಗಳಿಗೆ 8000 ಸಿಗುತ್ತಿದೆ. ಹಾಸ್ಟೆಲ್ ಶುಲ್ಕ ಕಟ್ಟಲು ಈ ವಿದ್ಯಾರ್ಥಿ ವೇತನ ಸಾಕಾಗುವುದಿಲ್ಲ. ಪುಸ್ತಕ ಖರೀದಿಸಲು ಅಥವಾ ಕಾರ್ಯಕ್ಷೇತ್ರಕ್ಕೆ ತೆರಳಲು ವಿದ್ಯಾರ್ಥಿಗಳಿಗೆ ಹಣ ಸಾಕಾಗುವುದಿಲ್ಲ.

ಜೆಎನ್‌ಯು ನ ಶುಲ್ಕ ಹೆಚ್ಚಳ ಮಾಡಬೇಡಿ ಎಂದು ವಿದ್ಯಾರ್ಥಿಗಲು ಕೇಳಿದರೆ ಟ್ಯಾಕ್ಸ್ ಹಣದ ಬಳಕೆ ಬಗ್ಗೆ ಕೇಂದ್ರ ಸರಕಾರ ಮಾತನಾಡುತ್ತದೆ. ಆದರೆ ದೊಡ್ಡ ದೊಡ್ಡ ಉಧ್ಯಮಿಗಳಿಗೆ, ಕಾರ್ಪೋರೇಟ್ ಕಂಪನಿಗಳಿಗೆ 12 ಲಕ್ಷ ಕೋಟಿ ರೂ ತೆರೆಗೆ ಮತ್ತು ಸಾಲ ಮನ್ನಾ ಮಾಡಲಾಗಿದೆ. ಪ್ರಧಾನಿಯವರು 92 ದೇಶಗಳನ್ನು ಸುತ್ತಿ 2021 ಕೋಟಿ ರೂ ಹಣ ಖರ್ಚು ಮಾಡಿದ್ದಾರೆ. ವಿಜಯಮಲ್ಯ, ನೀರವ್ ಮೋದಿ ಮತ್ತಿತರರು ಸಾವಿರಾರು ಕೋಟಿ ರೂ ಸಾಲದ ಹಣವನ್ನು ಬ್ಯಾಂಕಿಗೆ ವಾಪಸ್ಸ ನೀಡದೆ ದೇಶವನ್ನು ತೊರೆದು ವಿದೇಶಕ್ಕೆ ಹಾರಿದಾಗ ಇವರಿಗ್ಯಾರಿಗೂ ಟ್ಯಾಕ್ಸ್ ಹಣ ನೆನಪಿಗೆ ಬರಲೇ ಇಲ್ಲ.

ಹಾಗಾಗಿ ಕೇಂದ್ರ ಸರಕಾರ ಜೆಎನ್‌ಯು ಕುರಿತು ಬೂಟಾಟಿಕೆಯ ಅಪಪ್ರಚಾರಗಳನ್ನು ನಿಲ್ಲಿಸಬೇಕು. ಹೆಚ್ಚಿಸಿರುವ ಎಲ್ಲಾ ಹಂತದ ಶುಲ್ಕವನ್ನು ವಾಪಸ್ಸ ಪಡೆದು ಮೊದಲಿದ್ದ ಶುಲ್ಕವನ್ನೆ ಮುಂದುವರೆಸಬೇಕು. ಬಂಧಿಸಿರುವ ವಿದಾರ್ಥಿಗಳನ್ನು ಬಿಡುಗಡೆ ಮಾಡಿ, ಅವರ ಮೇಲೆ ದಾಖಲಿಸಿರುವ ಎಫ್.ಐ.ಆರ್ ರದ್ದು ಪಡಿಸಬೇಕು. ಹಾಗೂ ವಿದ್ಯಾರ್ಥಿಗಳ ಪ್ರಜಾಸತ್ತಾತ್ಮಕ ಹಕ್ಕುಗಳ ದಮನವನ್ನು ನಿಲ್ಲಿಸಬೇಕು. ಇಲ್ಲವಾದಲ್ಲಿ ವಿದ್ಯಾರ್ಥಿಗಳು ರಾಷ್ಟ್ರವ್ಯಾಪಿ ಹೋರಾಟವನ್ನು ತೀವ್ರಗೊಳಿಸಬೇಕಾಗುತ್ತದೆ ಎಂದು ಪ್ರತಿಭಟನೆ ಮೂಲಕ ಆಗ್ರಹಿಸಿದರು. ●



⇨⇨⇨

ಕೋಷ್ಟಕ-11 : ಕರ್ನಾಟಕ ಮತ್ತು ಭಾರತದಲ್ಲಿ ವಾರ್ಷಿಕ ಪ್ರತಿ ಕಾರ್ಮಿಕನ ಕೊಡುಗೆ ಒಟ್ಟು ಮೌಲ್ಯ, ನಿವ್ವಳ ಮೌಲ್ಯ, ವರ್ಧನೆಗೆ ಹಾಗೂ ವೇತನ ರೂ.ಗಳಲ್ಲಿ

	ಒಟ್ಟು ಮೌಲ್ಯವರ್ಧನೆ	ನಿವ್ವಳ ಮೌಲ್ಯವರ್ಧನೆ	ವೇತನ
ಕರ್ನಾಟಕ	913518	777132	176598
ಭಾರತ	917466	768496	148794

ಆಧಾರ: ಕೈಗಾರಿಕೆಗಳ ವಾರ್ಷಿಕ ಸರ್ವೇಕ್ಷಣೆ, ಭಾರತ ಸರ್ಕಾರ (ಕಾರ್ಖಾನೆ ವಲಯ) (2016-17)

ಕೋಷ್ಟಕ-13 : ಕಾರ್ಮಿಕ ಸಂಘಗಳ ಕಾಯ್ದೆ - 1926

	2016	2017	2018
ನೊಂದಾಯಿತ ಕಾರ್ಮಿಕ ಸಂಘಗಳು ಜನವರಿ 1	4435	4435	4550
ಡಿಸೆಂಬರ್ 31 ರವರಗೆ ನೊಂದಾಯಿತ ಸಂಘಗಳು	132	116	124
ಒಟ್ಟು	4567	4551	4674
ನೊಂದಾವಣಿ ರದ್ದಾದ ಸಂಘಗಳು	–	01	05
ಡಿಸೆಂಬರ್ 31 ರಂದು ಒಟ್ಟು ಸಂಘಗಳು	4567	4550	4669

ಆಧಾರ : ರಾಜ್ಯ ಕಾರ್ಮಿಕ ಇಲಾಖೆಯ ವಾರ್ಷಿಕ ವರದಿಗಳು

ಕೋಷ್ಟಕ-12 : ಕಾರ್ಮಿಕರ ಸಂಖ್ಯೆ ಆಧರಿಸಿ ಕಾರ್ಖಾನೆಗಳ ಶೇಕಡವಾರು ವಿಂಗಡನೆ : ರಾಷ್ಟ್ರ ಮತ್ತು ರಾಜ್ಯದಲ್ಲಿ

ಸಂ.	ಕಾರ್ಮಿಕರ ಸಂಖ್ಯೆ	ರಾಷ್ಟ್ರದಲ್ಲಿ ಶೇಕಡವಾರು		ರಾಜ್ಯದಲ್ಲಿನ ಶೇಕಡವಾರು	
1.	0-14	40.18	82.01	32.66	75.56
2.	15-19	8.78		8.70	
3.	20-29	10.74		12.13	
4.	30-49	10.83		10.75	
5.	50-99	11.48		11.32	
6.	100-199	7.83		7.81	
7.	200-499	5.74		7.39	
8.	500-999	2.24		4.11	
9.	1000-1999	1.19		2.61	
10.	2000-4999	0.68		1.27	
11.	5000ಕ್ಕೂ ಹೆಚ್ಚು	0.31		1.26	

ಆಧಾರ : ಕೈಗಾರಿಕೆಗಳ ವಾರ್ಷಿಕ ಸರ್ವೇಕ್ಷಣೆ, ಭಾರತ ಸರ್ಕಾರ (ಕಾರ್ಖಾನೆ ವಲಯ) (2016-17) ●

JANASHAKTHI KANNADA VARA PATRIKE NOVEMBER 25-DECEMBER 1 , 2019 Price: Rs. 10/- Date of Publication: 22 NOVEMBER 2019 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283

ಮೂರು ವರ್ಷ – ಮೂರು ಸರ್ಕಾರ ಕಾರ್ಮಿಕರಿಗಿಲ್ಲ ಪರಿಹಾರ

ಕೆ.ಎನ್. ಉಮೇಶ್

2016 ಸೆಪ್ಟೆಂಬರ್‌ನಲ್ಲಿ ಕೂಡಲ ಸಂಗಮದಲ್ಲಿ ನಡೆದಿದ್ದ ಸಿಐಟಿಯು 13ನೇ ರಾಜ್ಯ ಸಮ್ಮೇಳನದ ನಂತರದ ಕಾಲಾವಧಿಯ 3 ವರ್ಷಗಳ ರಾಜ್ಯದ ದುಡಿಯುವ ಜನತೆಯ ಪರಿಸ್ಥಿತಿಯನ್ನು ವಿಶ್ಲೇಷಿಸಿರುವ ತುಮಕೂರಿನಲ್ಲಿ 2019 ನವೆಂಬರ್‌ನಲ್ಲಿ ನಡೆದ ಸಿಐಟಿಯು 14ನೇ ರಾಜ್ಯ ಸಮ್ಮೇಳನವು ಸಮಗ್ರ–ಸಮೃದ್ಧ–ಸೌಹಾರ್ದ ಕರ್ನಾಟಕಕ್ಕಾಗಿ ಪಣ ತೊಟ್ಟಿದೆ. ಈ ಮೂರು ವರ್ಷಗಳ ಕಾಲಾವಧಿಯಲ್ಲಿ ಕರ್ನಾಟಕದ ಆಡಳಿತ ನಡೆಸಿದ ಕಾಂಗ್ರೆಸ್, ಕಾಂಗ್ರೆಸ್–ಜೆಡಿ(ಎಸ್) ಮತ್ತು ಇದೀಗಿನ ಬಿಜೆಪಿ ಸರ್ಕಾರಗಳು ದಶಕಗಳ ರಾಜ್ಯದ ಕಾರ್ಮಿಕ ಚಳುವಳಿಯ ಬೇಡಿಕೆಗಳನ್ನು ಪರಿಹರಿಸಿಲ್ಲ ಎಂದಿದೆ.

ಆಂತರಿಕ ಉತ್ಪನ್ನ – ಆರ್ಥಿಕ ನಿಧಾನಗತಿ :

ರಾಜ್ಯದ ಒಟ್ಟಾರೆ ಆಂತರಿಕ ಉತ್ಪನ್ನ ದರವು ರಾಷ್ಟ್ರದ ಆಂತರಿಕ ಉತ್ಪನ್ನ ದರಕ್ಕಿಂತ ಹೆಚ್ಚಿದ್ದರೂ, ರಾಷ್ಟ್ರದ ಆರ್ಥಿಕತೆಯನ್ನು ಕಾಡಿರುವ ಆರ್ಥಿಕ ನಿಧಾನಗತಿ, ರಾಜ್ಯದ ಕೈಗಾರಿಕೆಗಳನ್ನು ಕಾಡಲಾರಂಭಿಸಿದೆ. ಅದರೊಟ್ಟಿಗಿನ ಸತತ ಮೂರು ವರ್ಷಗಳ ಬರ ನೆರೆ ಪರಿಸ್ಥಿತಿಗಳು ಕೃಷಿ ಉತ್ಪನ್ನ ಇಳಿಮುಖಕ್ಕೆ ಕಾರಣವಾಗಿ ಒಟ್ಟಾರೆ ಆರ್ಥಿಕತೆಯ ಮೇಲೆ ಗಂಭೀರ ಪರಿಣಾಮ ಬೀರಲಿದೆ ಎಂದು ವಿಶ್ಲೇಷಿಸಿದೆ.

ಕೈಗಾರಿಕೆಗಳಲ್ಲಿ ಬಲವಂತದ ರಜೆ, ಲೇ–ಆಫ್, ರಿಟ್ರೆಂಚ್‌ಮೆಂಟ್, ಉತ್ಪಾದನೆ ಸ್ಥಗಿತದಂತಹ ಕ್ರಮಗಳ ಪ್ರವೃತ್ತಿ ಹೆಚ್ಚಿರುವಾಗಲೇ, ಸದ್ಯಕ್ಕೆ ಸುಧಾರಿಸುವ ಲಕ್ಷಣಗಳು ಕಂಡು ಬರುತ್ತಿಲ್ಲ. ರಾಜ್ಯದ ಆಂತರಿಕ ಉತ್ಪನ್ನಕ್ಕೆ ಕೃಷಿ ಕೊಡುಗೆ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿರುವಾಗಲೇ, ಕೈಗಾರಿಕೆಯ ಕೊಡುಗೆ ಸ್ಥಗಿತತೆ ಕಾಣುತ್ತಿದೆ, ಆದರೆ ಸೇವಾ ವಲಯದ ಕೊಡುಗೆಯ ಗಾತ್ರ ಹೆಚ್ಚುತ್ತಿದೆ.

ಹೆಚ್ಚುತ್ತಿರುವ ಸಣ್ಣ–ಅತಿಸಣ್ಣ ಹಿಡುವಳಿ :

ಇಂತಹ ಪರಿಸ್ಥಿತಿಯಲ್ಲಿ ರಾಜ್ಯದಲ್ಲಿ ಕೃಷಿ ಭೂಮಿಯಲ್ಲಿನ ಹಿಡುವಳಿಯಲ್ಲಿ ಅತಿ ಸಣ್ಣ ಮತ್ತು ಸಣ್ಣ ಹಿಡುವಳಿದಾರರ ಸಂಖ್ಯೆ ಮತ್ತು ಅವರು ಹೊಂದಿರುವ ಒಟ್ಟು ವಿಸ್ತೀರ್ಣವು ಕಳೆದೆರಡು ದಶಕಗಳಲ್ಲಿ ಹೆಚ್ಚಿದೆ. ಅವರ ಪ್ರಮಾಣವು ಒಟ್ಟು ಹಿಡುವಳಿದಾರರಲ್ಲಿ 76.43 ಶೇಕಡವಾಗಿದೆ. ಅವರು 40 ಶೇಕಡ ಕೃಷಿ ಭೂಮಿಯ ವಿಸ್ತೀರ್ಣ ಹೊಂದಿದ್ದಾರೆ. ನವಉದಾರವಾದಿ ಆರ್ಥಿಕ ನೀತಿ ಆಧಾರಿತ ಕೇಂದ್ರ ರಾಜ್ಯ ಸರ್ಕಾರಗಳ ಕೃಷಿ ನೀತಿಯು ರೈತರ ಬೆಳೆಗಳಿಗೆ ಸಮರ್ಪಕ ಬೆಲೆ ನಿಗದಿ ಮಾಡದ, ಖಾತ್ರಿಪಡಿಸದ ಕಾರಣ, ಕೃಷಿ ಲಾಗವಾಡುಗಳ ಬೆಲೆಗಳು ಹೆಚ್ಚಳವಾಗುತ್ತಿರುವ ಕಾರಣ, ಕೃಷಿ ಲಾಭದಾಯಕವಾಗಿರದೆ ಕೃಷಿಯಿಂದ ವಿಮುಖರಾಗುತ್ತಿರುವ ಕೃಷಿಕರು ನಗರಗಳಿಗೆ ವಲಸೆ ಬರುವ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲೆ ಕೃಷಿಯೇತ್ತರ ಇತರೆ ಕೆಲಸಗಳಲ್ಲಿ ತೊಡಗಿ ಅಸಂಘಟಿತ ಕಾರ್ಮಿಕರಾಗಿ ದುಡಿಯುತ್ತಿರುವ ಪರಿಸ್ಥಿತಿಗಳು ತೀವ್ರಗೊಳ್ಳುತ್ತಿವೆ. ಕೃಷಿ ಕೂಲಿಕಾರರ ಸಂಖ್ಯೆ ಹೆಚ್ಚುತ್ತಿದೆ. ವಾರ್ಷಿಕ ಕೃಷಿ ಕೆಲಸಗಳು ಕಡಿಮೆಯಾಗುತ್ತಿವೆ. ಗ್ರಾಮೀಣ ಉದ್ಯೋಗ ಖಾತ್ರಿ ಮತ್ತು ಸಾಲ ಮನ್ನಾದಂತಹ ಕ್ರಮಗಳು ಅಲ್ಪ ಪರಿಹಾರ ನೀಡುವಂತಿದ್ದರು, ಅವುಗಳ ಜಾರಿಯಲ್ಲಿನ ಅನಿಶ್ಚಿತತೆ, ಅವುಗಳನ್ನು ಸಮರ್ಪಕ ಪರ್ಯಾಯವಾಗದಂತೆ ತಡೆದಿವೆ. ಗ್ರಾಮೀಣ ಕಾರ್ಮಿಕರು ಮತ್ತು ಉದ್ಯೋಗ ಖಾತ್ರಿ ಕಾರ್ಮಿಕರ ಸಂಘಟನೆ ರೈತ–ಕಾರ್ಮಿಕರ ಸಖ್ಯತೆ ಆಧಾರಿತ ಹೋರಾಟ ಚಳುವಳಿ ಪರ್ಯಾಯವಾಗಬೇಕೆಂದಿದೆ.

ರಾಜ್ಯದಲ್ಲಿನ ವಾರ್ಷಿಕ ಕುಟುಂಬ ಆದಾಯ :

ಸಮ್ಮೇಳನ ರಾಜ್ಯದ ಜನತೆಯ ತಲಾ ವಾರ್ಷಿಕ ಆದಾಯವು 2010–11ರ ಸ್ಥಿರ ಬೆಲೆಗಳಲ್ಲಿ 1,29,362 ರೂಗಳಾಗಿದ್ದರೆ, ಚಾಲ್ತಿ ಬೆಲೆಗಳಲ್ಲಿ ಅದು 1,74,551 ರೂ.ಗಳಾಗಿದೆ. ಅಂದರೆ ಕನಿಷ್ಟ ವೇತನ ಲೆಕ್ಕ ಹಾಕಲ್ಪಡುವ ಪ್ರತಿ ಕುಟುಂಬದ 4 ಸದಸ್ಯರಿಗೆ ಇದನ್ನು ಸಮೀಕರಿಸಿ ನೋಡಿದಲ್ಲಿ ಪ್ರತಿ ಕುಟಂಬದ ತಲಾ ವಾರ್ಷಿಕ ಆದಾಯವು 1,74,551 ಥ 4 = 6,98,204 ರೂಗಳಾಗುತ್ತದೆ. ಅಂದರೆ ತಲಾ ಕುಟುಂಬದ ಮಾಸಿಕ ಆದಾಯವು 58,184 ರೂಗಳಾಗುತ್ತದೆ. ಆದರೆ ರಾಜ್ಯ ಸರ್ಕಾರವು ನಿಗದಿ ಮಾಡಿರುವ ಕನಿಷ್ಟ ವೇತನ ಗರಿಷ್ಟವೆಂದರೆ 15 ಸಾವಿರ ರೂಗಳಾಗಿದೆ. ಕಾರ್ಮಿಕ ಸಂಘಟನೆಗಳ 21 ಸಾವಿರ ಮಾಸಿಕ ಸಮಾನ ಕನಿಷ್ಟ ನಿಗದಿಗೆ ಸಮಸ್ಯೆ ಆಗಲಾರದು.

ನಿವ್ವಳ ಮೌಲ್ಯವರ್ಧನೆಯಲ್ಲಿ : ಮಾಲೀಕರ ಲಾಭಕ್ಕೆ ಸಿಂಹಪಾಲು :

ರಾಷ್ಟ್ರದ ಕೈಗಾರಿಕೆಗಳಲ್ಲಿನ ಒಟ್ಟಾರೆ ನಿವ್ವಳ ಮೌಲ್ಯವರ್ಧನೆಯ ಪ್ರತಿ ನೂರು ರೂಗಳಲ್ಲಿ ಕಾರ್ಮಿಕರ ವೇತನದ ಪಾಲು 2016–17 ರಲ್ಲಿ 15.14 ರೂಗಳಾಗಿದ್ದರೆ, ಮಾಲೀಕರ ಲಾಭದ ಪಾಲು 47.06 ರೂಗಳಾಗಿದೆ. 2012–13 ರಿಂದ 2016–17 ರ ನಡುವೆ 2 ಶೇಕಡ ವೇತನದ ಪಾಲು ಹೆಚ್ಚಾಗಿದ್ದರೆ, ಮಾಲೀಕರ ಲಾಭದ ಪಾಲು 5 ಶೇಕಡ ಕಡಿಮೆಯಾಗಿದೆ. ಅಂದರೆ ಮಾಲೀಕರ ಲಾಭದ ಪಾಲಿನಲ್ಲಿ ಕಡಿಮೆಯಾಗಿರುವ 5 ಶೇಕಡದಲ್ಲಿ ಕಾರ್ಮಿಕರ ವೇತನಕ್ಕೆ 2 ಶೇಕಡ ಬಂದಿದ್ದರೆ, ಉಳಿದ 3 ಶೇಕಡದಲ್ಲಿ ಬಹುತೇಕ ಪಾಲು ಬಾಡಿಗೆಗೆ ಹೋಗಿದೆ. ಈ ಬಾಡಿಗೆ ಪ್ರಮಾಣವು ನಗರ ಹಾಗೂ ಗ್ರಾಮಾಂತರ ಕೈಗಾರಿಕಾ ಪ್ರದೇಶಗಳಲ್ಲಿ ಶ್ರೀಮಂತರ ತೈಲಿಗಳನ್ನು ತುಂಬಿಸುತ್ತಿದ್ದು, ಅದರ ಪರಿಣಾಮ ಪ್ರಭಾವಗಳನ್ನು ರಾಜ್ಯ ರಾಜಕಾರಣದ ಮೇಲೂ ಮನಗಾಣಬಹುದಾಗಿದೆ.

ಸಂಘ ಮಾನ್ಯತೆಯಿಲ್ಲ – ಖಾಯಂಯೇತ್ತರರ ಹೆಚ್ಚಳ :

ನಿವ್ವಳ ಮೌಲ್ಯವರ್ಧನೆಯಲ್ಲಿನ ಈ 47 ಶೇಕಡ ಪಾಲನ್ನು ಹೆಚ್ಚಳ ಮಾಡಿಕೊಳ್ಳಲು ಅಥವಾ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಬಂಡವಾಳ ನಡೆಸಿರುವ ಯತ್ನಗಳ ಭಾಗವಾಗಿ ಕಾರ್ಮಿಕ ಸಂಘ ಮಾನ್ಯ ಮಾಡದ, ಗುತ್ತಿಗೆ ಮುಂತಾದ ಖಾಯಂಯೇತ್ತರರ ಸಂಖ್ಯೆ ಹೆಚ್ಚಳಕ್ಕೆ ಯತ್ನಿಸಿವೆ. ಕಾರ್ಮಿಕ ಕಾನೂನುಗಳನ್ನು ಸಂಹಿತಿಕರಣದ ಹೆಸರಿನಲ್ಲಿ ಮಾಲೀಕರ ಪರ ತಿದ್ದುಪಡಿಗೆ ಸರ್ಕಾರಗಳು ಮುಂದಾಗುವಂತೆ ಮಾಡುವಲ್ಲಿ ನಿರತರಾಗಿವೆ. ಹಾಗಾಗಿಯೇ ಕೇಂದ್ರ ಸರ್ಕಾರವು 44 ಕೇಂದ್ರ ಕಾರ್ಮಿಕ



ಕಾನೂನುಗಳನ್ನು 4 ಸಂಹಿತೆಗಳನ್ನಾಗಿ ಮಾಡಲು ಕರಡುಗಳನ್ನು ಪ್ರಕಟಿಸಿದೆ. ವೇತನ ಸಂಹಿತೆಯನ್ನು ಅಂಗೀಕರಿಸಿ ಜಾರಿಗೊಳಿಸಿದೆ. ವೇತನ ಸಂಹಿತೆಯಡಿಯ ನಿಯಮಾವಳಿಗಳಡಿ ಕನಿಷ್ಟ ವೇತನ ನಿಗದಿಯನ್ನು ದಿನದ 9 ಗಂಟೆ ಕೆಲಸಕ್ಕೆ ನಿಗದಿಪಡಿಸಿದೆ. ಇದುವರೆಗಿನ 8 ಗಂಟೆ ಶಾಸನಬದ್ದ ಕೆಲಸದ ಅವಧಿಯನ್ನು ಇಲ್ಲವಾಗಿಸಿದೆ.

ಸ್ಕಿಲ್ ಇಂಡಿಯಾ : ಸ್ಕಿಲ್ ಕರ್ನಾಟಕ :

ಅದೇ ವೇಳೆ ಖಾಯಂ ಸ್ವರೂಪದ ಕೆಲಸಗಳು ಇಲ್ಲದಾಗಿ ಗುತ್ತಿಗೆ, ಅರೆಕಾಲಿಕ, ಖಾಯಂ ಅಲ್ಲದ ಕಾರ್ಮಿಕರಿಂದ ದುಡಿಸಿಕೊಳ್ಳಲು ಕೇಂದ್ರ ಸರ್ಕಾರದ ಮೇಕ್ ಇನ್ ಇಂಡಿಯಾ, ಸ್ಕಿಲ್ ಇಂಡಿಯಾ ಸಹಕಾರಿಯಾಗಿವೆ. ಅದಕ್ಕೆ ಪೂರಕವಾಗಿ ಮೇಕ್ ಇನ್ ಕರ್ನಾಟಕ, ಸ್ಕಿಲ್ ಕರ್ನಾಟಕ ನೀತಿಗಳನ್ನು ರಾಜ್ಯ ಸರ್ಕಾರವು ಆರಂಭಿಸಿದೆ. ಪರಿಣಾಮವಾಗಿ NEEM, NETAP, NEESA ಮುಂತಾದ ಟ್ರೈನಿಗಳು ಕಾರ್ಖಾನೆಗಳಲ್ಲಿ ಹೆಚ್ಚುತ್ತಿದ್ದಾರೆ. ಕೇಂದ್ರ ಸರ್ಕಾರದ ಇತ್ತೀಚಿನ ತಿದ್ದುಪಡಿಯಿಂದಾಗಿ ನಿಗದಿತ ಕಾಲಾವಧಿಯ ಕಾರ್ಮಿಕರು **(FTE)** ಸಹಾ ಕಾರ್ಖಾನೆಗಳಲ್ಲಿ ಹೆಚ್ಚುತ್ತಿದ್ದಾರೆ. ಪರಿಣಾಮ ಒಟ್ಟು ಕಾರ್ಮಿಕರಲ್ಲಿ ಖಾಯಂ ಕಾರ್ಮಿಕರ ಪ್ರಮಾಣ 10 ರಿಂದ 20 ಶೇಕಡಕ್ಕೆ ಸೀಮಿತವಾಗುತ್ತಿದೆ. ಆದ ಕಾರಣವೇ ಸಮ್ಮೇಳನವು ಗುತ್ತಿಗೆ ಮುಂತಾದ ಖಾಯಂಯೇತ್ತರರ ಖಾಯಂಗೆ ಶಾಸನಕ್ಕೆ ಸಮ್ಮೇಳನ ಒತ್ತಾಯಿಸಿದೆ.

ಮಾಲೀಕರ ಪರ ನಿಂತ ಸರ್ಕಾರಗಳು :

ಮೂರು ವರ್ಷಗಳಲ್ಲಿ ಕಾಂಗ್ರೆಸ್, ಜೆಡಿ(ಎಸ್), ಬಿಜೆಪಿ ಸರ್ಕಾರಗಳಿದ್ದರೂ ಸಹಾ ಸಂಘ ಮಾನ್ಯತೆಗೆ ಶಾಸನ ಮತ್ತು ಗುತ್ತಿಗೆ ಮುಂತಾದವರ ಖಾಯಂಗೆ ಶಾಸನಗಳ ಕರಡು 2014ರಲ್ಲಿ ಸಿದ್ದವಾಗಿದ್ದರೂ ಸಹಾ ಶಾಸನ ಅಂಗೀಕರಿಸಿ ಜಾರಿಗೊಳಿಸುತ್ತಿಲ್ಲ. 2009ರಲ್ಲೆ ಸಮಾನ ಕನಿಷ್ಟ ವೇತನ ನಿಗದಿಗೆ ಕನಿಷ್ಟ ವೇತನ ಕಾಯ್ದೆ ಕಲಂ 5(1) (ಎ) ಅಡಿ ತ್ರಿಪಕ್ಷೀಯ ತಜ್ಞರ ಸಮಿತಿ ರಚನೆಯಾಗಿದ್ದರು ಇದುವರೆಗೆ ಅದರ ಸಭೆ ಸೇರಿಸಲು ಸಹಾ ಯತ್ನಿಸದೆ, ಅದನ್ನು ನೆನೆಗುದಿಗೆ ಈ ಕಾಲಾವಧಿಯ ರಾಜ್ಯ ಸರ್ಕಾರಗಳು ತಳ್ಳಿವೆ.

ಹೆಚ್ಚುತ್ತಿರುವ ವಿವಾದಗಳು – ವಿಫಲವಾಗುತ್ತಿರುವ ರಾಜಿಸಂಧಾನ :

ಮೌಲ್ಯವರ್ಧನೆಯಲ್ಲಿನ ಹಂಚಿಕೆಯಲ್ಲಿನ ಮೇಲಿನ ಪ್ರಮಾಣವೇ ಮಾಲೀಕರು ಮತ್ತು ಕಾರ್ಮಿಕರ ನಡುವಿನ ವಿವಾದಗಳು ಹೆಚ್ಚುತ್ತಿರುವುದರ ಹಿಂದಿನ ಪ್ರಧಾನ ಕಾರಣವಾಗಿದೆ. ಅಂತೆಯೇ ವಿವಾದಗಳು ಕಾರ್ಮಿಕ ಇಲಾಖೆಯಲ್ಲಿ ರಾಜಿ ಸಂಧಾನಗಳಲ್ಲಿ ಸಫಲತೆಯಲ್ಲಿ ಅಂತ್ಯವಾಗಿ ಒಪ್ಪಂದವಾಗುವುದು ನಿರಂತರವಾಗಿ ಕಡಿಮೆಯಾಗುತ್ತಾ ಬಂದಿವೆ. ಒಟ್ಟು ವಿವಾದಗಳಲ್ಲಿ ಒಪ್ಪಂದದಲ್ಲಿ ಅಂತ್ಯವಾಗುತ್ತಿರುವ ವಿವಾದಗಳ ಪ್ರಮಾಣ ಶೇ.3 ರಿಂದ 5 ರಷ್ಟು ಮಾತ್ರವಾಗಿವೆ. ಇವುಗಳಲ್ಲಿ 30 ರಿಂದ 40 ಶೇಕಡ ಒಪ್ಪಂದಗಳು ಸಿಐಟಿಯು ನೇತೃತ್ವದ ಸಂಘಗಳಾದಾಗಿದೆ. ಉಳಿದಂತೆ ಶೇಕಡ 95ರಷ್ಟು ವಿವಾದಗಳು ನ್ಯಾಯನಿರ್ಧಾರಣೆಗೆ ಕಾರ್ಮಿಕ ನ್ಯಾಯಾಲಯಗಳು ಮತ್ತು ಕೈಗಾರಿಕಾ ಪ್ರಾಧಿಕಾರಗಳಿಗೆ ಶಿಫಾರಸ್ಸಾಗುತ್ತಿವೆ. ಅಂತೆಯೇ ಕಾರ್ಮಿಕ ನ್ಯಾಯಾಲಯಗಳು ನೀಡುತ್ತಿರುವ ತೀರ್ಪುಗಳನ್ನು ಮಾಲೀಕರು ಜರಿಮಾಡದಿರುವ ಪ್ರಮಾಣವು ಹೆಚ್ಚುತ್ತಿವೆ. ಇದಕ್ಕೆ ಪ್ರಧಾನ ಕಾರಣ ಎಂದರೆ ಕೇಂದ್ರ–ರಾಜ್ಯ ಸರ್ಕಾರಗಳು ವ್ಯವಹಾರಕ್ಕೆ ಪೂರಕ ವಾತಾವರಣ (Ease of doing business) ವನ್ನು ರೂಪಿಸಲು ವಹಿಸುತ್ತಿರುವ ಕ್ರಮಗಳು. ಇದರಿಂದಾಗಿ ಹಾಲಿ ಸರ್ಕಾರಗಳು ಮಾಲೀಕರ ಪರ ಸರ್ಕಾರಗಳಾಗಿ ಹೊರಹೊಮ್ಮಿವೆ. ಈ ಹಿನ್ನೆಲೆಯಲ್ಲಿ ಎಲ್ಲಾ ಜಿಲ್ಲೆಗಳಲ್ಲೂ ಕಾರ್ಮಿಕ ನ್ಯಾಯಾಲಯಗಳ ಸ್ಥಾಪನೆಗೆ ಕ್ರಮವಹಿಸಿ, ನ್ಯಾಯನಿರ್ಣಯಗಳು ವಿಳಂಬವಾಗುವುದನ್ನು ತಡೆಯಲು ಸರ್ಕಾರ ಕ್ರಮವಹಿಸಬೇಕೆಂಬುದು ಸಮ್ಮೇಳನದ ಆಗ್ರಹವಾಗಿದೆ.

ಜಾರಿಯಾಗದ ಕಾರ್ಮಿಕ ಕಾನೂನುಗಳು : ಹೆಚ್ಚುತ್ತಿರುವ ಉಲ್ಲಂಘನೆ :

ಕಾರ್ಮಿಕ ಕಾನೂನುಗಳ ಜಾರಿ ವಿಚಾರದಲ್ಲಿ ಕೇಂದ್ರ ರಾಜ್ಯ ಸರ್ಕಾರಗಳ ಮಾಲೀಕರ ಪರ ನೀತಿಗಳಿಂದಾಗಿ ವಿವಿಧ ಕಾರ್ಮಿಕ ಕಾನೂನುಗಳಡಿ ಹೂಡಲಾದ ಮೊಕದ್ದಮೆಗಳು, ಶಿಕ್ಷೆಗೆ ಒಳಪಟ್ಟ ಪ್ರಕರಣಗಳು ವಿಧಿಸಲ್ಪಟ್ಟ ದಂಡ, ನಡೆಸಲಾದ ತಪಾಸಣೆಗಳು ನಿರಂತರವಾಗಿ ಕಡಿಮೆಯಾಗುತ್ತಾ ಬರುತ್ತಿವೆ. ಅದರ ಫಲಶೃತಿಯಾಗಿ ಕನಿಷ್ಟ ವೇತನ, ಉಪಧನ ಪಾವತಿ ಕಾಯ್ದೆ ಉಲ್ಲಂಘನೆ ವಿರುದ್ಧ ಕಾರ್ಮಿಕರು ಸಲ್ಲಿಸುತ್ತಿರುವ ಅರ್ಜಿಗಳು, ಕಾರ್ಮಿಕರಿಗೆ ನೀಡಲಾಗುತ್ತಿರುವ ಪರಿಹಾರ ಮೊತ್ತಗಳು ಹೆಚ್ಚುತ್ತಿವೆ.

ರಾತ್ರೋರಾತ್ರಿ ಮಾಲೀಕರು ಬದಲು :

ಕಾರ್ಖಾನೆಗಳ ವಿಲೀನ, ಅವಿಲೀನ, ಸ್ವಾಧೀನದ ಪ್ರಕರಣಗಳು ಹೆಚ್ಚುತ್ತಿದ್ದು, ಕಾರ್ಮಿಕರು ರಾತ್ರೋರಾತ್ರಿ ತಾವಿದ್ದ ಕಾರ್ಖಾನೆಗಳು, ಮಾಲೀಕರು ಬದಲಾಗುತ್ತಿರುವುದನ್ನು ಎದುರಿಸಬೇಕಾಗಿ ಬಂದಿದೆ. ಕೇಂದ್ರ ಸರ್ಕಾರವು ರೂಪಿಸಿರುವ ಪಾಪರಿಕೆ ಮತ್ತು ದಿವಾಳಿತನ ಸಂಹಿತೆಯು ಮಾಲೀಕರು ಮಾಡಿರುವ ಸಾವಿರಾರು ಕೋಟಿ ರೂಗಳ ಸಾಲವನ್ನು ನೂರಾರು ಕೋಟಿ ರೂಗಳಾಗಿ ಮಾರ್ಪಡಿಸಿ ಒಂದೆಡೆ ಸಾಲ ಕೊಟ್ಟ ಬ್ಯಾಂಕ್‌ಗಳಿಗೆ ವಂಚಿಸಿ, ಇನ್ನೊಂದೆಡೆ ಕಾರ್ಮಿಕರಿಗೆ ಅವರ ಬೇಡಿಕೆಗಳ ಪಟ್ಟಿ, ಬೋನಸ್, ಭವಿಷ್ಯನಿಧಿ ಮುಂತಾದವನ್ನು ನೀಡದೆ ವಂಚಿಸುವ ಬೆಳವಣಿಗೆಗಳು ರಾಜ್ಯದಲ್ಲಿ ಹೆಚ್ಚುತ್ತಿವೆ.

ಕಾನೂನಿನ ವ್ಯಾಪ್ತಿಯಿಂದ ಹೊರಗುಳಿಯಲಿವೆ ಕಾರ್ಖಾನೆಗಳು :

ಕೇಂದ್ರ ಸರ್ಕಾರವೇ ಪ್ರಕಟಿಸಿರುವ ಅಂಕಿ ಸಂಖ್ಯೆಗಳ ಆಧಾರದಲ್ಲಿ ರಾಷ್ಟ್ರದ 82.01 ಶೇಕಡ ಕಾರ್ಖಾನೆಗಳು ಮತ್ತು ರಾಜ್ಯದ 75.56 ಶೇಕಡ ಕಾರ್ಖಾನೆಗಳಲ್ಲಿ ಕಾರ್ಮಿಕರ ಸಂಖ್ಯೆ 100ಕ್ಕಿಂತ ಕಡಿಮೆವಿರುವ ಕಾರಣ ಕಾರ್ಮಿಕರನ್ನು ಲೇ–ಆಫ್ ಮಾಡಲು, ರಿಟ್ರೆಂಚ್ ಮಾಡಲು, ಕಾರ್ಖಾನೆಗಳನ್ನು ಮುಚ್ಚಲು ಹಾಲಿ ಕೈಗಾರಿಕಾ ವಿವಾದಗಳ ಕಾಯ್ದೆಯಡಿ ಸರ್ಕಾರದ ಅನುಮತಿ ಪಡೆಯಬೇಕಿಲ್ಲ. ಆದರೆ ಇದೀಗ ಕಾರ್ಮಿಕ ಕಾನೂನುಗಳ ಸಂಹಿತಿಕರಣದಲ್ಲಿ 300 ಕಾರ್ಮಿಕರಿದ್ದರು ಅನುಮತಿ ಅಗತ್ಯವಿಲ್ಲ ಎಂದಿರುವ ಕಾರಣ ರಾಜ್ಯದ 90.76 ಶೇಕಡ ಮತ್ತು ರಾಷ್ಟ್ರದ 95.58 ಶೇಕಡ ಕಾರ್ಖಾನೆಗಳು ಲೇ–ಆಫ್, ರಿಟ್ರೆಂಚ್ ಮಾಡಲು ಹಾಗೂ ಕಾರ್ಖಾನೆ ಮುಚ್ಚಲು ಸರ್ಕಾರದ ಅನುಮತಿ ಪಡೆಯಬೇಕಿಲ್ಲ. ಅಂತೆಯೇ ರಾಷ್ಟ್ರದಲ್ಲಿ 48.96 ಶೇಕಡ ಹಾಗೂ ರಾಜ್ಯದಲ್ಲಿ 41.36 ಶೇಕಡ ಕಾರ್ಖಾನೆಗಳು ನೌಕರರ ಭವಿಷ್ಯ ಕಾಯ್ದೆಯಿಂದ ಹೊರಗುಳಿದಿವೆ. ನೂತನ ಸಾಮಾಜಿಕ ಭದ್ರತೆ ಸಂಹಿತೆಯು ಇದನ್ನು ಮತ್ತಷ್ಟು ಹದಗೆಡಿಸಲಿದೆ. ಪರಿಣಾಮವಾಗಿ ಕಾರ್ಮಿಕ ಕಾನೂನುಗಳ ಸಂಹಿತಿಕರಣವು ಮಾಲೀಕರಿಗೆ ವರವಾಗಲಿದೆ. ಕಾರ್ಮಿಕರಿಗೆ ಮಾರಕವಾಗಲಿದೆ.

ಪುಟ 14 ಕ್ಕೆ

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**